# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಅಕ್ಟೋಬರ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೯

ಚಂದಾ ರೂ. ೨೦೦/- (೨೦೧೯ರ ಅಕ್ಟೋ.ನಿಂದ ಸೆಪ್ಟೆಂ. ೨೦೨೦ರವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಅಮೆರಿಕಾಕ್ಕೆ ನಮ್ಮ ಮೋದಿಯವರು ನೀಡಿದ್ದ ಭೇಟಿಯ ಸಮಯದಲ್ಲಿ ವ್ಯಕ್ತವಾಗಿರುವ ಅತ್ಯಂತ ಅಸಭ್ಯ ರಾಜಕಾರಣವು ನಮ್ಮ ಮಾಧ್ಯಮಗಳ ಗಂಭೀರ ಗಮನ ಸೆಳೆಯದಿರುವುದು ರಾಷ್ಟ್ರ ವ್ಯವಸ್ಥೆಯೊಂದರ ನಾಲ್ಕನೇ ಆಧಾರ ಸ್ತಂಭವೆಂದು ಹೇಳಲಾಗುವ ಮಾಧ್ಯಮಗಳು ಮಿಕ್ಕ ಮೂರು ಸ್ತಂಭಗಳಂತೆಯೇ ನಿಧಾನವಾಗಿ ಪ್ರಭುತ್ವದೊಂದಿಗೆ ರಾಜಿ ಮಾಡಿಕೊಂಡು ಅಸೂಕ್ಷ್ಮವಾಗುತ್ತಿರುವ ವಿದ್ಯಮಾನಕ್ಕೆ ಸಾಕ್ಷಿಯಾಗಿದೆ. ಹ್ಯೂಸ್ಟನ್ ನಗರದಲ್ಲಿ ನಡೆದ 'ಹೌಡಿ ಮೋದಿ' ಕಾರ್ಯಕ್ರಮದಲ್ಲಿ ಮೋದಿಯವರು ಮಾಡಿದ 'ಅಗಲೀ ಬಾರ್ ಟ್ರಂಪ್ ಸರ್ಕಾರ್' ಎಂಬ ಘೋಷಣೆ ವಿಶ್ವದ ಯಾವುದೇ ದೇಶ ತಮ್ಮ ವಿದೇಶಾಂಗ ನೀತಿಯನ್ನು ಹೀಗೆ ರಾಜಕೀಯವಾಗಿ ಒತ್ತೆ ಇಟ್ಟ ಪ್ರಸಂಗ ಬಹು ಅಪರೂಪವಷ್ಟೇ ಅಲ್ಲ, ಭಾರತ ತಾನು ಇಷ್ಟು ವರ್ಷಗಳ ಕಾಲ ತನ್ನ ವಿದೇಶಾಂಗ ನೀತಿಯಲ್ಲಿ ಕಾಪಿಟ್ಟುಕೊಂಡು ಬಂದಿದ್ದ ಅನ್ಯ ದೇಶವೊಂದರ ರಾಜಕೀಯ ಮೇಲಾಟಗಳಿಂದ ಸಭ್ಯ ದೂರ ಕಾಯ್ದುಕೊಳ್ಳುವ-ಪವಿತ್ರ ಮೌಲ್ಯವೊಂದರ ಉಲ್ಲಂಘನೆಯಾಗಿದೆ. ಕಳೆದ ಬಾರಿ ಟ್ರಂಪ್ ಆಯ್ಕೆಯಾದ ಪರಿಯೇ ಅನುಮಾನಾಸ್ಪದವಾಗಿದ್ದು, ಅದಕ್ಕಾಗಿ ಅವರಿಗೆ ಆ ದೇಶದ ಸಂಸತ್ತು ವಾಗ್ದಂಡನೆ ವಿಧಿಸುವ ಸಾಧ್ಯತೆ ಇನ್ನೂ ಇಲ್ಲವಾಗದಿರುವಾಗ ಮೋದಿಯವರ ಈ ಘೋಷಣೆ ಇವರ ಜಾಗತಿಕ ರಾಜಕೀಯ ಜಾಲದ ಬಗ್ಗೆಯೇ ಹಲವು ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ. ಹಾಗೇ ಮೋದಿಯವರ ರಾಜಕೀಯ ಶಿಕ್ಷಣದ ಮಟ್ಟವನ್ನು ಕೂಡ ಪ್ರಶ್ನೆ ಮಾಡುವಂತಾಗಿದೆ.

ಕಳೆದ ಬಾರಿಯ ಚುನಾವಣೆಗಳಲ್ಲಿ ಟ್ರಂಪ್ ಆಯ್ಕೆ ಕೂದಲೆಳೆಯ ಅಂತರದಲ್ಲಿ ಆಗಿದ್ದು, ಈ ಬಾರಿ ಅವರು ಮತ್ತೊಮ್ಮೆ ಆಯ್ಕೆಯಾಗಲು ಹೋದ ಬಾರಿ ಅವರ ವಿರುದ್ಧವಿದ್ದ ಅನಿವಾಸ ಭಾರತೀಯರ ಮತ ಬೆಂಬಲ ಅಗತ್ಯವಾಗಿದೆ. ಆ ಬೆಂಬಲವನ್ನು ಅವರು ತಮ್ಮ ಆಡಳಿತ ನೀತಿಗಳ ಮೂಲಕ ಗಳಿಸಿಕೊಳ್ಳಬೇಕಾಗಿರುವಾಗ ಇದರಲ್ಲಿ ಮೋದಿ ಮೂಗು ತೂರಿಸಲು ನಡೆಸಿರುವ ಪ್ರಯತ್ನ ಆಶ್ಚರ್ಯಕರವಷ್ಟೇ ಅಲ್ಲ, ಅಂತಾರಾಷ್ಟ್ರೀಯ ಸಂಬಂಧಗಳ ನೆಲೆಯಲ್ಲಿ ಆಘಾತಕಾರಿಯೂ ಆಗಿದೆ. ಇದರ ಪರಿಣಾಮಗಳನ್ನು ಮುಂದಿನ ದಿನಗಳಲ್ಲಷ್ಟೇ ಕಾಣಬಹುದಾಗಿದೆ.

ಇನ್ನು ಮೋದಿಯವರ ಈ ಓಲೈಕೆಗೆ ಪ್ರತಿಫಲವಾಗಿ ಟ್ರಂಪ್ ಮುಂದಿನ ದಿನ ಪತ್ರಿಕಾಗೋಷ್ಠಿಯೊಂದರಲ್ಲಿ ನೀಡಿರುವ ಹೇಳಿಕೆ ವಿಶ್ವದ ಅತ್ಯಂತ ಆದರ್ಶ ಪ್ರಜಾಪ್ರಭುತ್ವ ಉಳ್ಳ ಬಲಿಷ್ಠ ರಾಷ್ಟ್ರದ ಅಧ್ಯಕ್ಷ ಪದವಿ ಎಂತಹ ರಾಜಕೀಯ ಅನಕ್ಷರಸ್ಥನ ಕೈವಶವಾಗಿದೆ ಎಂಬ ಆತಂಕವನ್ನುಂಟು ಮಾಡುತ್ತದೆ. ಈ ಪತ್ರಿಕಾ ಗೋಷ್ಠಿಯಲ್ಲಿ ಅವರು ಮೋದಿಯನ್ನು 'ಭಾರತದ ತಂದೆ' ಎಂದು ಕರೆದು ಪರಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಇದಕ್ಕೆ ಪೂರಕವಾಗಿ ಅನೈಕ್ಯತೆಯಿಂದ ಬಳಲುತ್ತಿದ್ದ ರಾಷ್ಟ್ರವನ್ನು ಐಕ್ಯಗೊಳಿಸಿದವರು ಮೋದಿ ಎಂಬ ಅವರ ಮಾತು ಭಾರತದ ಚರಿತ್ರೆ ಅಥವಾ ವರ್ತಮಾನದ ಪ್ರಾಥಮಿಕ ಪರಿಚಯವಿಲ್ಲದವರ ಭಂಡ ಮಾತಾಗಿದ್ದು ಈ ಮಾತಿಗೆ ಮೋದಿಯವರ ವಿರೋಧವಂತೂ ಕಾಣಲಿಲ್ಲ. ಬದಲಿಗೆ ಮೌನ ಸಮ್ಮತಿಯೇ ಇದ್ದಂತಿತ್ತು.

ಭಾರತದ ಪ್ರಧಾನ ಧಾರೆಯ ರಾಜಕೀಯ ವೀಕ್ಷಕರು, ತಮ್ಮ ಸಮಯ ಸಾಧಕ ಮುತ್ಸದ್ದಿತನದಲ್ಲಿ ಈ ಹೇಳಿಕೆಗಳನ್ನು ಲಘು ಶೈಲಿಯಲ್ಲಿ ನೀಡಿದ ಹೇಳಿಕೆಗಳೆಂದು ವ್ಯಾಖ್ಯಾನಿಸುತ್ತಿರುವರಾದರೂ, ಭಾರತದೊಳಗಿನ ಬಿಜೆಪಿ ರಾಜಕಾರಣ ಮತ್ತು ಆಡಳಿತ ಹಿಡಿದಿರುವ ದಿಕ್ಕನ್ನು ಗಮನಿಸಿದಾಗ ಈ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸದಿರಲಾಗದು. ಮಹಾತ್ಮ ಗಾಂಧಿಯವರನ್ನು ರಾಷ್ಟ್ರಪಿತ ಸ್ಥಾನದಿಂದ ಪದಚ್ಯುತಗೊಳಿಸುವ ಪ್ರಯತ್ನಗಳು ಸಂಘ ಪರಿವಾರದ ಒಂದು ಸಣ್ಣ ಮೂಲೆಯಿಂದ ಆರಂಭವಾಗಿರುವ ಮತ್ತು ಬಿಜೆಪಿ ನಾಯಕರು ತಮ್ಮ ಭಾಷಣ ಮತ್ತು ನೀತಿಗಳ ಮೂಲಕ ತಮ್ಮ ಯಾವುದೇ ವಾರಸುದಾರಿಕೆ ಇಲ್ಲದ ಭಾರತದ ಆಧುನಿಕ ಚರಿತ್ರೆಯನ್ನು ಜಾಣ ವ್ಯಾಖ್ಯಾನಗಳ ಮೂಲಕ ತಮ್ಮದನ್ನಾಗಿ ಮಾಡಿಕೊಳ್ಳಲು ನಡೆಸಿರುವ ಪ್ರಯತ್ನಗಳನ್ನು ಗಮನಿಸಿದಾಗ ಟ್ರಂಪ್‌ರ ಹೇಳಿಕೆ ಮತ್ತು ಅದಕ್ಕೆ ಮೋದಿಯವರ ಪ್ರತಿಕ್ರಿಯೆ ಯಾರಲ್ಲಾದರೂ ತಲ್ಲಣವನ್ನುಂಟು ಮಾಡುವಂಥಾಗಿದೆ. ಇತ್ತೀಚೆಗೆ ದೇಶದಲ್ಲಿ ಕೇಳಿಬರುತ್ತಿರುವ 'ಒಂದು ದೇಶ-ಒಂದು ಧರ್ಮ, ಒಂದು ಚುನಾವಣೆ, ಎರಡೇ ಪಕ್ಷ' ಎಂಬ ಹುಸಿ ರಾಷ್ಟ್ರೀಯ ಶಿಸ್ತಿನ ಕೂಗು ಭಾರತದ ಈಗಿರುವ ಅರೆಬರೆ ಒಕ್ಕೂಟದ ವ್ಯವಸ್ಥೆಯನ್ನೂ ನಾಶ ಮಾಡುವ ಹವಣಿಕೆಯಂತೆ ಕೇಳಿಸತೊಡಗಿದೆ.

ಬಹುಸಂಖ್ಯಾತ ಜನರಲ್ಲಿ ಅಂಧ ದೇಶಭಕ್ತಿಯ ಮತ್ತೇರಿಸಿ ನಡೆಸಿರುವ ಈ ತೆರೆಮರೆಯ ರಾಜಕಾರಣವನ್ನು ರಾಷ್ಟ್ರೀಯತೆ ಎಂಬ ಶಬ್ದವನ್ನು ತಪ್ಪು ವ್ಯಾಖ್ಯಾನ ಮಾಡುವ ಮೂಲಕ ಮಾಡಲಾಗುತ್ತಿದೆ. ಭಾರತ ರಾಜಕೀಯವಾಗಿ ಎಂದೂ ಒಂದು ರಾಷ್ಟ್ರವಾಗಿರಲಿಲ್ಲ. ಇದು ಹಲವು ರಾಷ್ಟ್ರಗಳ ಒಂದು ಉಪಖಂಡವೇ ಆಗಿ ಮಾನಸಿಕವಾಗಿ ಮಾತ್ರ ಒಂದು ರಾಷ್ಟ್ರವಾಗಿತ್ತು. ನಮ್ಮ ದೀರ್ಘ ಕಾಲದ ಗುಲಾಮಗಿರಿಗೆ ಇದೇ ಪ್ರಮುಖ ಕಾರಣವೆಂದು ಬಗೆದ ನಮ್ಮ ಸ್ವಾತಂತ್ರ್ಯ ಚಳುವಳಿ ನಮ್ಮನ್ನು ರಾಜಕೀಯವಾಗಿ ಒಂದು ರಾಷ್ಟ್ರ ಮಾಡಿದ್ದು ನಿಜ. ಆದರೆ ಅದರ ಸಂವಿಧಾನ ಪ್ರತಿ ರಾಜ್ಯವೂ ತನ್ನ ಚಾರಿತ್ರಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವಷ್ಟು ರಾಜಕೀಯ ಸ್ವಾಯತ್ತತೆಯನ್ನೂ ನೀಡಿತು. ಈ ಸ್ವಾಯತ್ತತೆ ಕ್ರಮೇಣ ಸ್ಥಳೀಯ ಬೇರುಗಳಿಲ್ಲದ ರಾಷ್ಟ್ರೀಯ ನಾಯಕತ್ವದ ಅಧಿಕಾರದ ಹಪಾಹಪಿ ಮತ್ತು ಅದರ ಹಿಂದಿರುವ ಅಖಿಲ ಭಾರತ ವಾಣಿಜ್ಯ ಶಕ್ತಿಗಳ ಕೈವಾಡದಿಂದಾಗಿ ರಾಷ್ಟ್ರೀಯ ಐಕ್ಯತೆ, ಬಲಿಷ್ಠತೆ ಮತ್ತು ಅಭಿವೃದ್ಧಿಯ ಹೆಸರುಗಳಲ್ಲಿ ಕುಂಠಿತವಾಗುತ್ತಾ ಹೋಯಿತು. ಇದರ ಬಹುಪಾಲು ಹೊಣೆಯನ್ನು ಕಾಂಗ್ರೆಸ್ ಹೊರಬೇಕಾಗಿದೆಯಾದರೂ, ಸಗಟು ರಾಷ್ಟ್ರೀಯತೆ ಅಥವಾ ಭಾರತೀಯತೆಯನ್ನು ತನ್ನ ರಾಜಕೀಯ ಮೌಲ್ಯವೊಂದನ್ನಾಗಿ ಮಾಡಿಕೊಂಡಿರುವ ಬಿಜೆಪಿ ಇದನ್ನು ಈಗ ಒಂದು ರಾಜಕೀಯ ಕಾರ್ಯಕ್ರಮವನ್ನಾಗಿ ಇನ್ನಷ್ಟು ದಕ್ಷವಾಗಿ ಜಾರಿ ಮಾಡುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಮೊನ್ನೆ ನಮ್ಮ ವಕ್ರ ಬುದ್ಧಿಜೀವಿಯೊಬ್ಬರು ಹಿಂದಿ ಕಲಿಯುವುದರಿಂದ ಕನ್ನಡಿಗರಿಗೆ ಹೆಚ್ಚಿನ 'ಪ್ರಯೋಜನ'ವಿದೆ ಎಂದು ವಾದಿಸಿದ್ದನ್ನು ಕೇಳಿದಾಗ ನಮ್ಮ ಸಮಸ್ಯೆಯ ಮೂಲ ಎಲ್ಲಿದೆ ಎಂಬುದು ತಿಳಿಯುತ್ತದೆ. ಹೆಚ್ಚಿನ ಪ್ರಯೋಜನದ ಮಾತಾಡುವ ಇವರು ಜನರನ್ನು ಯಂತ್ರಗಳೆಂದು ಪರಿಗಣಿಸಿದಂತಿದೆ. ಮನುಷ್ಯ ತನ್ನೆಲ್ಲ ಅಸ್ಮಿತೆಯನ್ನು ಕಳೆದುಕೊಂಡು ಯಂತ್ರವಾದಾಗ ಮಾತ್ರ ಇಂತಹ ಪ್ರಯೋಜನದ ಮಾತು ಚಾಲ್ತಿಗೆ ಬರಬಲ್ಲುದು. ಸ್ಥಳೀಯತೆಯಲ್ಲಿ ಬೇರುಬಿಟ್ಟ ಅಸ್ಮಿತೆ ಮತ್ತು ಅನನ್ಯತೆಗಳನ್ನು ಕಳೆದಕೊಂಡವರು ಗಾಳಿಯಲ್ಲಿ ತೂರಿಕೊಂಡು ಹೋಗುವ ಕಾಗದದ ಚೂರುಗಳಾಗುತ್ತಾರೆ. ಇಂಥವರು ಹೆಚ್ಚಾಗತೊಡಗಿದಂತೆ ಸಮಾಜ ಮತ್ತು ರಾಷ್ಟ್ರ ಸ್ಥಳೀಯತೆಯನ್ನು ಬಗ್ಗುಬಡಿಯುವ ಪ್ರಯೋಜನವಾದದ ಏಜೆಂಟರುಗಳಾದ ರಾಜಕಾರಣಿಗಳ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತವೆ. ನಮ್ಮ ರಾಷ್ಟ್ರ ಈಗ ಇದರ ಉತ್ತುಂಗ ಸ್ಥಿತಿ ತಲುಪಿದಂತಿದ್ದು, ಕಾಶ್ಮೀರ ನಮ್ಮ ರಾಷ್ಟ್ರದ ಒಂದು ಅವಿಭಾಜ್ಯ ಅಂಗ ಮತ್ತು ಅಲ್ಲಿನ ಜನರೂ ನಮ್ಮ ಸೋದರರೇ ಎಂಬುದನ್ನು ಮರೆತು ಅದನ್ನೊಂದು 'ವಸಾಹತು' ಎಂಬಂತೆ ಸಂಕುಚಿತ ರಾಷ್ಟ್ರಭಕ್ತಿಯ ಆವೇಶದಲ್ಲಿ ಅವರ ನಾಗರಿಕ ಹಕ್ಕು ಮತ್ತು ಸೌಲಭ್ಯಗಳನ್ನು ತಿಂಗಳುಗಟ್ಟಲೆಯಿಂದ ನಿರಾಕರಿಸಲಾಗಿರುವುದನ್ನು ರಾಷ್ಟ್ರ ಮೌನವಾಗಿ ಸಹಿಸುತ್ತಿರುವುದು ಇಡೀ ರಾಷ್ಟ್ರದ ಪ್ರಜಾಸತ್ತೆಯ ಭವಿಷ್ಯದ ದೃಷ್ಟಿಯಿಂದ ಒಂದು ಬಹು ಆತಂಕಕಾರಿ ಬೆಳವಣಿಗೆಯೇ ಆಗಿದೆ. ನಾಗರಿಕ ಹಕ್ಕುಗಳ ಮಂಪರು

**(೩ನೇ ಪುಟಕ್ಕೆ**

## ಕುಪ್ಪಳಿಯಲ್ಲಿ ಅಧ್ಯಯನ ಶಿಬಿರ

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ಈ ನವೆಂಬರ್ ೧೬ ಹಾಗೂ ೧೭ರ ಶನಿವಾರ ಮತ್ತು ಭಾನುವಾರ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಕುಪ್ಪಳಿಯ ಶತಮಾನೋತ್ಸವ ಭವನದಲ್ಲಿ 'ಪರ್ಯಾಯ ಅಭಿವೃದ್ಧಿ ಮಾದರಿ' ಕುರಿತು ಅಧ್ಯಯನ ಶಿಬಿರವನ್ನು ಆಯೋಜಿಸಿದೆ. ಈ ವಿಷಯ ಕುರಿತ ಪರಿಣತರಿಂದ ಉಪನ್ಯಾಸ, ಚರ್ಚೆ ಮತ್ತು ಚಲನಚಿತ್ರ ಪ್ರದರ್ಶನವಿರುತ್ತದೆ. ಎರಡೂ ದಿನಗಳ ಬೆಳಗಿನಿಂದ ಸಂಜೆಯವರೆಗಿನ ಶಿಬಿರದ ಕಾರ್ಯಕಲಾಪಗಳಲ್ಲಿ ಭಾಗವಹಿಸಬಲ್ಲಷ್ಟು ಬಿಡುವಿರುವ ಆಸಕ್ತರು ಶಿಬಿರಾರ್ಥಿಗಳಾಗಿ ಭಾಗವಹಿಸಲು ಈ ಕೆಳಗಿನ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ೧೫ರ ರಾತ್ರಿಯಿಂದ ೧೭ರ ಸಂಜೆವರೆಗಿನ ಊಟೋಪಹಾರ ಮತ್ತು ಸಾಮೂಹಿಕ ವಸತಿಗಾಗಿ ಪ್ರತಿ ಶಿಬಿರಾರ್ಥಿಗೆ ಶಿಬಿರ ಶುಲ್ಕ ರೂ.೨೫೦/- ವಿದ್ಯಾರ್ಥಿಗಳಿಗೆ ರೂ. ೧೫೦/-

**ಸಂಪರ್ಕ ಸಂಖ್ಯೆಗಳು : 9731929731 / 9480141984 / 9845118866**

**ಅಧ್ಯಕ್ಷರು: ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ**

## ನಿಮ್ಮ ಪತ್ರ

**ಪ್ರಿ**ಯ ಸಂಪಾದಕರೇ,

'ಹೊಸ ಮನುಷ್ಯ'ದ ಸೆಪ್ಟೆಂಬರ್ ಸಂಚಿಕೆಯಲ್ಲಿನ ಹರ್ಷ್ ಮಂದರ್, ಮಾಜಿ ಐಪಿಎಸ್ ಅಧಿಕಾರಿ ಸಂಜೀವ ಭಟ್ ಅವರಿಗೆ ಬರೆದಿರುವ ಬಹಿರಂಗ ಪತ್ರ ಮನ ಮಿಡಿಯುವಂತಿದೆ. ದಕ್ಷ, ಪ್ರಾಮಾಣಿಕ ಮತ್ತು ಜನಪರ ಅಧಿಕಾರಿಗಳಿಗೆ ಈ ವ್ಯವಸ್ಥೆಯಲ್ಲಿ ಉಳಿಗಾಲವಿದ್ದಂತೆ ಕಾಣುವುದಿಲ್ಲ. ಜನ ಮಾತ್ರ ಏನೂ ಆಗದಂತೆ ಮೋದಿ ಅಲೆಯ ಮೇಲೆ ತೇಲುತ್ತಿರುವ ಚಿತ್ರ ರಾಷ್ಟ್ರದ ಭವಿಷ್ಯದ ಬಗ್ಗೆ ಆತಂಕ ಹುಟ್ಟಿಸುತ್ತಿದೆ. ಇನ್ನು ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿಯನ್ನು ಮಾಮೂಲಿಗೆ ತರುವ ಕ್ರಮಗಳನ್ನು ಆಗ್ರಹಿಸುತ್ತಾರಾದರೂ, ಸುಧೀಂದ್ರ ಕುಲಕರ್ಣಿಯವರು ೩೭೦ನೇ ವಿಧಿಯನ್ನು ಏಕೆ ರದ್ದುಪಡಿಸುವುದು ಅನಿವಾರ್ಯವಾಗಿತ್ತು ಎಂಬುದನ್ನು ವಿವರಿಸುವುದಿಲ್ಲ. ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಟಿ.ಎಸ್. ವೇಣುಗೋಪಾಲ್ ಬರೆದಿರುವ ಲೇಖನವನ್ನು ಓದಿದರೆ ಈ ಸರ್ಕಾರದಲ್ಲಿ ಆರ್ಥಿಕ ತಜ್ಞರ ತೀವ್ರ ಕೊರತೆ ಇರುವುದು ಎದ್ದು ಕಾಣುತ್ತದೆ.

**-ಬಿ.ಆರ್ ಜಯರಾಮ್,** ಮೈಸೂರು

ಕಳೆದ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯಲ್ಲಿ ಪ್ರಸ್ತಾಪಿಸಿದ ಕಾಶ್ಮೀರ ಸಮಸ್ಯೆಯ ಮಾತು ಮತ್ತು ಸುಧೀಂದ್ರ ಕುಲಕರ್ಣಿಯವರು ಅದೇ ವಿಷಯವಾಗಿ ಬರೆದ ಲೇಖನ ಓದಿದೆ. ಕಾಶ್ಮೀರದ ಸಂಕ್ಷಿಪ್ತ ಇತಿಹಾಸ ಹೇಳುತ್ತ ಪ್ರಸ್ತುತ ಸನ್ನಿವೇಶದಲ್ಲಿ ಮೋದಿಯವರ ನಡೆ ಅನಿವಾರ್ಯ ಎನ್ನುವಂತಹ ಕುಲಕರ್ಣಿಯವರ ಲೇಖನದ ಅಭಿಪ್ರಾಯವೇ ನನ್ನದು ಕೂಡ. ಆದರೆ ಈ ದೊಡ್ಡ ನಿರ್ಧಾರವನ್ನು ಯಾವ ಮಟ್ಟಿಗಿನ ಸಾತ್ವಿಕ ಮಾರ್ಗದಿಂದ ಸರಕಾರ ದಡ ಕಾಣಿಸುತ್ತದೆಂಬ ಬಗ್ಗೆ ನನಗೂ ಲೇಖಕರಂತೆಯೇ ಅನುಮಾನಗಳಿವೆ. ಏಕೆಂದರೆ ಮೋದಿಯ ಸೇಡಿನ ದಾರಿಯ ಬಗ್ಗೆ ಇದೇ ಸಂಚಿಕೆಯಲ್ಲಿ ಹರ್ಷ್ ಮಂದರ್ ಬರೆದ ಶ್ರೀ ಸಂಜೀವ್ ಭಟ್ ಬಗೆಗಿನ ದಟ್ಟ ವಿಷಾದ ಹೊಮ್ಮಿಸುವ ಲೇಖನದ ಉದಾಹರಣೆಯಿದೆ.ಈ ಸರಕಾರದ ಹೊಸ ಶಿಕ್ಷಣ ನೀತಿಯ ಕುರಿತಾಗಿ ಇರುವ ಲೇಖನ ಕೂಡ( ಲೇ: ಜಿ.ಎಸ್ ಜಯದೇವ) ಈ ಸರಕಾರದ ಬಗ್ಗೆ ಅಂತಹ ನಂಬುಗೆಯ ಮಾತನ್ನು ಹೇಳುತ್ತಿಲ್ಲ.ಇಂದು ಯಾವ " ಇಂಡಿಯಾ ಕೇಂದ್ರಿತ" ಎಂಬ ಮಾತೂ ಗಾಂಧಿ ಭಾರತದ್ದಾಗಿ ಇರುವುದಿಲ್ಲವೆಂಬ ಆತಂಕ ಲೇಖನದಲ್ಲಿ ಇರುವಂತೆ ಬಹುತೇಕ ಜನರಲ್ಲೂ ಇದ್ದಂತಿದೆ."ಬೋಟಿಗೊಜ್ಜು" ಬರೆದ ಸಮತಾ ಯುವರಾಜ್ ನನ್ನನ್ನಂತೂ ನಾನು ಎಂದೂ ನೋಡಿರದ ಲೋಕಕ್ಕೇ ಕರೆದೊಯ್ದರು..! ನಿಂತೇ ಹೋದಂಥ ವಾತಾವರಣದ ಅಸಹಾಯಕತೆಯ ಕತ್ತಲಲ್ಲಿ ತಡಕಾಡುತ್ತ ಸಾಗುವವರ " ಮಂಜಣ್ಣನ ಗ್ರಂಥಿಗೆ ಅಂಗಡಿಯಲ್ಲಿ"( ಪವಿತ್ರಾ ಪ್ರಿಯಭಾಷಿಣಿ) ಮತ್ತು ದೇಶದ ಗಂಭೀರ ಅವಸ್ಥೆಯನ್ನು ಸೂಚಿಸುವ " ಚಾಕು ಜಾದುಗಾರ" (ಸತೀಶ್ ಕುಲಕರ್ಣಿ) ಕವನಗಳು ಈ ಕಾಲದ ಪ್ರಸ್ತುತತೆಯನ್ನು ಹೊರಹಾಕುತ್ತವೆ....

ಮಿಕ್ಕಂತೆ ಸುಶಿಯವರ ಹಿರಿಯರ ಬಗ್ಗೆ ಕಾಳಜಿ ಸೂಸುವ ಬರಹ ಮತ್ತು ಹುಚ್ಚಪ್ಪ ಮಾಸ್ತರ ಬಗೆಗಿನ ಲೇಖನಗಳು ಪತ್ರಿಕೆಯ ಸಾಮಾಜಿಕ ಕಾಳಜಿಗೆ ಅನುಗುಣವಾಗಿವೆ.

**-ವಿಜಯೇಂದ್ರ ಪಾಟೀಲ.** ಪೀಚ್ ಟ್ರೀ ಸಿಟಿ,ಅಟ್ಲಾಂಟಾ( ಅಮೇರಿಕಾ)

ತಮ್ಮ (ನಮ್ಮ) ಹೊಸ ಮನುಷ್ಯ ಪತ್ರಿಕೆಯನ್ನು ಕೆಲವಾರು ತಿಂಗಳಿನಿಂದ ಓದುತ್ತಾ ಅತ್ಯಂತ ಸಂತೋಷ ಜೊತೆಗೆ ಒಂದು ಪತ್ರಿಕೆಯನ್ನು ಹೀಗೂ ಮಾಡಬಹುದು ಎಂಬ ಆಶ್ಚರ್ಯ ಹಾಗೂ ಸಂತೃಪ್ತಿಯನ್ನು ಹುಟ್ಟಿಸಿದೆ.

ಸೆಪ್ಟೆಂಬರ್ ತಿಂಗಳ ಪತ್ರಿಕೆ ಕೂಡ, ವಿವಿಧ ಕ್ಷೇತ್ರಗಳ ಹಾಗೂ ಪ್ರಸ್ತುತ ವಿಷಯಗಳ ಅತ್ಯಂತ ಆಳವಾದ ಅಧ್ಯಯನ ಮತ್ತು ಜ್ಞಾನ ಹೊಂದಿರುವ ಲೇಖಕರ ಬರಹಗಳನ್ನು

**(೧೧ನೇ ಪುಟಕ್ಕೆ**

### ಲಕ್ಷ್ಮೀಶ ತೋಳ್ಪಾಡಿಯವರ ಒಂದು ಪ್ರತಿಕ್ರಿಯೆ

'ಹೊಸ ಮನುಷ್ಯ'ದ ವಿಶೇಷ ಸಂಚಿಕೆಯಲ್ಲಿನ ನನ್ನ ಲೇಖನದ ಬಗೆಗೆ ಸಾಸ್ವೆಹಳ್ಳಿ ಶಿವಾನಂದ ಅವರ ಪ್ರತಿಕ್ರಿಯೆಯಲ್ಲಿ- 'ಮಧ್ವರ ಉತ್ಸುಕ ಸಮರ್ಥನೆ' ಮತ್ತು 'ಮನುಷ್ಯರನ್ನು ವಿಭಜಿಸುವ ಯಾವುದೇ ತತ್ವವು ಖಂಡನೀಯ' ಎಂಬ ಮಾತುಗಳು ಬಂದಿವೆ. ಈ ಕುರಿತು ಎರಡು ಮಾತುಗಳು.

'ಜೀವ ತ್ರೈವಿಧ್ಯ' ದ ಪರಿಕಲ್ಪನೆಯು ಮಧ್ವರದೇ ಸೃಷ್ಟಿ ಎಂಬಂತೆ ಕನ್ನಡದ ಸಂದರ್ಭದಲ್ಲಿ ಮಾತುಗಳು ನಡೆದಿವೆ. ಇದು ತಪ್ಪು ತಿಳುವಳಿಕೆ. ಮಧ್ವರು ಓರ್ವ ವ್ಯಾಖ್ಯಾನಕಾರರು. ಉಪನಿಷತ್ತುಗಳಿಂದ ತೊಡಗಿ ಇತಿಹಾಸ-ಪುರಾಣಗಳವರೆಗೆ ಹಬ್ಬಿರುವ ವಿಸ್ತಾರ ವಾಙ್ಮಯದ ವ್ಯಾಖ್ಯಾನಕಾರರು. ಈ ವಾಙ್ಮಯದಲ್ಲಿ ಪ್ರಕಟಗೊಂಡಿರುವ ತಾತ್ವಿಕತೆಯ ಸ್ವರೂಪವನ್ನು ಶೋಧಿಸುವುದು ಅವರ ಉದ್ದೇಶ. ಅವರೋರ್ವ ಎಕಡೆಮೀಶಿಯನ್. ಈಗ ನೋಡಿ. ಪ್ರಕೃತಿಯಲ್ಲಿ ಸತ್ವ, ರಜಸ್ ಮತ್ತು ತಮಸ್ಸು ಎಂಬ ಪರಸ್ಪರ ಭಿನ್ನವಾದ ಮೂರು ಗುಣಗಳು ತುಂಬಿವೆ ಮತ್ತು ಈ ಮೂರು ಗುಣಗಳು ತಮ್ಮೊಳಗೇ ಪರಸ್ಪರ ಹಾಯಿಸುವ ದಟ್ಟ-ತೆಳು ನೆರಳುಗಳ ಸಾವಿರಾರು ಬಗೆಗಳನ್ನು ಎಲ್ಲ ತಾತ್ವಿಕರೂ ಒಪ್ಪಿದ್ದಾರೆ. ಭಗವದ್ಗೀತೆಯಲ್ಲಿ, ಪ್ರಕೃತಿಯಲ್ಲಿರುವ ಈ ಗುಣಗಳೇ ಜೀವರ ಆಂತರಿಕ ಸ್ವಭಾವವಾಗಿ-ಶ್ರದ್ಧೆಯಾಗಿ-ಪರಿಣಮಿಸಿವೆ ಎಂಬ ವಿವರಣೆ ಇದೆ!

ದೇವರ ಮುಂದೆ ಅಥವಾ ನಿಸರ್ಗದ ಮುಂದೆ ಎಲ್ಲರೂ ಸಮಾನರು ಎನ್ನುವ ಮಾತುಗಳನ್ನು ನಾವೆಲ್ಲರೂ ಕೇಳಿದ್ದೇವೆ; ಕೇಳುತ್ತಲೇ ಇದ್ದೇವೆ. ಈ ಮಾತಿನಲ್ಲಿಯೇ ಆ ಎಲ್ಲರೂ ತಮ್ಮ ತಮ್ಮಲ್ಲಿ ಪರಸ್ಪರ ಅಸಮಾನರು ಎನ್ನುವ ಅರ್ಥವೂ ಅಡಗಿದೆಯಲ್ಲವೇ? ಈ ಸೂಕ್ಷ್ಮಗಳನ್ನೆಲ್ಲ ಗಮನಿಸದೆ ಎಲ್ಲವನ್ನೂ ಏಕಾಕಾರವಾಗಿ ಪರಿಗಣಿಸಿ, ಆಂತರಿಕವಾಗಿ ತಾವೇ ಬಹುತ್ವದ ಪರವಿದ್ದರೂ ಆ ಭಾವನೆಯನ್ನು ಹತ್ತಿಕ್ಕಿ, ಟೀಕಿಸತೊಡುಗುವ 'ವಿಸಂಗತಿ'ಯನ್ನು ಗುರುತಿಸುವ ಪ್ರಯತ್ನವು 'ಉತ್ಸುಕ ಸಮರ್ಥನೆ'ಯಾಗಿ ಕಂಡರೆ ಏನು ಮಾಡಲಾದೀತು?

ಕೆಲವು ಮೂಲಭೂತ ಅಂಶಗಳಲ್ಲಿ ನಾವು ಸಮಾನರಾದರೂ, ಅಭಿರುಚಿ; ತಿಳುವಳಿಕೆಯ ಮಟ್ಟ; ಕ್ರಿಯಾಶೀಲತೆ; ಸಂವೇದನೆಯ ಸೂಕ್ಷ್ಮತೆ ಇತ್ಯಾದಿಗಳಲ್ಲಿ ನಾವು ಪರಸ್ಪರ ಭಿನ್ನರೂ ಹೌದು. ಅಂದರೆ ನಾವೆಲ್ಲರೂ ಸಮಾನರೂ ಹೌದು. ವಿಶಿಷ್ಟರೂ ಹೌದು. ನಾವೆಲ್ಲರೂ ಸಮಾನರು ಎನ್ನುವ ಆದರ್ಶೀಕೃತ ಚಿಂತನೆಯು ಸರಿಯಾಗಿ ಅರ್ಥವಾಗಬೇಕಾದರೆ ನಾವೆಲ್ಲರೂ ವಿಶಿಷ್ಟರೂ ಹೌದು ಎನ್ನುವ ವಾಸ್ತವದ ನೆಲೆಯಲ್ಲಿಯೇ. ವಾಸ್ತವವನ್ನು ನಿರಾಕರಿಸಿ ಅಲ್ಲ. ಆದರ್ಶವನ್ನು ನಿರಾಕರಿಸಿದಂತೆ ಕೇಳಿಸುವ ಮಾತು ಜೀವವಿರೋಧಿಯಾಗುವುದಾದರೆ ವಾಸ್ತವವನ್ನು ನಿರಾಕರಿಸಿದಂತೆ ಕೇಳಿಸುವ ಮಾತಿಗೂ ಅದೇ ಅನ್ವಯವಾಗುತ್ತದೆ!

ಆದುದರಿಂದಲೇ-ಯಾವುದರ ಉತ್ಸುಕ ಸಮರ್ಥನೆಯೂ ಬೇಡ. ಉತ್ಸುಕ ನಿರಾಕರಣೆಯೂ ಬೇಡ. ಆಗಲೇ, ನಾವೆಲ್ಲರೂ ಪೂರ್ವಾಗ್ರಹವನ್ನು ಬಿಟ್ಟುಕೊಟ್ಟು ಆಳವಾಗಿ ಚಿಂತಿಸಲು ಸಾಧ್ಯವಾಗುವ ಸನ್ನಿವೇಶವೊಂದು ರೂಪುಗೊಳ್ಳುವುದು. ಇದೇ 'ಹೊಸ ಮನುಷ್ಯ'ದ ಉದ್ದೇಶವೂ ಆಗಿದೆ ಎಂದು ನಾನು ತಿಳಿದಿದ್ದೇನೆ.

ತಮೋಯೋಗ್ಯರು ಎಂಬ ವಿಂಗಡಣೆಯ ಬಗ್ಗೆ ಶಿವಾನಂದರ ಆಕ್ಷೇಪಣೆ ಇದ್ದರೆ ಅವರಿಗೆ ತಿಳಿಸಲು ಇಚ್ಛಿಸುವುದೇನೆಂದರೆ, ತಮೋಯೋಗ್ಯರು ಎಂದರೆ ಕತ್ತಲಿಗೆ ಅಥವಾ ಅಜ್ಞಾನಕ್ಕೆ ಮಾತ್ರ ಅರ್ಹರಾದವರು ಎಂದಲ್ಲ. ಬದಲಿಗೆ ಅದನ್ನು ಸದಾ ಬಯಸುವವರು ಎಂದರ್ಥ. ಮಧ್ವಾಚಾರ್ಯರು ವ್ಯಾಖ್ಯಾನಿಸಿರುವ ಉಪನಿಷತ್ತುಗಳಾಲೀ, ಗೀತೆಯಾಗಲೀ, ಯಾರನ್ನೂ ಮೋಕ್ಷಾಧಿಕಾರಕ್ಕೆ ಅನರ್ಹರೆಂದು ವಿಂಗಡಿಸಿಲ್ಲ. ಅವುಗಳ ಪ್ರಕಾರ ಜಗತ್ತಿನ ಸರ್ವಕ್ಕೂ ಮೋಕ್ಷಾಧಿಕಾರವಿದೆ. ಆದರೆ ಅದು ಸಹಜ ಹಕ್ಕಲ್ಲ. ಬಯಸಿ ಸಾಧಿಸಿಕೊಳ್ಳಬೇಕಾದುದು.

**-ಲಕ್ಷ್ಮೀಶ ತೋಳ್ಪಾಡಿ,** ಪುತ್ತೂರು

# ಪರಿಸರ ರಕ್ಷಣೆ ಮತ್ತು ಯುವ ಜನತೆ

–ಕೆ. ಎಂ. ಪ್ರಸನ್ನ ಕುಮಾರ್



ಈ ವರ್ಷದ ಬೇಸಿಗೆ ಮತ್ತು ಮಳೆಗಾಲ ಎರಡೂ ವೈಪರೀತ್ಯಗಳನ್ನು ದಾಖಲಿಸುವುದರ ಮೂಲಕ ಪರಿಸರ ಅಸಮತೋಲನಗೊಳ್ಳುತ್ತಿದೆ ಎಂಬ ಸೂಚನೆ ನೀಡಿವೆ. ಬೇಸಿಗೆಯ ಅಸಹಜವಾದ ಅತಿಯಾದ ತಾಪಮಾನ ಎಲ್ಲೆಡೆ ಗಾಬರಿ ಸೃಷ್ಟಿಸಿದರೆ, ಮಳೆಗಾಲದಲ್ಲಿ ಹಲವೆಡೆ ಪ್ರಳಯಕಾರಿ ಮಳೆಯಾಗಿ ಪ್ರವಾಹ ಸೃಷ್ಟಿಯಾದದ್ದು ಪರಿಸರದ ಬಗ್ಗೆ ಗಂಭೀರವಾಗಿ ಚಿಂತಿಸುವ ಅಗತ್ಯವಿದೆ ಎಂಬುದನ್ನು ಅರ್ಥಮಾಡಿಸಿವೆ. ಇದೆಲ್ಲದರ ನಡುವೆ ವಿಶ್ವದಾದ್ಯಂತ ನಾವು ಪರಿಸರದ ಮೇಲೆ ಇನ್ನಿಲ್ಲದಂತೆ ಅತ್ಯಾಚಾರ ನಡೆಸುತ್ತಿರುವುದು ಇದಕ್ಕೆ ಕಾರಣ ಎಂಬ ಅಂಶ ಸತ್ಯವಾಗುತ್ತಿರುವ ನಡುವೆ ಅದನ್ನು ತಡೆದು ಉಳಿಸುವ ಮನಸ್ಸು ಮತ್ತು ಬದ್ಧತೆ ಹೊಂದಿರುವ ಅದೆಷ್ಟೋ ಯುವಜನರನ್ನು ಇಂದು ಕಾಣಬಹುದಾಗಿದೆ. ಮಕ್ಕಳು ಮತ್ತು ಯುವಜನರಲ್ಲಿ ಈ ಬಗ್ಗೆ ಜಾಗೃತಿ ಮೂಡುತ್ತಿರುವ ವಿಷಯ ಸಮಾಧಾನಕರ ಅಂದುಕೊಂಡರೂ ಈ ದಿಸೆಯಲ್ಲಿನ ಕೆಲಸ ಸಾಲದು ಎನ್ನುವುದು ಮಾತ್ರ ಸತ್ಯ.

ಕುಡಿಯುವ ನೀರನ್ನು ಕುಡಿಯಲಾಗದ, ಉಸಿರಾಡುವ ಗಾಳಿಯನ್ನು ಸೇವಿಸಲಾಗದ, ತಿನ್ನುವ ಆಹಾರವನ್ನು ತಿನ್ನಲಾಗದ, ಬದುಕಬೇಕಾದ ವಾತಾವರಣ ಆತಂಕಿತ ಸನ್ನಿವೇಶ ಎದುರಿಸುತ್ತಿರುವ ಈ ಸಂದರ್ಭದಲ್ಲಿ, ಇದಕ್ಕೆಲ್ಲಾ ಕಾರಣಕರ್ತರಾಗಿರುವ ನಾವೇ ಪ್ರತಿ ವರ್ಷ ಪರಿಸರ ದಿನ ಆಚರಣೆ ಮಾಡುತ್ತಿರುವುದು ದೊಡ್ಡ ಅಣಕವಾಗಿದೆ. ಇರಬೇಕಾದಷ್ಟು ಹಸಿರಿರದೆ ಉಸಿರಾಡಲು ಸಕಲ ಜೀವಾತ್ಮಗಳೂ ಸಂಕಷ್ಟ ಅನುಭವಿಸುವ ಪರಿಸ್ಥಿತಿ ದಶಕಗಳ ಹಿಂದೆಯೇ ವೇದ್ಯವಾದ ಹಿನ್ನೆಲೆಯಲ್ಲಿ ೧೯೭೪ರಲ್ಲಿ ವಿಶ್ವಸಂಸ್ಥೆಯು ಮೊಟ್ಟ ಮೊದಲ ಬಾರಿಗೆ ಜೂನ್ ೫ ರಂದು ವಿಶ್ವ ಪರಿಸರ ದಿನದ ಆಚರಣೆಗೆ ಮುನ್ನುಡಿ ಬರೆಯಿತು. ಜಲ, ವಾಯು, ಶಬ್ದ ಮುಂತಾದ ವಿವಿಧ ಸ್ವರೂಪದ ಮಾಲಿನ್ಯ, ಜಾಗತಿಕ ತಾಪಮಾನ, ಅರಣ್ಯ ಅಪರಾಧ, ನೈಸರ್ಗಿಕ ಸಂಪನ್ಮೂಲಗಳ ಅನಿಯಮಿತ ಬಳಕೆಯ ವಿರುದ್ಧ ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗೆ ಚಿಂತನೆ ನಡೆಸುವ ಅಗತ್ಯ ಇಂದು ಅನಿವಾರ್ಯವಾಗಿದೆ.

ಜೀವ ವೈವಿಧ್ಯತೆಯ ಸಮತೋಲನ ಕಾಯ್ದುಕೊಂಡಲ್ಲಿ ಮಾತ್ರ ಭೂಮಿಯ ಉಳಿವು ಎನ್ನುವ ಕಠೋರ ಸತ್ಯ ಬಹುತೇಕ ಎಲ್ಲರಿಗೂ ಗೊತ್ತಿರುವಂಥದ್ದೆ ಆದರೂ ಕಾಡು ಮತ್ತು ಕಾಡು ಪ್ರಾಣಿಗಳ ವಿನಾಶ ಮಾತ್ರ ನಿಂತಿಲ್ಲ. ನಾವೇ ಸೃಷ್ಟಿಸಿಕೊಂಡು ಸಾಗಿಸುತ್ತಿರುವ ಆಧುನಿಕ ಶೈಲಿಯ ಸರಂಜಾಮುಶಾಹಿ, ಆತಂಕಕಾರಿಯಾಗಿ ಬಳಕೆಯಾಗುತ್ತಿರುವ ವಿದ್ಯುನ್ಮಾನ ಸರಕುಗಳು, ನೆಲ, ಜಲ ಮತ್ತು ಗಗನದಲ್ಲಿ ಸಂಚರಿಸುವ ಲಕ್ಷಾಂತರ ವಾಹನಗಳು ಮತ್ತು ಎಲ್ಲವೂ ಬೇಕು ಎನ್ನುವ ಜೀವನ ಉಂಟು ಮಾಡುತ್ತಿರುವ ವಿವಿಧ ಮಾಲಿನ್ಯಗಳು ಇಂದು ಅಪಾಯದ ಮಟ್ಟ ಮೀರಿದೆ.

ಜಗತ್ತಿನಾದ್ಯಂತ ತಾಪಮಾನ ಏರಿಕೆಯಾಗುತ್ತಿದೆ. ಧ್ರುವ ಪ್ರದೇಶಗಳ ನೀರ್ಗಲ್ಲುಗಳು ಅಪಾಯದ ಮಟ್ಟದಲ್ಲಿ ಕರಗುತ್ತಿವೆ ಮತ್ತು ಅದರಿಂದಾಗಿ ಸಾಗರಗಳ ನೀರಿನ ಮಟ್ಟ ಹೆಚ್ಚಾಗಿ ಅನೇಕ ಭೂಪ್ರದೇಶಗಳು ಮುಳುಗುವ ಭೀತಿ ಎದುರಾಗಿದೆ. ಜಲಚರಗಳು ಅಳಿವಿನಂಚಿನ ಮಿತಿ ಮೀರುತ್ತಿವೆ. ಅರಣ್ಯ ನಾಶದಿಂದ ಜಲಚಕ್ರದಲ್ಲಿ ವ್ಯತ್ಯಯ ಉಂಟಾಗಿ ಭೂಭಾಗದಲ್ಲಿ ಮಳೆಯ ಪ್ರಮಾಣ ಅತಿ ಹೆಚ್ಚಾಗುವಿಕೆ ಅಥವಾ ತೀವ್ರ ಕೊರತೆ, ಜಲಮೂಲಗಳ ಬತ್ತುವಿಕೆ, ಅಂತರ್ಜಲ ಮಟ್ಟದಲ್ಲಿ ಕುಸಿತ ಮುಂತಾದ ಅದೆಷ್ಟೋ ಅನಾಹುತಗಳನ್ನು ಕಣ್ಣಾರೆ ಕಾಣುವಂತಾಗಿದೆ.

ಕಳೆದ ಫೆಬ್ರುವರಿಯಲ್ಲಿ ಬಿಡುಗಡೆಯಾದ India State of Forest Report ೨೦೧೭ರಲ್ಲಿ ಅತಿಹೆಚ್ಚು ಕಾಡುಗಳ ಭೌಗೋಳಿಕ ಪ್ರದೇಶ ಹೊಂದಿರುವ ಮೊದಲ ಹತ್ತು ರಾಷ್ಟ್ರಗಳಲ್ಲಿ ಭಾರತವೂ ಕೂಡ ಸ್ಥಾನ ಪಡೆದುಕೊಂಡಿದೆ. ಇದನ್ನು ಮೇಲ್ನೋಟಕ್ಕೆ ನೋಡಿದರೆ ಹೆಮ್ಮೆಯಾಗುತ್ತದೆ. ಕಳೆದ ೨೦೧೫ ರ ಇದೇ ವರದಿಯ ಅನುಸಾರ ನಮ್ಮ ದೇಶದಲ್ಲಿ ಶೇ ೨೪.೧೬ ರಷ್ಟಿದ್ದ ಅರಣ್ಯ ಪ್ರದೇಶ ೨೦೧೭ ರ ವರದಿಯಲ್ಲಿ ಶೇ ೨೪.೩೯ ರ ಅಲ್ಪ ಹೆಚ್ಚಳವನ್ನು ದಾಖಲಿಸಿದೆಯಾದರೂ ಒಟ್ಟಾರೆಯಾಗಿ ಒಂದು ರಾಷ್ಟ್ರದ ಬಯಲು ಪ್ರದೇಶದ ಶೇ ೩೩ ರಷ್ಟು ಮತ್ತು ಪರ್ವತ ಪ್ರದೇಶದ ಶೇ ೬೬ ರಷ್ಟು ಅರಣ್ಯ ಪ್ರದೇಶವಿರಬೇಕು ಎನ್ನುವ ಮಾನದಂಡದ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡಿದರೆ ಭಾರತ ಅಪಾಯಕಾರಿ ಹಿನ್ನಡೆಯನ್ನು ಕಾಣುತ್ತಿದೆ.

ನನ್ನ ಆಶಾಭಾವನೆ ಏನೆಂದರೆ, ಇಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿಯೂ ನಾವು ಸದ್ಯದ ಯುವಜನತೆಯ ಮೇಲೆ ನಂಬಿಕೆ ಇರಿಸಬಹುದಾಗಿದೆ. ಹಾಗೂ ಜಾಗತಿಕ ಪರಿಸರದ ರಕ್ಷಣೆ ಮತ್ತು ಸಮತೋಲನ ಕಾಯ್ದುಕೊಳ್ಳುವುದು ಹಿರಿಯರಿಗಿಂತ ಯುವಜನತೆಯ ಮೇಲೆಯೆ ಇದೆ. ಈ ನಡುವೆ ತಮ್ಮಗಳ ಭಾವನೆ ಮತ್ತು ಕೆಲಸದ ವೈಖರಿಯನ್ನು ಅದೆಷ್ಟೋ ಯುವಕರು ಇಂದು ಬದಲಾಯಿಸಿಕೊಂಡಿದ್ದಾರೆ. ಹಲವರು ನಗರದ ಆಧುನಿಕ ಉದ್ಯೋಗಗಳಿಂದ ಬೇಸತ್ತು ಕೃಷಿ ಮಾಡಲು ಹಳ್ಳಿಗಳಿಗೆ ತೆರಳಿದ್ದಾರೆ. ಅಲ್ಲೆಲ್ಲೂ ಪರಿಸರ ಶಿಬಿರಗಳನ್ನು ಮಾಡುವೆವು ಎಂದಾಗ ನಿರೀಕ್ಷಿತ ಸಂಖ್ಯೆಗಿಂತ ಹೆಚ್ಚಿನ ಯುವಕ–ಯುವತಿಯರು ಸೇರುತ್ತಾರೆ, ಸಂವಾದಿಸುತ್ತಾರೆ, ಕೆಲಸ ಮಾಡುತ್ತಾರೆ ಮತ್ತು ಮುಂದಿನ ಈ ರೀತಿಯ ಕಾರ್ಯಕ್ರಮಗಳ ಮಾಹಿತಿ ಪಡೆದು ತಾವು ಮತ್ತೆ ಹಾಜರಾಗಿ ಮತ್ತಷ್ಟು ಮಂದಿ ಸಮಾನ ಮನಸ್ಕ ಯುವಕರನ್ನು ಕರೆತಂದು ಅವರನ್ನೂ ತೊಡಗಿಸುತ್ತಾರೆ. ಆ ಎಲ್ಲರೂ ಅಪರಿಮಿತವಾದ ಪರಿಸರ ಪ್ರಜ್ಞೆಯನ್ನು ಹೊಂದಿ ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಜರುಗುವ ಕ್ಯೂಟೊ ಒಪ್ಪಂದ, ಪ್ಯಾರಿಸ್ ಒಪ್ಪಂದಗಳಲ್ಲಿನ ನಿರ್ಣಯಗಳು ಜಾರಿಗೆ ಬರುವುದು ಅಥವಾ ಬಿಡುವುದನ್ನು ಅನುಮಾನಿಸಿದರೂ ಯುವಜನರು ಈ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗುವುದನ್ನು ಮಾತ್ರ ನಂಬಬಹುದಾಗಿದೆ. ಅದಷ್ಟರ ಮಟ್ಟಿಗೆ ತೃಪ್ತಿ ಪಟ್ಟುಕೊಳ್ಳದೆ ಇನ್ನಷ್ಟು ಮತ್ತಷ್ಟು ಯುವಜನರಿಗೆ ಪರಿಸರ ರಕ್ಷಣೆಯ ದೀಕ್ಷೆ ನೀಡಿ ಅದಕ್ಕೆ ಅಗತ್ಯವಾದ ಜ್ಞಾನ, ಕೌಶಲ, ತಂತ್ರಜ್ಞಾನ ಸೌಕರ್ಯಗಳನ್ನು ಹಿರಿಯರು ಒದಗಿಸಿ ಸೂಕ್ತ ಮಾರ್ಗದರ್ಶನ ನೀಡಿದ್ದಲ್ಲಿ ಅವರಿಂದ ಇನ್ನಷ್ಟು ಬದ್ಧತೆ ನಿರೀಕ್ಷಿಸಬಹುದಾಗಿದೆ. ಇದರ ಜೊತೆಗೆ ಪ್ರತಿ ನಾಗರೀಕ ಭೂಮಿ ಮಾತ್ರ ಜೀವಿಗಳಿಗೆ ವಾಸಯೋಗ್ಯವಾದ ಗ್ರಹ ಎನ್ನುವ ಪರಮ ಸತ್ಯವನ್ನು ಮನಗಂಡು ಈ ನಿಟ್ಟಿನಲ್ಲಿ ಹೊಣೆಗಾರಿಕೆಯಿಂದ ವರ್ತಿಸುವ ಅಗತ್ಯವಿದೆ.



**(ಮೈಸೂರಿನ ಸರ್ಕಾರಿ ಪದವಿ ಕಾಲೇಜೊಂದರಲ್ಲಿ ಇಂಗ್ಲಿಷ್ ಬೋಧಿಸುವ ಪ್ರಸನ್ನಕುಮಾರ್ ಉದಯೋನ್ಮುಖ ಲೇಖಕ ಮತ್ತು ಅಂಕಣಕಾರರೂ ಹೌದು.)**

---

**೧ನೇ ಪುಟದಿಂದ)**

ಎಂದರೆ ಪ್ರಜೆಗಳ ವ್ಯಕ್ತಿತ್ವದ ನಾಶ ಎಂದೇ ಅರ್ಥ. ಪ್ರಜೆ ಪ್ರಭುತ್ವ ಹಾಕಿದ 'ಮೃಷ್ಟಾನ್ನ'ವನ್ನು ತಿನ್ನುತ್ತಾ ರಾಷ್ಟ್ರಭಕ್ತಿಯ ಗೂಟಕ್ಕೆ ಕಟ್ಟಿಹಾಕಿದ ನಾಯಿಯೇ ಆಗುತ್ತಾನೆ. ಅಭಿವೃದ್ಧಿ ಎಂಬ ಮಹಾದಂಧೆಯ ಹೆಸರಲ್ಲಿ ಅವನ ಕಾಲ ಕೆಳಗಿನ ನೆಲವೇ ಕುಸಿಯುತ್ತಿದ್ದರೂ ತಿನ್ನುವ ಅವನ ನಾಲಿಗೆ ಮಾತಾಡಲು ಹೊರಳುವುದಿಲ್ಲ

ಮನುಷ್ಯ ಮೃಗವಾಗಬಲ್ಲ ಈ ದುರಂತ ಸತ್ಯವನ್ನು ತಮ್ಮ 'ಸ್ವ–ರಾಜ್ಯ' ಕಲ್ಪನೆಯ ಮೂಲಕ ಹೇಳಿದ ಗಾಂಧಿಯವರ ೧೫೦ನೇ ಜನ್ಮೋತ್ಸವವನ್ನು ಇಂದಿನ ಸರ್ಕಾರ ನಾಲಿಗೆಯ ಮೇಲೆ ಮಾತ್ರ ಆಚರಿಸುತ್ತಿರುವುದು, ವಿಶ್ವಸಂಸ್ಥೆಯ ಭಾಷಣದಲ್ಲಿ ಮಾತ್ರ ಉಲ್ಲೇಖಿಸುವುದು ಸಹಜವೇ ಆಗಿದೆ. ಆದರೆ ಈ ಹೊತ್ತಿನಲ್ಲಿ ಗಾಂಧಿಯ ಚೈತನ್ಯವನ್ನು ಪುನರುದ್ದೀಪಿಸಬೇಕಾದ ಕರ್ತವ್ಯ ನಿರ್ವಹಿಸಿ ತಾನೇ ಪುನಃಶ್ಚೇತನಗೊಳ್ಳಬಹುದಾದ ಕಾಂಗ್ರೆಸ್ ತನ್ನ ಕೆಲ ನಾಯಕರು ಜೈಲು ಸೇರಿರುವ ಮತ್ತು ಮತ್ತಷ್ಟು ನಾಯಕರು ಸೇರುವ ಭೀತಿಯಲ್ಲಿ ಪ್ರಜ್ಞೆತಪ್ಪಿ ಬಿದ್ದಂತಾಗಿರುವುದು ಮಾತ್ರ ದೇಶದ ಹಿತದೃಷ್ಟಿಯಿಂದ ಒಳಿತಲ್ಲ. ಅದಕ್ಕೆ ವಿವೇಕವಿದ್ದರೆ ಈಗಾಗುತ್ತಿರುವುದು ತನ್ನ ಸ್ವಚ್ಛೀಕರಣ ಎಂದು ಭಾವಿಸಿ ಮರಳಿ ಗಾಂಧಿಯ ಕಡೆ ಹೊರಳಬೇಕು. ಆದರೆ ಹಾಗೆ ಹೊರಳುವಷ್ಟು ಜ್ಞಾನ, ಇಚ್ಛಾಶಕ್ತಿ ಮತ್ತು ತ್ರಾಣ ಅದಕ್ಕೆ ಇದೆಯೇ ಎಂಬುದನ್ನು ಕಾದು ನೋಡಬೇಕಿದೆ.

–ಸಂಪಾದಕ

ಸಮಕಾಲೀನ

# ಪ್ರಿಯ ಕಣ್ಣನ್, ನಾನೂ ಕೂಡ ಅದೇ ಕಾರಣಕ್ಕೆ 'ಜ್ೊಹೋ'ವನ್ನು ಬಿಟ್ಟಿದ್ದೇನೆ!

–ಶರವಣ ರಾಜಾ



ಕಣ್ಣನ್ ಗೋಪಿನಾಥನ್

**ರಾಷ್ಟ್ರದಲ್ಲಿ ಮೂಡುತ್ತಿರುವ ರಾಜಕೀಯ ವಾತಾವರಣದಿಂದ ಉಸಿರುಗಟ್ಟಿದಂತಾಗಿ, ವಿಶೇಷವಾಗಿ ಕಾಶ್ಮೀರ ಕಣಿವೆಯಲ್ಲಿನ ಪರಿಸ್ಥಿತಿಯಿಂದಾಗಿ ಈಗಾಗಲೇ ಇಬ್ಬರು ಯುವ ಅಧಿಕಾರಿಗಳು (ಕರ್ನಾಟಕ ಕೇಡರ್‌ನ ಶಶಿಕಾತ್ ಸೆಂಥಿಲ್ ಮತ್ತು ಕೇರಳ ಕೇಡರ್‌ನ ಕಣ್ಣನ್ ಗೋಪಿನಾಥ್) ತಮ್ಮ ಐಎಎಸ್ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಈಗಾಗಲೇ ೨೦೧೦ರ ಆಡಳಿತ ಸೇವೆ ಪರೀಕ್ಷೆಗಳಲ್ಲಿ ಮೊದಲ ರ್‍ಯಾಂಕ್ ಪಡೆದು ದೆಹಲಿ ಕೇಡರ್ ಆಯ್ದುಕೊಂಡಿದ್ದ ಕಾಶ್ಮೀರದ ಯುವಕ ಶಾ ಫೈಸಲ್ ಅವರು ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ, ಜಮ್ಮು ಕಾಶ್ಮೀರದಲ್ಲಿ ತಮ್ಮದೇ ರಾಜಕೀಯ ಪಕ್ಷ ಸ್ಥಾಪಿಸಿದ್ದು ಅವರೀಗ ಭಾರತ ಸರ್ಕಾರದ ಬಂಧನದಲ್ಲಿದ್ದಾರೆ. ಭಾರತೀಯ ಆಡಳಿತ ಸೇವೆಗೆ ಸೇರಿ ಅಲ್ಲಿ ಏನೂ ಮಾಡಲಾಗದೆ ಭ್ರಮನಿರಸನ ಹೊಂದಿ ಆ ಸೇವೆ ಬಿಟ್ಟು ತಾವೇ ಸಮಾಜ ಸೇವಾ ಕಾರ್ಯಗಳನ್ನು ಆರಂಭಿಸಿರುವ ಐಎಎಸ್ ಅಧಿಕಾರಿಗಳಿಗೆ ನಮ್ಮಲ್ಲೇನೂ ಕೊರತೆ ಇಲ್ಲ. ಅರುಣಾ ರಾಯ್ ಮತ್ತು ಹರ್ಷ ಮಂದರ್ ಇದಕ್ಕೆ ಒಳ್ಳೆಯ ಉದಾಹರಣೆಗಳು. ಕಣ್ಣನ್ ಮತ್ತು ಶಶಿಕಾಂತ್ ಸೆಂಥಿಲ್ ಸೇರಿದಂತೆ ಇವರೆಲ್ಲ ಬಹು ದಕ್ಷ ಮತ್ತು ಜನಸೇವೆಗೆ ಬದ್ಧರಾದ ಅಧಿಕಾರಿಗಳೆಂದು ಹೆಸರಾದವರು. ಹಾಗಾಗಿಯೇ ಅವರು ಬಹುಬೇಗ ಭ್ರಮನಿರಸನ ಹೊಂದಿ ವ್ಯವಸ್ಥೆಯ ವಿರುದ್ಧ ದನಿ ಎತ್ತಿ ಹೊರಬಂದಿದ್ದಾರೆ. ಹಾಗೆ ಮಾಡಲು ಇವರಿಗೆ, ನಾಗರಿಕ ಹಕ್ಕುಗಳ ಬಗ್ಗೆ ಆಳುವವರಿಗಾಗಲೀ, ಜನ ಸಾಮಾನ್ಯರಿಗಾಗಲೀ ಗೌರವವೇ ಇಲ್ಲ ಎಂಬ ಭಾವನೆಯೇ ಕಾರಣವಾಗಿರುವಂತಿದೆ. ಇಂದಿನ ದಿನಗಳಲ್ಲಿ ಹೀಗೆ ವ್ಯವಸ್ಥೆಯ ವಿರುದ್ಧ ಪರೋಕ್ಷ ಪ್ರತಿಭಟನೆಯನ್ನು ದಾಖಲಿಸಿ ಹೊರಬರಲು ಸಾಕಷ್ಟು ಧೈರ್ಯ ಮತ್ತು ತ್ಯಾಗಶೀಲತೆ ಬೇಕು. ಅಂಥವರಲ್ಲಿ ಒಬ್ಬರಾದ, ಕಳೆದ ವರ್ಷ ಕೇರಳದ ಮಹಾಪ್ರವಾಹದ ಸಮಯದಲ್ಲಿ ಅನುಪಮ ಆಡಳಿತ ಸಾಮರ್ಥ್ಯ ಪ್ರದರ್ಶಿಸಿ ಜನರಿಗೆ ನೆರವಾದ ಹೆಗ್ಗಳಿಕೆ ಇರುವ ಕಣ್ಣನ್ ಗೋಪಿನಾಥ್‌ಗೆ ಶರವಣನ್ ಎಂಬುವವರು ಬರೆದಿರುವ ಈ ಪತ್ರ ಇಂದಿನ ರಾಜಕೀಯ ಪರಿಸ್ಥಿತಿಯ ಬಗ್ಗೆಯೂ ಬೆಳಕು ಚೆಲ್ಲುವಂತಿದೆ.–ಸಂ.**



ಶಶಿಕಾಂತ್ ಸೆಂಥಿಲ್

*ನನ್ನನ್ನು ಮತ್ತೆ ಕಡಲ ಮಧ್ಯದಲ್ಲಿರಿಸು,*
*ನಾನು ಹೋರಾಡಿ, ಕಲಿತು, ಹೊಸ ತೀರವನ್ನು ಹುಡುಕುವಂತಾಗಲಿ.*

ಪ್ರಿಯ ಕಣ್ಣನ್ ಗೋಪಿನಾಥನ್,

ಒಂದೆರಡು ದಿನಗಳ ಹಿಂದೆ, ನೀವು ಭಾರತೀಯ ಆಡಳಿತ ಸೇವೆಗೆ(ಐಎಎಸ್) ರಾಜೀನಾಮೆ ನೀಡಿರುವುದನ್ನು ಕುರಿತ ಪತ್ರಿಕಾ ವರದಿಯೊಂದು ನನ್ನ ಕಣ್ಣಿಗೆ ಬಿತ್ತು. ನೀವು ರಾಜೀನಾಮೆಗೆ ಕೊಟ್ಟಿರುವ ಕಾರಣವನ್ನು, 'ಭಕ್ತ'ರು ಮತ್ತು 'ಭಾವೀ ಭಕ್ತ'ರು ಅರಗಿಸಿಕೊಳ್ಳುವುದಕ್ಕೆ ನಿಜಕ್ಕೂ ಬಹಳ ಕಷ್ಟವಾಗುವಂತಿದೆ.

ಒಂದು ಸಂದರ್ಶನದಲ್ಲಿ ನೀವು ಹೇಳಿದಿರಿ, "ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವಗಳಲ್ಲೊಂದಾದ ದೇಶವು, ಒಂದು ಇಡೀ ರಾಜ್ಯದ ಮೇಲೆ ನಿರ್ಬಂಧ ಹೇರಿ, ಆ ಜನರ ಮೂಲಭೂತ ಹಕ್ಕುಗಳನ್ನೂ ಉಲ್ಲಂಘಿಸಿದಾಗ, ನೀನು ಏನು ಮಾಡುತ್ತಿದ್ದೆ ಎಂದು ನನ್ನನ್ನು ಕೇಳಿದರೆ, ಕಡೇ ಪಕ್ಷ ನಾನು ನನ್ನ ಕೆಲಸಕ್ಕೆ ರಾಜೀನಾಮೆ ನೀಡಿದೆ ಎಂದು ಹೇಳುವಂತಾದರೂ ಇರಬೇಕು".

ಸರಿ, ಆದರೆ ಮಾಮೂಲಿ ಬಾಬುಲೋಗ್(ಆಡಳಿತಶಾಹಿಗಳು) ಹೀಗೆ ಮಾತನಾಡುವುದಿಲ್ಲ. ಇದು ತುಂಬ ವಿಭಿನ್ನವಾಗಿ ಕಾಣುತ್ತದೆ ಮತ್ತು ಕೇರಳದಲ್ಲಿ ನೆರೆ ಪರಿಹಾರ ಕೆಲಸದಲ್ಲಿ ತೊಡಗಿದ್ದಾಗ ನೀವು 'ವಿಚಿತ್ರವಾಗಿ' ತೆರೆಮರೆಯಲ್ಲೇ ಇರಲು ಏಕೆ ಬಯಸಿದಿರಿ ಎಂಬುದನ್ನು ಈಗ ಎಲ್ಲರೂ ಅರ್ಥಮಾಡಿಕೊಳ್ಳಬಹುದು.

ಖಂಡಿತವಾಗಿಯೂ ನೀವು ಭಿನ್ನವಾದ ವ್ಯಕ್ತಿ. ನಿಮ್ಮೊಳಗೆ ಮನಸ್ಸಾಕ್ಷಿ ಎಂಬುದು ಇದೆ. ಇತ್ತೀಚಿನ ದಿನಗಳಲ್ಲಿ ಅದನ್ನು ಕಾಣುವುದು ತುಂಬ ಅಪರೂಪ. ವಾರ್ತಾಪತ್ರಿಕೆಗಳಲ್ಲಿಯಾಗಲೀ, ೨೪/೭ ಮಾಧ್ಯಮಗಳಲ್ಲಿಯಾಗಲೀ ಅಥವಾ ತಾವೇ ವಿಧಿಸಿಕೊಂಡ ಸುರಕ್ಷಿತ ಮಿತಿಗಳ ಒಳಗೇ ವ್ಯವಹರಿಸುವ ವಿರೋಧ ಪಕ್ಷಗಳಲ್ಲಿಯಾಗಲೀ ಅದು ಅಷ್ಟಾಗಿ ಕಾಣಸಿಗದು.

ನಿಮ್ಮಂತೆ ಪ್ರಾಮಾಣಿಕತೆಗೆ ಹೆಸರಾದ ಮತ್ತು ಜನರ ಬಗ್ಗೆ ಸಮರ್ಪಣಾ ಮನೋಭಾವವುಳ್ಳ ಒಬ್ಬ ಅಧಿಕಾರಿಯನ್ನು ಕಳೆದುಕೊಳ್ಳುವ ವಿಚಾರದಲ್ಲಿ ಮಾಧ್ಯಮವು, ಅಗತ್ಯವಾಗಿದ್ದಷ್ಟು ಸದ್ದನ್ನೂ ಮಾಡಲು ಸಿದ್ಧವಿಲ್ಲವೆಂಬುದು ಆಶ್ಚರ್ಯದ ವಿಷಯವೇನಲ್ಲ. ಎಷ್ಟೇ ಆದರೂ ನಿಮ್ಮ ಈ ಕ್ರಿಯೆಯ ಕಾರಣವು ಎಲ್ಲರಿಗೂ ಆತ್ಮಸಾಕ್ಷಿಯ ಕರೆಯೇ ಆಗಿದೆ. ಹಾಗಾಗಿ ನಿಮ್ಮ ಸಹೋದ್ಯೋಗಿಗಳ ಮೌನದ ವಿಚಾರದಲ್ಲಿ ಅಥವಾ ಆಡಳಿತವು ನಿಮ್ಮ ಹೆಸರಿಗೆ ಕಳಂಕ ತರುವುದಕ್ಕಾಗಿ ಹಳೆಯ ನೋಟಿಸ್ ಒಂದನ್ನು ಹೆಕ್ಕಿ ತೆಗೆದಿರುವ ವಿಚಾರದಲ್ಲಿ ಆಘಾತಗೊಳ್ಳುವಂಥದ್ದೇನೂ ಇಲ್ಲ.

ನಿಮ್ಮ ಈ ಕ್ರಿಯೆಯ ಪರಿಣಾಮ ಏನು ಮತ್ತು ಮುಂದೆ ಏನಾಗಬಹುದು ಎಂಬ ವಿಚಾರದಲ್ಲಿ ನಿಮಗೆ ಎಷ್ಟು ತಿಳಿದಿದೆ ಎಂಬುದನ್ನೂ ಸಹ ನೀವು ತಿಳಿಸಿದ್ದೀರಿ: "ಇದು ಯಾವ ಪರಿಣಾಮವನ್ನೂ ಉಂಟುಮಾಡದು ಎಂಬುದು ನನಗೆ ತಿಳಿದಿದೆ. ಇದೊಂದು ಅರ್ಧ ದಿನದ ಸುದ್ದಿಯಾಗಬಹುದಷ್ಟೇ. ಆದರೂ ನನಗೆ ಇದನ್ನು ಮಾಡಬೇಕಿತ್ತು. ನನ್ನ ಮನಸ್ಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕಿತ್ತು."

ಅದೊಂದು ಕಠಿಣವಾದ ಸತ್ಯ. ಜಡತ್ವವೇ ನಮ್ಮ ರಾಷ್ಟ್ರೀಯ ಮನೋಭಾವವಾಗಿದೆ.

೩೭೦ ಮತ್ತು ೩೫ ಎ ವಿಧಿಗಳನ್ನು ರದ್ದು ಮಾಡಿದ ಕರಾಳ ದಿನಗಳಲ್ಲಿ ನೀವು ನ್ಯಾಯದ ಪರವಾಗಿ ಎದ್ದು ನಿಂತಿರಿ. ನಿಮ್ಮ ಭಾವನೆಗಳನ್ನು ಸರಳ ನೇರ ಮಾತುಗಳಲ್ಲಿ ವ್ಯಕ್ತಪಡಿಸಿದಿರಿ. "ಜನರನ್ನು ಕೂಡಿಹಾಕಿ, ಇದು ಅವರ ಒಳ್ಳೆಯದಕ್ಕೆ ಎನ್ನುವುದನ್ನು ಸಮರ್ಥಿಸಿಕೊಳ್ಳುವುದು ಕಷ್ಟ".

ಅದು ಬಹಳ ಜನರನ್ನು ಬಾಧಿಸುವುದಿಲ್ಲ ಮತ್ತು ಬಹಳ ಜನ ನಿಮ್ಮೊಂದಿಗೆ ಸಹಮತ ಹೊಂದಿಲ್ಲ ಎಂದಾದರೆ ಅದು ಆಳವಾದ ಕೇಡೊಂದು ಮೂರ್ತೀಭವಸಿದಂತೆ. ಸಮಾಜದ ಬಹುಸಂಖ್ಯಾತರು ತಮ್ಮ ನೈತಿಕ ದಿವಾಳಿಯ ಬಗ್ಗೆ ಯಾವುದೇ ರೀತಿಯಲ್ಲಿ ಮುಜುಗರಪಡದೆ ಇದ್ದರೆ, ಅದು ನಾವು ಎಂತಹ ಅಪಾಯಕಾರಿ ಕಾಲದಲ್ಲಿ ಬದುಕಿದ್ದೇವೆ ಎಂಬುದರ, ಮತ್ತು ಮುಂದೆ ಏನು ಕಾದಿದೆ ಎಂಬುದರ ಸ್ಪಷ್ಟ ಸೂಚನೆ.

ಒಂದು ವರ್ಷದ ಹಿಂದೆ ಸರಿಯಾಗಿ ಇದೇ ದಿನ, 'ಜ್ೊಹೋ' ಎಂಬ ಭಾರತದ ಜನಪ್ರಿಯ ಸಾಫ್ಟ್‌ವೇರ್ ಉತ್ಪಾದನಾ ಕಂಪನಿಯನ್ನು ಬಿಡಲು ಕಾರಣವಾದ, 'ಅಭಿವ್ಯಕ್ತಿ ಸ್ವಾತಂತ್ರ್ಯದ' ಬಗೆಗಿನ ನನ್ನ ಅನುಭವವನ್ನು ಹಂಚಿಕೊಳ್ಳಬಯಸುತ್ತೇನೆ. ಶುರುವಿಗೆ, ೨೦೧೭ರಲ್ಲಿ 'ಗೂಗಲ್ ಮೆಮೋ' ಎಂದು ಕರೆಯಲ್ಪಡುವ, ಇಂಟ್ರಾನೆಟ್ ಪೋಸ್ಟ್(ಮೂಲಭೂತವಾಗಿ ಬಲಪಂಥೀಯ ದೃಷ್ಟಿಕೋನದ)ನಿಂದಾಗಿ ಗೂಗಲ್ ಕಂಪನಿಯಿಂದ ಉಚ್ಚಾಟಿಸಲ್ಪಟ್ಟ ಜೇಮ್ಸ್ ಡೆಮೋರ್‌ನ ಉದಾಹರಣೆಯೊಂದಿಗೆ ಪ್ರಾರಂಭಿಸಬೇಕು.

ಜ್ೊಲೋ ಕಂಪನಿಯ ಸಿಇಓ, ಶ್ರೀಧರ ವೇಂಬು, ಜೇಮ್ಸ್ ಅವರ ಅಭಿವ್ಯಕ್ತಿ ಸ್ವಾತಂತ್ರ್ಯ ಹೇಗೆ ದಾಳಿಗೆ ಒಳಗಾಗಿದೆ, ಅವರ 'ಚಿಂತನಾ ಅಪರಾಧ'ಕ್ಕಾಗಿ ಅವರನ್ನು ಕೆಲಸದಿಂದ ತೆಗೆದುಹಾಕುವುದು ಹೇಗೆ ತಪ್ಪಾಗುವುದು ಎಂದು ಜೇಮ್ಸ್ ಅವರ ಸಮರ್ಥನೆಯಲ್ಲಿ ಒಂದು ದೀರ್ಘ ಪತ್ರವನ್ನು ಇಂಟ್ರಾನೆಟ್‌ನಲ್ಲಿ ಬರೆದದ್ದಲ್ಲದೇ, ಅದನ್ನು ಅವರು 'ಸಿಲಿಕಾನ್ ಕಣಿವೆಯ ಮಾವೋವಾದ' ಎಂದೂ ಕರೆದರು ಮತ್ತು 'ಖಾಸಗಿ ಉದ್ದಿಮೆಯನ್ನು ನಾನು ಬೆಂಬಲಿಸುವುದು, ನಿಜವಾದ ದೃಷ್ಟಿಕೋನ ವೈವಿಧ್ಯತೆಯ ಖಾತರಿಗಾಗಿ' ಎಂದು ತಮ್ಮ ಅಭಿಪ್ರಾಯಗಳನ್ನು ಕೊನೆಗೊಳಿಸಿದ್ದರು.

ನಾನು ಅವರ ಬ್ಲಾಗ್ ಪೋಸ್ಟನ್ನು ಇತರ ಉದ್ಯೋಗಿಗಳು ಓದುವ ಹಾಗೆಯೇ

ಓದುತ್ತಿದ್ದೆ. ಜೇಮ್ಸ್ ಡೆಮೋರ್ ಅವರ ಅಭಿಪ್ರಾಯಕ್ಕೆ ನನ್ನ ಪ್ರಬಲ ಭಿನ್ನಾಭಿಪ್ರಾಯವಿದ್ದರೂ, ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಶ್ರೀಧರ್ ಅವರ ಅಭಿಪ್ರಾಯ ಸರಿ ಎಂಬುದು ನನ್ನ ನಿಲುವಾಗಿತ್ತು. ಆದರೆ, ಒಂದು ವರ್ಷದ ನಂತರ ನನಗೆ ಜೊಹೋ ಮೆಮೋ ದೊರೆಯಬಹುದು ಅಥವಾ ತಾತ್ವಿಕ ಎಕೋ ಛೇಂಬರ್ ಘಳಿಗೆ ಬರಬಹುದು ಎಂಬ ಕಲ್ಪನೆಯೇ ಆಗ ಇರಲಿಲ್ಲ.

ನಾನೀಗ ನೇರವಾಗಿ ೨೦೧೮ರ ಅಗಸ್ಟ್ ತಿಂಗಳಿಗೆ ಬರುತ್ತೇನೆ. ಆ ಸಮಯಕ್ಕೆ ನಾನು ಜೊಹೋದಲ್ಲಿ ಹತ್ತು ವರ್ಷಗಳನ್ನು ಕಳೆದಿದ್ದೆ. ಸ್ವಾತಂತ್ರ ದಿನದ ಸಂದರ್ಭದಲ್ಲಿ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆರ್.ಎಸ್.ಎಸ್ ನ ಪಾತ್ರವನ್ನು ಕುರಿತಂತೆ ಇಂಟ್ರಾನೆಟ್ ಬ್ಲಾಗ್ ಪೋಸ್ಟ್ ಒಂದನ್ನು ಬರೆದಿದ್ದೆ. ಆ ಪೋಸ್ಟ್‌ನಲ್ಲಿ, ಆರ್ ಎಸ್.ಎಸ್. ಹೇಗೆ ರಣಸ್ಫೂರ್ತಿ ಪ್ರದರ್ಶಿಸುತ್ತ ಪ್ರತಿಯೊಂದು ವೇದಿಕೆಯನ್ನೂ ಆಕ್ರಮಿಸುತ್ತಿದೆ; ಆದರೆ ಅವರು ಎಂತಹ ದೇಶಾಭಿಮಾನಿಗಳು ಎಂಬ ವಿಚಾರದಲ್ಲಿ ಇತಿಹಾಸವು ತಿಳಿಸುವುದೇ ಬೇರೆ ಎಂಬ ವಿಚಾರವನ್ನು ತಿಳಿಸಿದ್ದೆ.

ನಿರೀಕ್ಷಿಸಿದ ಹಾಗೆ ಕೆಲವು ಬಲಪಂಥೀಯ ಬೆಂಬಲಿಗರಿಂದ ಕೆಲ ಉಗ್ರ ಪ್ರತಿಕ್ರಿಯೆಗಳೂ ಬಂದವು. ಆದರೆ ಶ್ರೀಧರ್ ಅವರ ಉತ್ತರ ಮಾತ್ರ ನನಗೆ ಬರಸಿಡಿಲಿನ ಹಾಗೆ ಬಡಿಯಿತು. ನನ್ನ ಪೋಸ್ಟ್, ಐತಿಹಾಸಿಕ ಸುಳ್ಳು ಮತ್ತು ಮಿಥ್ಯಾಪವಾದವನ್ನು ಹರಡುವುದಕ್ಕಾಗಿ, ಮಿತಿಯ ಬಹುಮುಖ್ಯ ಗಡಿಯೊಂದನ್ನು ಮೀರಿದೆ ಎಂದು ಅವರು ಹೇಳಿದರು. ನನ್ನ ಪೋಸ್ಟ್‌ನಲ್ಲಿ ಶಂಸುಲ್ ಇಸ್ಲಾಂ ಮತ್ತು ಪವನ್ ಕುಲಕರ್ಣಿಯವರ ಎರಡು ಲೇಖನಗಳನ್ನು ಉಲ್ಲೇಖಿಸಿದ್ದೆ. ಈ ಈರ್ವ ಲೇಖಕರೂ ತಮ್ಮ ಆಳವಾದ ಸಂಶೋಧನೆಗೆ ಹೆಸರಾದವರು. ಆದರೆ, ಎಲ್ಲರಿಗೂ ಖುಷಿ ನೀಡುವಂಥವರೇನಲ್ಲ.

ಶ್ರೀಧರ್ ಅವರು ಮುಂದುವರಿದು 'ನೀವು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಏನು ಬೇಕಾದರೂ ಹೇಳಲಾಗದು... ನಿಮ್ಮ ಮೌಲ್ಯಗಳನ್ನು ಹರಡುವುದಕ್ಕೆ ನಿಮ್ಮದೇ ವೇದಿಕೆಯನ್ನು ನಿರ್ಮಾಣ ಮಾಡಿಕೊಳ್ಳಿ. ನಾನು ನಿಮ್ಮನ್ನು ಕೆಲಸದಿಂದ ವಜಾ ಮಾಡುವುದಿಲ್ಲ. ಆದರೆ ನನಗೆ ನಿಮ್ಮ ಜೊತೆ ಪ್ರಬಲವಾದ ಭಿನ್ನಾಭಿಪ್ರಾಯವಿದೆ ಮತ್ತು ನಿಮ್ಮ ಅಭಿಪ್ರಾಯಗಳು ನಿಮ್ಮ ಕಂಪನಿ ಮತ್ತು ಅದರ ಸಿಇಓಗಳ ನಂಬಿಕೆಗಳಿಗೆ ಅಷ್ಟೊಂದು ವಿರುದ್ಧವಾಗಿರುವಾಗ ನೀವು ಇಲ್ಲಿ ಕೆಲಸ ಮಾಡಲು ಏಕೆ ಬಯಸುವಿರಿ?' ಎಂದು ಪ್ರಶ್ನಿಸಿದ್ದರು.. ವಿಪರ್ಯಾಸ ಏನೆಂದರೆ, ಅವರು ಜೇಮ್ಸ್ ಡೆಮೋರ್‌ರ ವಿಚಾರದಲ್ಲಿ ಅದೇ ವಾಕ್ ಸ್ವಾತಂತ್ರ್ಯದ ಬಗ್ಗೆ, ಖಾಸಗಿ ಉದ್ದಿಮೆಗಳ ಬಗ್ಗೆ, ಚಿಂತನಾ ಅಪರಾಧಗಳ ಬಗ್ಗೆ (ಮಿತಿಗಳನ್ನು ದಾಟುವ) ಮಾತನಾಡಿದ್ದರು. ವಾಹ್, ಈ ಬಾರಿ ಸಂಪೂರ್ಣವಾಗಿ ವಿರುದ್ಧ ದಿಕ್ಕಿನಲ್ಲಿ. ಇಲ್ಲಿ ಒಪ್ಪಲಾಗದ ವಿಚಾರವೇನೆಂದರೆ ಅವರು ಅದನ್ನು ಬಲವಂತದಿಂದ ಕಂಪನಿಯ ಮೌಲ್ಯಗಳ ಜೊತೆ ಸಾಂದರ್ಭೀಕರಿಸಲು ಪ್ರಯತ್ನಿಸಿದ್ದು. ನನಗೆ ಅವರ ವ್ಯಾಖ್ಯಾನದ ಒಂದು ವಿಚಾರದಲ್ಲಿ, ಅಂದರೆ ನಮ್ಮ ಮೌಲ್ಯಗಳು ನಮಗೆ ಹಣಕ್ಕಿಂತ ಹೆಚ್ಚು ಮುಖ್ಯವಾಗಬೇಕು ಎಂಬ ವಿಚಾರದಲ್ಲಿ ಅವರೊಡನೆ ಸಹಮತವಿರುವುದರಿಂದ ಕೆಲಸ ಬಿಡುವ ನನ್ನ ನಿರ್ಧಾರದೊಂದಿಗೆ ಅವರಿಗೆ ಪ್ರತಿಕ್ರಿಯಿಸಿದೆ.

ಪ್ರಿಯ ಕಣ್ಣನ್, ಈಗ ನಿಮಗೆ, ಆ ಮೂಲಕ ಇಡೀ ಜಗತ್ತಿಗೆ ಇದೆಲ್ಲವನ್ನೂ ಬರೆದು ತಿಳಿಸುತ್ತಿರುವುದು ಏಕೆ? ನಾನು ಸಾಪೇಕ್ಷವಾಗಿ ಒಂದು ಸಣ್ಣ ಕಂಪನಿಯಲ್ಲಿ ಏನನ್ನು ಎದುರಿಸಿದೆನೋ ಅದನ್ನೇ ನೀವು ಭಾರತದ ರಾಜಕೀಯ ಆಡಳಿತದ ಇನ್ನೂ ದೊಡ್ಡ ನೆಲೆಯಲ್ಲಿ ಎದುರಿಸುತ್ತಿದ್ದೀರಿ. ಸಾರವು ಒಂದೇ. ನೀವು ಹೇಳುವ ಹಾಗೆ 'ನಮ್ಮ ಧ್ವನಿಗಳನ್ನು ನಮ್ಮಿಂದ ಕಸಿದುಕೊಳ್ಳಲಾಗುತ್ತಿದೆ'.

ಹಲವಾರು ದಿನಗಳಿಂದ ಕಾಶ್ಮೀರದಲ್ಲಿ ನಡೆಸಲಾಗುತ್ತಿರುವ ಸಾರ್ವಜನಿಕ ಸಂಪರ್ಕದ ಪ್ರಯತ್ನಗಳ ಆಚೆಗೂ, ಅಲ್ಲಿ ಏನಾಗುತ್ತಿದೆಯೋ ಅದನ್ನು ಹೇಳಲು ಇತಿಹಾಸವು ಬಹಳ ಕಟುವಾದ ಶಬ್ದಗಳನ್ನು ಹೊಂದಿರುತ್ತದೆ. ಇದನ್ನು ನಿಮಗೆ ಬರೆಯುತ್ತಾ, ಕಳೆದ ತಿಂಗಳು ಏನು ನಡೆಯಿತೋ ಮತ್ತು ಈಗ ಏನು ನಡೆಯುತ್ತಿದೆಯೋ ಅದರ ಬಗ್ಗೆ ಯೋಚಿಸಲು, ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ...

ಅಂತರ್‌ರಾಷ್ಟ್ರೀಯ ಖ್ಯಾತಿಯಿರುವ ಲ್ಯಾನ್ಸೆಟ್ ಎಂಬ ವೈದ್ಯಕೀಯ ಪತ್ರಿಕೆಯು, ಕಾಶ್ಮೀರದ ಭವಿಷ್ಯದ ಬಗೆಗೆ ತನ್ನ ಆತಂಕವನ್ನು ವ್ಯಕ್ತಪಡಿಸಲು ಪ್ರಯತ್ನಿಸಿದಾಗ, ಭಾರತೀಯ ವೈದ್ಯಕೀಯ ಸಂಸ್ಥೆಯಷ್ಟೇ ಅಲ್ಲ, ಪಶುವೈದ್ಯರ ಸಂಘಟನೆಗಳು ಕೂಡ ಹೇಗೆ ಆ ಪತ್ರಿಕೆಯ ಮೇಲೆ ಎರಗಿದವು!

ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡಬೇಕಾದ ಭಾರತದ ಪತ್ರಿಕಾ ಮಂಡಳಿಯು ಜಮ್ಮು ಮತ್ತು ಕಾಶ್ಮೀರದಲ್ಲಿ ಹೇರಲಾಗಿರುವ ಪತ್ರಿಕಾ ನಿರ್ಬಂಧದ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿನ ಒಂದು ಮೊಕದ್ದಮೆಯಲ್ಲಿ ಹೇಗೆ ಮಧ್ಯೆ ಪ್ರವೇಶಿಸಿತು!

ಪ್ರತಿಭಟಿಸುತ್ತಿದ್ದ ಪಿ.ಡಿ.ಪಿ, ಸಂಸದರನ್ನು ಕಡೆಗಣಿಸಿ, ಲಡಾಕ್‌ನ ಸಂಸದ ಜಮ್ಯಾಂಗ್ ತ್ಸೆರಿಂಗ್ ನಮ್ಯಾಲ್ ಅವರಿಗೇ ಹೇಗೆ ಸತತವಾಗಿ ಹೆಚ್ಚು ಪ್ರಾಶಸ್ತ್ಯ ಕೊಡಲಾಯಿತು!

ಎಲ್ಲಾ ಮಾನವ ಹಕ್ಕು ಘೋಷಣೆಗಳನ್ನೂ ಉಲ್ಲಂಘನೆ ಮಾಡಿ ಎಲ್ಲಾ ಕಾಶ್ಮೀರಿ ನಾಯಕರುಗಳನ್ನೂ ಇಷ್ಟು ದಿನ ಹೇಗೆ ಗೃಹಬಂಧನದಲ್ಲಿರಿಸಲಾಗಿದೆ! ವಿಶ್ವ ಸಂಸ್ಥೆಯು ಕೇವಲ ನಾಮಕಾವಾಸ್ತೆ ಪತ್ರಿಕಾ ಹೇಳಿಕೆಗಳಿಂದ ಹೇಗೆ ತೃಪ್ತಿಗೊಂಡಿದೆ!

ಉನ್ನತ ನ್ಯಾಯಾಂಗದ ಮೌನವು ಹೇಗೆ ಅಷ್ಟೊಂದು ಕಿವಿಗಡಚಿಕ್ಕುವಂತಿದೆ!

ಕಾಶ್ಮೀರೀ ಮಹಿಳೆಯರನ್ನು ಮದುವೆಯಾಗುವಂತೆ ಭಾರತದ ಪುರುಷರನ್ನು ಕೋರುತ್ತ ಬಿ.ಜೆ.ಪಿ. ಸಂಸದರು ಮತ್ತು ಶಾಸಕರು ಹೇಗೆ 'ವಿಜಯವನ್ನು' ಸಂಭ್ರಮಿಸುತ್ತಿದ್ದಾರೆ!.

ಹೇಗೆ ದಿನಬೆಳಗಾಗುವುದರೊಳಗೆ ದೇಶಭಕ್ತಿಯ ಪಾಪ್ ಸಂಗೀತವು ತಲೆ ಎತ್ತುತ್ತದೆ, ಹೇಗೆ ನಮ್ಮ ಶಾಲೆ, ಕಾಲೇಜು, ಕೊನೆಗೆ ಕೇಕ್ ಬೇಯಿಸುವ ಹರಟೆಯ ವಾಟ್ಸ್‌ಅಪ್ ಗುಂಪುಗಳು 'ಮಾಸ್ಟರ್ ಸ್ಟ್ರೋಕ್', 'ಸರ್ಜಿಕಲ್ ಸ್ಟ್ರೈಕ್' ಮುಂತಾದ ಮೆಸೇಜ್‌ಗಳಿಂದ ತುಂಬಿ ಹೋಗುತ್ತಿವೆ!

ಕಾಶ್ಮೀರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಹಂಚಿಕೊಂಡಿದ್ದಕ್ಕಾಗಿ, 'ಭಕ್ತ'ರು ಮತ್ತು ಸೇನೆ, ಶೆಹ್ಲಾ ರಷೀದ್ ಅವರನ್ನು ಟ್ವಿಟ್ಟರ್‌ಗಳಲ್ಲಿ ಹೇಗೆ ಲೇವಡಿ ಮಾಡುತ್ತಿದ್ದಾರೆ ಮತ್ತು ಅವರು ಹೇಗೆ ಮಾಧ್ಯಮದಿಂದ ಸತತವಾಗಿ ಗುಂಪು ಹಲ್ಲೆಗೆ ಒಳಗಾಗುತ್ತಿದ್ದಾರೆ!

ಒಂದು ಆರೋಗ್ಯ ಸೇವೆಯ ಸಂಕಷ್ಟಕ್ಕೆ ಕಾರಣವಾಗುತ್ತಿರುವುದರಿಂದ ದಿಗ್ಬಂಧನವನ್ನು ತೆರವುಗೊಳಿಸಬೇಕೆಂದು ಕೇಳಿಕೊಂಡದ್ದಕ್ಕಾಗಿ ಕಾಶ್ಮೀರಿ ವೈದ್ಯ ಡಾ॥ ಓಮರ್ ಅವರನ್ನು ಹೇಗೆ ಎಳೆದೊಯ್ಯಲಾಯಿತು!

'ಬಂಧನದಲ್ಲಿ ಕಾಶ್ಮೀರ' ಎಂಬ ಶೀರ್ಷಿಕೆಯ ವಿಡಿಯೋವನ್ನು ಭಾರತದ ಪತ್ರಿಕಾ ಕ್ಲಬ್‌ನಲ್ಲಿ ಪ್ರದರ್ಶಿಸಲು ಪ್ರಯತ್ನಿಸಿದ ಹೋರಾಟಗಾರರಾದ ಕವಿತಾ ಕೃಷ್ಣನ್ ಮತ್ತವರ ಸಂಗಾತಿಗಳನ್ನು ಹೇಗೆ ತಡೆಯಲಾಯಿತು!

ಮಹಿಳೆಯರು, ಮಕ್ಕಳು, ಮುದುಕರು, ತಾವು ಅನುಭವಿಸಿದ ನೋವು ಮತ್ತು ಹತಾಶೆಗಳ ಬಗೆಗಿನ ಲೆಕ್ಕವಿಲ್ಲದಷ್ಟು ಕತೆಗಳು, ಹೇಗೆ ಇತರೆ ಹಲವು ಅಪ್ರಮುಖ ಸಂಗತಿಗಳ ಜೊತೆ ಬೆರೆತುಹೋಗುತ್ತಾ, ತಮ್ಮ ಪಡಿಪಾಟಲುಗಳ ಕಡೆಗೆ ನಮ್ಮ ಗಮನ ಸೆಳೆಯಲು ಇನ್ನಿಲ್ಲದ ಹೋರಾಟ ಮಾಡುತ್ತಿವೆ...!

ನಿಜಕ್ಕೂ ಇಂತಹ ವಿಷಮಯ ಪರಿಸ್ಥಿತಿಯಲ್ಲಿ, ಕಣ್ಣನ್, ನೀವು ಏನು ಮಾಡಿದ್ದೀರೋ ಅದಕ್ಕೆ ನನ್ನ ಹೃದಯದಾಳದಿಂದ ಧನ್ಯವಾದ ತಿಳಿಸುತ್ತೇನೆ. ನೀವು ಅಸಾಧಾರಣವಾದ ನೈತಿಕ ಧೈರ್ಯವನ್ನು ತೋರಿದ್ದೀರಿ.

ಹಿಂದೆಂದೂ ಇಲ್ಲದ, ಆದರೆ ಇಂದು ಸರ್ವವ್ಯಾಪಿಯಾದ ರಣಸ್ಫೂರ್ತಿಯ ವಿರುದ್ಧ, ನಿಮ್ಮ ಹಾಗೆ ಮತ್ತು ನಿಮ್ಮಂತಹ ಇತರರ ಹಾಗೆ, ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತಿದ್ದೇನೆ. ನಾನು ಏನು ಮಾಡಿದ್ದೇನೋ ಅದನ್ನು ಮಾಡಿಯಾಗಿದೆ. ನಾವು, ಯಜಮಾನ್ಯದ ವಿರುದ್ಧದ ಅನಿವಾರ್ಯವಾದ ಸರಣಿ ಪ್ರತಿಕ್ರಿಯೆಯ ಒಂದು ಭಾಗ ಮಾತ್ರ.

ಇಂದು ಇರುವ, ಮತ್ತು ಹಿಂದೆ ಇದ್ದ, ಸಂಜೀವ್ ಭಟ್ ತರಹದ ಹಲವಾರು ದನಿವರಿಯದ ಜೀವಗಳ ಬಗ್ಗೆ ನಾವು ಯೋಚಿಸುವಾಗ, ನಾವು ಇದರ ಪ್ರಾರಂಭವೂ ಅಲ್ಲ, ಅಥವಾ ಅದು ನಮ್ಮೊಂದಿಗೆ ಮುಗಿಯುವುದೂ ಇಲ್ಲ ಎಂಬುದು ನಮಗೆ ತಿಳಿಯುತ್ತದೆ. ಈಗ, ನಾವು ಇಲ್ಲಿಂದ ಎಲ್ಲಿಗೆ ಹೋಗಬೇಕು?

ಪೌರಾಣಿಕ ರಾಜನೊಬ್ಬನ ಮಾತುಗಳು ನಮಗೆ ಸಹಾಯಕವಾಗಬಹುದು.

'ನೈತಿಕ ವಿಶ್ವದ ಕಮಾನು(arc) ಬಹು ದೀರ್ಘ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳೋಣ. ಆದರೆ ಅದು ನ್ಯಾಯದ ಕಡೆಗೆ ಬಾಗುತ್ತದೆ'. ವಿಲಿಯಂ ಕಲ್ಲೆನ್ ಬ್ರೈಯಂಟ್‌ನ, 'ನೆಲಕ್ಕೆ ತುಳಿಯಲ್ಪಟ್ಟ ಸತ್ಯವು ಮತ್ತೆ ಪುಟಿದೇಳುತ್ತದೆ', ಈ ಮಾತು ಸರಿ ಎಂಬುದನ್ನು ನಾವು ಮನವರಿಕೆ ಮಾಡಿಕೊಳ್ಳೋಣ.



**(ಶರವಣ ರಾಜಾ ಜೋಹೋ ಸಾಫ್ಟ್‌ವೇರ್ ಕಂಪನಿಯಲ್ಲಿ ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಈಗ 'ಕೌಂಟರ್ ಕರೆಂಟ್.ಆರ್ಗ್'ನಲ್ಲಿ ಲೇಖನಗಳನ್ನು ಬರೆಯುತ್ತಾ ರಾಷ್ಟ್ರದಲ್ಲಿ ನಾಗರಿಕ ಹಕ್ಕುಗಳ ಜಾಗೃತಿ ಆಂದೋಲನದ ಪ್ರಮುಖ ಧ್ವನಿಯಾಗಿದ್ದಾರೆ)**

(ಕನ್ನಡಕ್ಕೆ: **ಎಂ. ರಾಜು**

ಕೃಪೆ: **ಜನತಾ** ನ್ಯೂಸ್ ಲೆಟರ್, ಸೆಪ್ಟೆಂ. ೧೫, ೨೦೧೯)

# ವಿಶ್ರಾಂತಿಯ ನಂತರ ಮತ್ತೆ ದೇಶ ಪರ್ಯಟನೆ

**ಇದೀಗ ಬಿಡುಗಡೆಯಾಗಿರುವ ಡಿ.ಎಸ್. ನಾಗಭೂಷಣ ಅವರ ಗಾಂಧಿ ಬದುಕನ್ನು ಕುರಿತ ಸಮಗ್ರ ನಿರೂಪಣೆಯನ್ನೊಳಗೊಂಡ ೯೬ ಅಧ್ಯಾಯಗಳ ಪುಸ್ತಕ 'ಗಾಂಧಿ ಕಥನ'ದಿಂದ, ಈ ಗಾಂಧಿ ಜಯಂತಿ ಸಂಚಿಕೆಗಾಗಿ ನಮ್ಮ ಓದುಗರಿಗೆ ಆಯ್ದ ಒಂದು ಅಧ್ಯಾಯವಿದು–ಸಂ.**



**ಗಾಂ**ಧಿ ೧೯೨೬ರ ಡಿಸೆಂಬರ್‌ನಲ್ಲಿ ಗೌಹಾತಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಸಮಯದಲ್ಲೇ ಅವರ ಸ್ವಯಂಘೋಷಿತ ವಿಶ್ರಾಂತಿಯ ಅವಧಿ ಮುಗಿದಿತ್ತು. ಅಲ್ಲಿಂದಲೇ ಅವರು, ಅನಾರೋಗ್ಯದ ನಿಮಿತ್ತ ಅರ್ಧಕ್ಕೇ ನಿಲ್ಲಿಸಿದ್ದ ಖಾದಿ ನಿಧಿ ಸಂಗ್ರಹಣೆ ಮತ್ತು ಅಸ್ಪೃಶ್ಯತಾ ನಿವಾರಣಾ ಪ್ರಚಾರಾಂದೋಲನಕ್ಕಾಗಿ ದೇಶಪರ್ಯಟನೆಯ ಕೆಲಸವನ್ನು ಮುಂದುವರೆಸಿದರು. ಕಲ್ಕತ್ತಾಗೆ ಬಂದ ಅವರು ಝಾರ್ಖಂಡ್‌ನ ಹಲವು ಊರುಗಳಿಗೆ ಭೇಟಿ ನೀಡಿ, ನಂತರ ತಾವು ಮುಂದಾಳತ್ವ ವಹಿಸಿದ್ದ ಚಂಪಾರಣ್ ಸತ್ಯಾಗ್ರಹದ ಮೋತಿಹಾರಿ, ಬೆಟಿಯಾ ಊರುಗಳಿಗೆ ಹೋದರು. ಈ ಪ್ರವಾಸದಲ್ಲಿ ಅವರು ವಿಶೇಷವಾಗಿ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ನಿಕಟ ಗಮನ ಹರಿಸಿದ್ದರು. ಪರ್ದಾ ಪದ್ಧತಿ ಅವರನ್ನು ತುಂಬಾ ನೋಯಿಸಿತು. ಅದು ಈ ದೇಶದ ಮಹಿಳೆಯರ ಗುಲಾಮಗಿರಿ ಸ್ಥಿತಿಯ ಸಾಕ್ಷಿಯಂತೆ ಅವರಿಗೆ ಕಂಡಿತು. ದಕ್ಷಿಣ ಭಾರತದಲ್ಲಿ ಮಹಿಳೆಯರು ಶಾಲಾ–ಕಾಲೇಜುಗಳಿಗೆ ಹೋಗುತ್ತಾ ಗಂಡಸಿನ ಸಮಾನವಾಗಿ ಬೆಳೆಯುವ ಛಾತಿ ತೋರುತ್ತಿದ್ದರೆ ಉತ್ತರ ಭಾರತದ ಮಹಿಳೆಯರಲ್ಲಿ ಜಾಗೃತಿಯೇ ಉಂಟಾಗದಿರುವುದು ಅವರಲ್ಲಿ ಆಶ್ಚರ್ಯ ಮತ್ತು ನೋವು ತಂದಿತು. ಈ ಬಗ್ಗೆ 'ಯಂಗ್ ಇಂಡಿಯಾ'ದಲ್ಲಿ ಬರೆದ ಲೇಖನವೊಂದರಲ್ಲಿ ಪುರುಷ ಮತ್ತು ಮಹಿಳೆಯರ ನಡುವಣ ಸಮಾನತೆಯನ್ನು ಎತ್ತಿ ಹಿಡಿದು ಮಹಿಳೆಯರು ಮುಕ್ತವಾಗಿ ಗಾಳಿ ಸೇವಿಸಲೂ ಬಿಡದ ಪರ್ದಾ ಪದ್ಧತಿಯ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

## ಗಾಂಧಿಗೆ ಆದಿವಾಸಿಯೊಬ್ಬನ ವಿಚಿತ್ರ ಗೌರವ

ಗಾಂಧಿ ಆ್ಯಂಡ್ರೂಸ್‌ರೊಂದಿಗೆ ಒರಿಸ್ಸಾದ ಆದಿವಾಸಿ ಪ್ರದೇಶವಾದ ಬೊಲಾಂಗೀರ್‌ಗೆ ಭೇಟಿ ಕೊಟ್ಟಾಗ, ಅಲ್ಲಿ ನಡೆದ ಒಂದು ಘಟನೆ ಕುತೂಹಲಕಾರಿಯಾಗಿದೆ. ಅದನ್ನು ಅವರು ೧೯೨೭ರ ಡಿಸೆಂಬರ್ ೨೨ರ 'ಯಂಗ್ ಇಂಡಿಯಾ'ದಲ್ಲಿ ನಿರೂಪಿಸಿದ್ದಾರೆ. ರೈಲ್ವೇ ನಿಲ್ದಾಣದಿಂದ ಸುಮಾರು ೪೫ ಕಿ. ಮೀ. ದೂರದಲ್ಲಿದ್ದ ಊರದು. ಅಲ್ಲೊಬ್ಬ ಕೊಳಕು ಪುಟಗೋಸಿ ಕಟ್ಟಿಕೊಂಡಿದ್ದ ಬಡಕಲು ದೇಹದ ವ್ಯಕ್ತಿಯೊಬ್ಬ, ಇವರ ಮುಂದೆ ಬಂದು ನಿಂತು, ಒಂದು ಒಣ ಹುಲ್ಲುಕಡ್ಡಿಯನ್ನು ಬಾಯಲ್ಲಿರಿಸಿಕೊಂಡು ಧೊಪ್ಪನೆ ಸಾಷ್ಟಾಂಗ ನಮಸ್ಕಾರ ಮಾಡುವಂತೆ ನೆಲಕ್ಕೆ ಬಿದ್ದು ಮತ್ತೆ ಎದ್ದು ಬಾಯಲ್ಲಿದ್ದ ಹುಲ್ಲುಕಡ್ಡಿಯನ್ನು ತಲೆಯಲ್ಲಿ ಸಿಗಿಸಿಕೊಂಡು, ನಂತರ ಕೈಕಟ್ಟಿಕೊಂಡು ಬಾಗಿ ನಮಿಸಿದ. ಇದರಿಂದ ಮುಜುಗರಗೊಂಡು ಕುತೂಹಲಿತರಾದ ಗಾಂಧಿ, ಆ ವ್ಯಕ್ತಿಯನ್ನು ವಿಚಾರಿಸಿದಾಗ, ಆತ ಕಾಡಿನಿಂದ ಸೌದೆ ಕಡಿದು ಹೊತ್ತು ಮಾರಲು ಬಂದ ಓರ್ವ ದಲಿತ ಎಂದು ಗೊತ್ತಾಯಿತು. ಬಾಯಲ್ಲಿ ಹುಲ್ಲುಕಡ್ಡಿ ಸಿಗಿಸಿಕೊಂಡು ಮೇಲ್ಜಾತಿಯವರ ಮುಂದೆ ಬಾಗಿ ನಿಲ್ಲುವುದು, ತಾನವರ ಎತ್ತುಗಳಿಗೆ ಸಮಾನ ಎಂದು ಸೂಚಿಸುವ ಅಲ್ಲಿನ ಪದ್ಧತಿಯಂತೆ ಅದು. ಅವರು ಅವನಿಂದ ಅವನ ಬದುಕಿನ ಇನ್ನಷ್ಟು ವಿವರಗಳನ್ನು ಪಡೆದು ಬಹು ನೊಂದರು. ನಂತರ ಆತನಿಂದ ತಾನಿನ್ನು ಹೆಂಡ ಕುಡಿಯುವುದಿಲ್ಲ ಮತ್ತು ಹಾದಿಬೀದಿಯಲ್ಲಿ ಬಿದ್ದುದನ್ನು ಆಯ್ದು ತಿನ್ನುವುದಿಲ್ಲ ಎಂಬ ವಚನ ಪಡೆದರಂತೆ. ಹೀಗೆ ಗಾಂಧಿ ಪ್ರವಾಸದುದ್ದಕ್ಕೂ ತನ್ನ ಜನರ ಸಂಕಟಗಳ ವೈಚಿತ್ರ್ಯಗಳನ್ನು ಅರಿಯುವ ಪ್ರಯತ್ನಗಳನ್ನೂ ಮಾಡುತ್ತಿದ್ದರು.

ಈ ಪ್ರವಾಸದ ಮುಂದಿನ ಭಾಗವಾಗಿ ಏಪ್ರಿಲ್‌ನಲ್ಲಿ ಗಾಂಧಿ ಮಹಾರಾಷ್ಟ್ರದ ಸಾವಂತವಾಡಿ ಎಂಬಲ್ಲಿ ಇದ್ದಾಗ ಅವರು ಮತ್ತೆ ಅಸ್ವಸ್ಥರಾದರು. ಅವರನ್ನು ಅಲ್ಲಿ ಪರೀಕ್ಷಿಸಿದವರು, ಗಾಂಧಿ ಭಾರತಕ್ಕೆ ಮರಳುವ ಮುನ್ನ ಲಂಡನ್‌ನಲ್ಲಿದ್ದಾಗ ಅವರ ಪಕ್ಕೆ ನೋವಿಗೆ ಚಿಕಿತ್ಸೆ ನೀಡಿದ್ದ ಜೀವರಾಜ ಮೆಹ್ತಾ ಅವರೇ. ಗಾಂಧಿಯವರು, ದೀರ್ಘ ಪ್ರವಾಸ ಮತ್ತು ವಿಪರೀತ ಸಾರ್ವಜನಿಕ ಚಟುವಟಿಕೆಗಳ ಮೂಲಕ ದಣಿದಿದ್ದು, ಅವರಿಗೆ ಒಳ್ಳೆಯ ಗಿರಿಧಾಮದಲ್ಲಿ ನಿರ್ಮಲ ಗಾಳಿಯ ಅವಶ್ಯಕತೆ ಇದೆ ಎಂದು ಅವರು ಸೂಚಿಸಿದರು. ಗಾಂಧಿ ಆಗ ಆತ್ಮಚರಿತ್ರೆಯನ್ನು ಬರೆಯುತ್ತಿದ್ದುದರಿಂದ ಅವರ ಓದು–ಬರಹಗಳಿಗೆ ಅವಕಾಶ ನೀಡಿದ ವೈದ್ಯರು, ಅವರಿಗೆ ವಿಶ್ರಾಂತಿಗಾಗಿ ಸೂಚಿಸಿದ ಜಾಗ ಕರ್ನಾಟಕದ ನಂದಿ ಬೆಟ್ಟ. ಗಾಂಧಿ, ಅಲ್ಲಿಗೆ ತಮ್ಮ ಪತ್ನಿ ಕಸ್ತೂರಬಾ, ಮಗ ದೇವದಾಸ ಮತ್ತು ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರೊಂದಿಗೆ ಹೊರಟರು.

## ಮೈಸೂರು ಸಂಸ್ಥಾನದ ಪ್ರವಾಸ

ಗಾಂಧಿ ನಂದಿಬೆಟ್ಟದಲ್ಲಿದ್ದಾಗ ಅವರ ಪರಿಚಾರಿಕೆಯ ಹೊಣೆ ಹೊತ್ತಿದ್ದವರು ರಾಜಾಜಿ. ಅವರಿಗೆ ಸಹಾಯಕರಾಗಿದ್ದವರು ದೇಶಪಾಂಡೆ ಗಂಗಾಧರರಾಯರು. ನಾಲ್ಕು ತಿಂಗಳ ಈ ಮೊಕ್ಕಾಂನಲ್ಲಿ ಗಾಂಧಿ, ಮೊದಲೆರಡು ತಿಂಗಳು ನಂದಿ ಬೆಟ್ಟದಲ್ಲೇ ಉಳಿದು ಆರೋಗ್ಯ ಸುಧಾರಣೆಯ ಕಡೆ ಗಮನ ಹರಿಸಿದರು. ಆದರೆ ದಿನವೂ ಬೇರೆ ಬೇರೆ ಕಡೆಯಿಂದ ಬೇರೆ ಬೇರೆ ವೃತ್ತಿ ಹಿನ್ನೆಲೆಗಳ ಜನ ಅವರನ್ನು ಭೇಟಿ ಮಾಡಲು ಬರುತ್ತಿದ್ದರು. ಇವರಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಮಿರ್ಜಾ ಇಸ್ಮಾಯಿಲ್ ಮತ್ತು ಮಾಜಿ ದಿವಾನರಾದ ಸರ್ ಎಂ.ವಿಶ್ವೇಶ್ವರಯ್ಯನವರೂ ಸೇರಿದ್ದರು. ವಿದ್ಯಾರ್ಥಿಗಳ ಮತ್ತು ಮಹಿಳೆಯರ ತಂಡಗಳೂ ಬಂದು ಗಾಂಧೀಜಿಯ ಆರೋಗ್ಯ ಸುಧಾರಿಸಲೆಂದು ಶುಭ ಕೋರಿ ತೆರಳುತ್ತಿದ್ದವು. ಆದರೆ ಗಾಂಧಿ, ಯಾರೇ ಬಂದರೂ ಅವರಿಂದ ತಮ್ಮ ಖಾದಿ ಪ್ರಚಾರ ನಿಧಿಗೆ ಕೊಡುಗೆಯನ್ನು ಪಡೆಯದೆ ಬಿಡುತ್ತಿರಲಿಲ್ಲ. ಒಬ್ಬ ವ್ಯಕ್ತಿ ತಾನು ತಂದಿದ್ದ ಹಣ್ಣನ್ನು ಗಾಂಧಿ ತಿನ್ನಬೇಕೆಂದು ಕೇಳಿಕೊಂಡಾಗ, ಅವರು, 'ನಾನು ತಿಂದರೆ ನೀವು ಖಾದಿ ನಿಧಿಗೆ ಎಷ್ಟು ಹಣ ಕೊಡುತ್ತೀರಿ?' ಎಂದು ಕೇಳಿ, ಅವರಿಂದ ದೇಣಿಗೆ ಪಡೆಯಲು ಹಿಂಜರಿಯಲಿಲ್ಲ.

ಜುಲೈ ತಿಂಗಳ ಹೊತ್ತಿಗೆ ಗಾಂಧಿಯವರ ಆರೋಗ್ಯ ಸುಧಾರಿಸಿದಂತೆ ಕಂಡಾಗ ಮೈಸೂರು ಸಂಸ್ಥಾನದಲ್ಲಿ ಅವರ ಪ್ರವಾಸದ ಯೋಜನೆ ಸಿದ್ಧವಾಯಿತು. ಅವರಿಗೆ ಮತ್ತು ಅವರ ಪರಿವಾರಕ್ಕೆ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಲಾಯಿತು. ಅಲ್ಲಿ ಗಾಂಧಿ ಮತ್ತೆ ನೂಲಲು ಆರಂಭಿಸಿದರು. ಬೆಂಗಳೂರಿನಲ್ಲಿ ದ.ಭಾರತ ಖಾದಿ ಪ್ರದರ್ಶನ ಮತ್ತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾದ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಅಸ್ಪೃಶ್ಯ ಜಾತಿಯ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರಲ್ಲದೆ ಅಲ್ಲಿನ ಅಡುಗೆ, ಊಟ ಮತ್ತು ಕಕ್ಕಸು ಮನೆಗಳ ಶುಚಿ ಪರೀಕ್ಷೆ ಮಾಡುತ್ತಿದ್ದರು. ಮಹಿಳಾ ಮಂಡಳಿ ಸಭೆಗಳಲ್ಲಿ ಬಾಲ್ಯ ಮತ್ತು ವಿಧವಾ ವಿವಾಹಗಳ ಬಗ್ಗೆ ಮಾತಾಡಿದರು. ಸಂಸ್ಕೃತ ಪಾಠಶಾಲೆಗೆ ಭೇಟಿ ನೀಡಿ ಸಂಸ್ಕೃತ ಭಾಷೆಯಲ್ಲಿರುವುದೆಲ್ಲವೂ ಸತ್ಯ ಮತ್ತು ಸಮ್ಮತಾರ್ಹವೆಂದು ನಂಬಬೇಡಿ ಎಂದು ಅಲ್ಲಿನ ಅಧ್ಯಾಪಕ–ವಿದ್ಯಾರ್ಥಿವೃಂದಕ್ಕೆ ಕಿವಿ ಮಾತು ಹೇಳಿದರಲ್ಲದೆ, ಚರಕಾದಲ್ಲಿ ವಿದ್ಯಾರ್ಥಿಗಳು ನೂಲುತ್ತಿರುವುದನ್ನು ಕಂಡು ಹರ್ಷಿಸಿ, 'ನೀವು ಬರೀ ನಿಮ್ಮ ಜನಿವಾರಗಳಿಗಾಗಿ ನೂತರೆ ಸಾಲದು, ಜನರ ಮೈಮುಚ್ಚುವ ಬಟ್ಟೆಗಾಗಿಯೂ ಸಾಕಷ್ಟು ನೂಲಬೇಕು' ಎಂದು ಹಾಸ್ಯ ಚಟಾಕಿ ಹಾರಿಸಿ ಖಾದಿ ಸಂದೇಶ ನೀಡಿದರು.



ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿದ ಅವರು ಅಲ್ಲಿನ ವಿಜ್ಞಾನಿ–ಅಧಿಕಾರಿ ವೃಂದಕ್ಕೆ, 'ಇಲ್ಲಿ ನನಗೆ ಅರ್ಥವಾಗುವಂಥದ್ದು ಏನೂ ಕಾಣುತ್ತಿಲ್ಲ. ಆದರೆ ಈ ಸಂಸ್ಥೆಯ ಮೇಲೆ ಟಾಟಾ ಮತ್ತು ಮೈಸೂರು ಸರ್ಕಾರ ಹಾಕಿರುವ ಹಣ ಬಡವರ ದುಡಿಮೆಯ ಮೂಲದಿಂದ ಬಂದ ಹಣ ಎಂಬುದನ್ನು ನೆನಪಿಟ್ಟುಕೊಂಡು, ಅವರ ಕಷ್ಟ ಕಾರ್ಪಣ್ಯಗಳನ್ನು ಕಡಿಮೆ ಮಾಡುವೆಡೆಗೆ ಗಮನ ಹರಿಸಿ ಕೆಲಸ ಮಾಡಿ ಎಂದು ಕರೆ ನೀಡಿದರು. ತಮ್ಮನ್ನು ಭೇಟಿ ಮಾಡಲು ಬಂದ ಮುಷ್ಕರನಿರತ ರಾಜಾಮಿಲ್‌ನ ಕಾರ್ಮಿಕರಿಗೆ, ಮಾಲೀಕರನ್ನು ಶತ್ರುಗಳಂತೆ ಕಾಣದೆ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಂತೆ ಸಲಹೆ ಮಾಡಿದರು.

## ತಾರಾನಾಥರ ಅಭಿನಯ–ತಿರುಮಲೆ ರಾಜಮ್ಮನವರ ಸಂಗೀತ

ಕುರುಡು ಹುಡುಗಿಯೊಬ್ಬಳ ಸಂಗೀತ ಕೇಳಿ ಆನಂದಿಸಿದರು. ವೆಂಕಟಪ್ಪನವರ ಚಿತ್ರ ಕಲೆಯನ್ನು ನೋಡಿ ಮೆಚ್ಚಿದರು. ಪಂಡಿತ ತಾರಾನಾಥರು ಅಭಿನಯಿಸಿದ್ದ, ಹಿಂದೀ ಪ್ರಚಾರಾರ್ಥ ಆಯೋಜಿಸಿದ್ದ ನಾಟಕವನ್ನು ನೋಡಿ ಶುಭ ಕೋರಿದರು. ತಿರುಮಲೆ ರಾಜಮ್ಮನವರ ಸಂಗೀತ ಕೇಳಿದರು. ಕೃಷ್ಣಸ್ವಾಮಿಯವರ ವ್ಯಾಯಾಮ ಶಾಲೆಯನ್ನು ಉದ್ಘಾಟಿಸಿದರು. ಮೈಸೂರಿನಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಹಸ್ತಪ್ರತಿಯನ್ನು ಸಂಗ್ರಹಿಸಿದ ಡಾ. ಶಾಮಾಶಾಸ್ತ್ರಿಗಳನ್ನು ಕಂಡು ಮಾತಾಡಿದರು. ನಂತರ ಅವರು ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪ್ರವಾಸ ಕೈಗೊಂಡರು. ಇಲ್ಲೆಲ್ಲ ಅವರು ಜನರನ್ನು ನೂಲಲು ಮತ್ತು ಖಾದಿ ತೊಡಲು ಆಗ್ರಹಿಸಿದರು. ಖಾದಿ ನಿಧಿಗಾಗಿ ಹಣ ಕೂಡಿಸಿದರು. ಎಲ್ಲೆಡೆ ಅಸ್ಪೃಶ್ಯ ಸಮುದಾಯದ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಅವರಿಗೆ ಮದ್ಯಪಾನ ಮತ್ತು ಗೋಮಾಂಸ ವರ್ಜನೆಯ ಕರೆ ನೀಡಿದರು. ಹಲವೆಡೆಗಳಲ್ಲಿ ಹಲವು ದಲಿತ ಮುಖಂಡರು, ಗಾಂಧಿ ಸಮ್ಮುಖದಲ್ಲಿ ಅವರ ಕರೆಯನ್ನು ಮನ್ನಿಸುವುದಾಗಿ ಶಪಥವನ್ನೂ ಮಾಡಿದರು.

ತುಮಕೂರಿನಲ್ಲಿ ದಲಿತ ವಿದ್ಯಾರ್ಥಿ ನಿಲಯದ ಅಡುಗೆ ಮನೆಯಲ್ಲಿ ಸಿದ್ಧ ಮಾಡಿಟ್ಟಿದ್ದ ರಾಗಿ ರೊಟ್ಟಿಗಳನ್ನು ಕಂಡ ಗಾಂಧಿ, ಅವನ್ನು ತಮ್ಮೊಡನೆ ಬಂದಿದ್ದ ಎಲ್ಲರಿಗೂ ಬಡಿಸುವಂತೆ ಕೇಳಿದಾಗ ಕೆಲವರ ಮುಖ ಕೆಟ್ಟಿದ್ದಂತೂ ನಿಜ! ಗಾಂಧಿ ಶಿವಮೊಗ್ಗದಲ್ಲಿದ್ದಾಗ, ಅವರಿಗೆ ಸ್ವಲ್ಪ ಜ್ವರವಿದೆ ಎಂದು ತಿಳಿದ ರಾಜಾಜಿ, ಮಾರನೆಯ ದಿನದ ತೀರ್ಥಹಳ್ಳಿ ಭೇಟಿಯನ್ನು ರದ್ದುಗೊಳಿಸಿದಾಗ, ಬೆಳಿಗ್ಗೆ ಎದ್ದು ಇದನ್ನು ತಿಳಿದು ಸಿಟ್ಟಾದ ಗಾಂಧಿ, ಕಾಲ್ನಡಿಗೆಯಲ್ಲೇ ತೀರ್ಥಹಳ್ಳಿ ರಸ್ತೆಯನ್ನು ಕೇಳಿಕೊಂಡು ಆ ಊರ ಕಡೆ ನಡೆದೇ ಬಿಟ್ಟರು! ಇದನ್ನು ತಿಳಿದ ಪರಿವಾರದವರು ಮತ್ತು ಜನಸಮೂಹ ಅವರನ್ನು ಸೇರಿಕೊಳ್ಳಲು ಪರದಾಡಬೇಕಾಯಿತು! ಬೇಲೂರು–ಹಳೇಬೀಡುಗಳ ದೇವಾಲಯಗಳು ರಕ್ಷಣೆ ಇಲ್ಲದೆ ಹಾಳಾಗುತ್ತಿರುವುದನ್ನು ಕಂಡ ಅವರು, ಈ ಅಮೂಲ್ಯ ಕಲಾಸಂಪತ್ತನ್ನು ರಕ್ಷಿಸುವ ಕ್ರಮ ಕೈಗೊಳ್ಳುವಂತೆ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯನ್ನು ಆಗ್ರಹಿಸಿದರು. ಗಾಂಧಿ ಮೈಸೂರು ಸಂಸ್ಥಾನದ ಪ್ರಕೃತಿ ಸೌಂದರ್ಯ ಮತ್ತು ಕಲಾ ಸಂಪತ್ತನ್ನು ಮೆಚ್ಚಿಕೊಂಡರಾದರೂ 'ಇಲ್ಲಿನ ಜನ ಸೋಮಾರಿಗಳು. ಏಳು ಗಂಟೆಯಾದರೂ ಹಾಸಿಗೆ ಬಿಟ್ಟು ಏಳುವುದಿಲ್ಲ ಎಂದು ಕೇಳಿದ್ದೇನೆ!' ಎಂದು ಛೇಡಿಸದೆ ಬಿಡಲಿಲ್ಲ.

ಅಂದಹಾಗೆ ಗಾಂಧಿಯವರ ಈ ಮೈಸೂರು ಸಂಸ್ಥಾನದ ಪ್ರವಾಸದ ಸಂದರ್ಭದಲ್ಲೇ, ರಾಜಾಜಿಯವರ ಜೊತೆ ಬಂದಿದ್ದ ಅವರ ಮಗಳು ಲಕ್ಷ್ಮಿ ಮತ್ತು ಗಾಂಧಿಯವರ ಜೊತೆ ಬಂದಿದ್ದ ದೇವದಾಸ ಪರಸ್ಪರ ಮದುವೆಯ ಪ್ರಸ್ತಾಪ ಮಾಡಿ ದಂಪತಿಗಳಾಗಲು ನಿಶ್ಚಯಿಸಿದ್ದು.

### ಗಾಂಧಿಗೆ ಬಂದ ಎರಡು ಪತ್ರಗಳು

ಗಾಂಧಿ ಕರ್ನಾಟಕ ಪ್ರವಾಸದಲ್ಲಿದ್ದಾಗ ಅವರಿಗೆ ಬಂದ ಎರಡು ಮುಖ್ಯ ಪತ್ರಗಳನ್ನು ಇಲ್ಲಿ ಉಲ್ಲೇಖಿಸಬೇಕು. ಒಂದು ಮಹಾರಾಷ್ಟ್ರದ ಮಹಾಡ್ ಎಂಬ ಊರಿನಿಂದ ಅವರ ಅಭಿಮಾನಿಯೊಬ್ಬ ಬರೆದಿದ್ದ ಪತ್ರ. ಆ ಪತ್ರ ಆ ಊರಿನ ಸಾರ್ವಜನಿಕ ಕೆರೆಯಿಂದ ನೀರು ಪಡೆಯಲು ಅಸ್ಪೃಶ್ಯರನ್ನು ಸವರ್ಣೀಯರು ನಿರ್ಬಂಧಿಸಿದ್ದರ ವಿರುದ್ಧ, ವಿದೇಶೀ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದು ಬಂದಿದ್ದ ಡಾ. ಬಿ.ಆರ್. ಅಂಬೇಡ್ಕರ್ ಎಂಬ ಯುವಕನ ನೇತೃತ್ವದಲ್ಲಿ ಅಸ್ಪೃಶ್ಯರು ಆಯೋಜಿಸಿದ್ದ ಕೆರೆ ನೀರು ಮುಟ್ಟುವ ಕಾರ್ಯಕ್ರಮದ ಬಗ್ಗೆ ಬರೆಯಲಾಗಿತ್ತು. ಆ ಪತ್ರಕ್ಕೆ ಕೂಡಲೇ ಉತ್ತರ ಬರೆದ ಗಾಂಧಿ, ಅಂಬೇಡ್ಕರ್ ಅವರ ಕಾರ್ಯಕ್ರಮವನ್ನು ಬೆಂಬಲಿಸಿದರಲ್ಲದೆ, ಈ ಬಗ್ಗೆ 'ಯಂಗ್ ಇಂಡಿಯಾ'ಗೆ 'ಅಸ್ಪೃಶ್ಯತೆ ಮತ್ತು ಅವಿವೇಕ' ಎಂಬ ಶೀರ್ಷಿಕೆಯ ಲೇಖನವೊಂದನ್ನು ಬರೆದರು. ಇದರಲ್ಲಿ ಅವರು ಒಂದು ಅಮಾನವೀಯ ಆಚರಣೆಯಾಗಿರುವ ಅಸ್ಪೃಶ್ಯತೆ, ಈಗ ನಿಧಾನವಾಗಿ ಕುಸಿಯುತ್ತಿದ್ದು ಕೆಲವು ಸಂಪ್ರದಾಯವಾದಿ ಶಕ್ತಿಗಳ ಬಲದಿಂದ ಮಾತ್ರ ಅದು ಉಳಿದಿದೆ ಎಂದಿದ್ದರು.

ಗಾಂಧಿಯವರಿಗೆ ಬಂದ ಇನ್ನೊಂದು ಗಮನಾರ್ಹ ಪತ್ರವೆಂದರೆ ಮೋತಿಲಾಲ್ ನೆಹರೂ ಅವರದ್ದು. ಅವರು ತಮ್ಮ ಮಗ ಜವಾಹರಲಾಲ್ ನೆಹರೂ ಅವರನ್ನು ಕಾಂಗ್ರೆಸ್ಸಿನ ಮುಂದಿನ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸೂಚಿಸಿ ಆ ಪತ್ರ ಬರೆದಿದ್ದರು. ತಮ್ಮ ಮತ್ತು ತಮ್ಮ ಬೆಂಬಲಿಗರ ಅಸಮ್ಮತಿಯ ನಡುವೆಯೂ ಮಾಂಟೆಫೋರ್ಡ್ ಸಂವಿಧಾನ ಸುಧಾರಣೆಗಳ ಅಡಿಯಲ್ಲಿ ಬ್ರಿಟಿಷ್ ಪ್ರಭುತ್ವದ ಶಾಸನ ಸಭೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ನಿಲುವು ತಳೆದು ಸಮಾನ ಮನಸ್ಕ ಕಾಂಗ್ರೆಸ್ಸಿಗರನ್ನು ಸಂಘಟಿಸಿ 'ಸ್ವರಾಜ್ಯ' ಎಂಬ ಪಕ್ಷದ ಅಡಿಯಲ್ಲಿ ಸ್ಪರ್ಧಿಸಿ, ಕೇಂದ್ರ ಶಾಸನ ಸಭೆಯನ್ನು ಪ್ರವೇಶಿಸಿದ್ದ ಮೋತಿಲಾಲರ ಮಹತ್ವಾಕಾಂಕ್ಷೆಯ ವ್ಯಕ್ತಿತ್ವವನ್ನು ಬಲ್ಲವರಾಗಿದ್ದ ಗಾಂಧಿ, ಮೋತಿಲಾಲರಿಗೆ ಒಂದು ಮಾರೋಲೆ ಬರೆದು ಅವರ ಕೋರಿಕೆಯನ್ನು ನಯವಾಗಿ ತಿರಸ್ಕರಿಸಿದರು. ತಮ್ಮ ಪತ್ರದಲ್ಲಿ ಕಾಂಗ್ರೆಸ್ ಈಗ ಒಳಜಗಳಗಳ ಗೂಡಾಗಿದ್ದು, ಈ ಪರಿಸ್ಥಿತಿಗೆ ಜವಾಹರರಂತಹ ಉತ್ಸಾಹಿ ಯುವಕನನ್ನು ಬಲಿಕೊಡಬಾರದೆಂದು ಅವರು ಹೇಳಿದ್ದರು. ಸ್ವತಃ ಜವಾಹರರೇ ಈ ಸ್ಥಾನ ಸದ್ಯಕ್ಕೆ ತಮಗೆ ಬೇಡವೆಂದು ಗಾಂಧಿಯವರಿಗೆ ಪತ್ರ ಬರೆದು, ಸದ್ಯದ ಹಿಂದೂ ಮುಸ್ಲಿಂ ವೈಮನಸ್ಯದ ಪರಿಹಾರದ ಪ್ರಯತ್ನವಾಗಿ ದೆಹಲಿಯ ವೈದ್ಯ ಡಾ. ಎಂ.ಎ.ಅನ್ಸಾರಿಯವರು ಕಾಂಗ್ರೆಸ್ ಅಧ್ಯಕ್ಷತೆಗೆ ಸೂಕ್ತ ಅಭ್ಯರ್ಥಿಯೆಂದು ಹೇಳಿದ್ದರು. ಗಾಂಧಿಯವರ ಒಲವೂ ಅದೇ ಆಗಿತ್ತು.

## ಅಮೇರಿಕನ್ ಲೇಖಕಿಯ ಭಾರತದ ನಿಂದನೆ

ಇದೇ ಸಂದರ್ಭದಲ್ಲಿ ಪ್ರಕಟವಾದ ಕ್ಯಾಥರೀನ್ ಮೇಯೋ ಎಂಬ ಅಮೆರಿಕಾದ ಲೇಖಕಿಯ 'ಮದರ್ ಇಂಡಿಯ' ಪುಸ್ತಕ ದೇಶಾದ್ಯಂತ ಬಿರುಗಾಳಿಯನ್ನೆಬ್ಬಿಸತೊಡಗಿತ್ತು. ಗಾಂಧಿ, ಟ್ಯಾಗೋರ್ ಅವರೂ ಸೇರಿದಂತೆ ಹಲವು ಗಣ್ಯ ಭಾರತೀಯರನ್ನು ಭೇಟಿ ಮಾಡಿ, ಮತ್ತು ಭಾರತದ ವ್ಯಾಪಕ ಪ್ರವಾಸ ಮಾಡಿ ಬರೆಯಲ್ಪಟ್ಟಿದ್ದ ಈ ಪುಸ್ತಕ, ಭಾರತದಲ್ಲಿ ಪ್ರಚಲಿತವಿದ್ದ ಪ್ರಾಣಿ ಬಲಿ, ಮೂಢ ನಂಬಿಕೆಗಳು, ಜಡತೆ, ಜಾತಿ ಪದ್ಧತಿ, ಬಾಲ್ಯ ವಿವಾಹ, ಕೊಳಕು, ಬಡತನ ಮತ್ತು ವಿಧಿವಾದಗಳನ್ನು ವಿವರಿಸುತ್ತಾ, ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ಅಧಿಕಾರಿಗಳ ಪ್ರಾಮಾಣಿಕ ಮತ್ತು ನಿಸ್ಪೃಹ ಸೇವೆ ಸಹಾನುಭೂತಿಗೆ ಅರ್ಹ ಎಂದಿತ್ತು. ಇದರಲ್ಲಿ ಅನೇಕರ ಮಾತುಗಳನ್ನು ತಿರುಚಿ ಬಳಸಿದ ಉದಾಹರಣೆಗಳಿದ್ದವು. ಲಾಲಾ ಲಜಪತ್‌ರಾಯ್, ಅನಿಬೆಸೆಂಟ್ ಮತ್ತು ಟ್ಯಾಗೋರರೂ ಸೇರಿದಂತೆ ಹಲವರು ಈ ಕೃತಿಯನ್ನು ಖಂಡಿಸಿ, ಐವತ್ತಕ್ಕೂ ಹೆಚ್ಚು ಪುಸ್ತಕ–ಕರಪತ್ರ–ಲೇಖನಗಳನ್ನು ಬರೆದು, ಇದೊಂದು ಬ್ರಿಟಿಷ್ ಪ್ರಭುತ್ವದ ಚೇಲಾಗಿರಿಯ ಪ್ರಯತ್ನವೆಂದು ಬಣ್ಣಿಸಿದರು. ಮೇಯೋ ಅವರ ಪುಸ್ತಕವನ್ನು ಬ್ರಿಟಿಷ್ ಪ್ರಭುತ್ವದ ಪರವಾಗಿ, ನಮ್ಮ ಚರಂಡಿಗಳ ಮೇಲ್ವಿಚಾರಣೆ ಮಾಡಲು ಬಂದ, ಚರಂಡಿ ಪರೀಕ್ಷಕರ ವರದಿ ಎಂದು ಕರೆದ ಗಾಂಧಿ, ಇದರಲ್ಲಿನ ಬ್ರಿಟಿಷ್ ಪ್ರಭುತ್ವದ ಸಮರ್ಥನೆ, ಅದನ್ನು ಓದಿದ ಬ್ರಿಟಿಷ್ ಅಧಿಕಾರಿಗಳೇ ನಾಚಿಕೊಳ್ಳುವಂತಿದೆ ಎಂದರು. ಜೊತೆಗೇ ಅವರು ಈ ಪುಸ್ತಕದಲ್ಲಿನ ಭಾರತೀಯ ಸಂಸ್ಕೃತಿ ಮತ್ತು ಜೀವನ ಕ್ರಮಗಳನ್ನು ಕುರಿತ ಮಾತುಗಳನ್ನು ತಳ್ಳಿ ಹಾಕದೆ, ಅವನ್ನು ನಾವು, ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಚೋದನೆಗಳಾಗಿ ಸ್ವೀಕರಿಸಬೇಕೆಂದು ಸಲಹೆ ಮಾಡಿದರು.

ಗಾಂಧಿ ಮತ್ತು ಅವರ ಪರಿವಾರ, ಆಗಸ್ಟ್ ಕೊನೆಯ ವಾರದಲ್ಲಿ ಬೆಂಗಳೂರಿನಿಂದ ರೈಲು ಹತ್ತಿ ದೇಶದ ಇನ್ನಷ್ಟು ದಕ್ಷಿಣ ಭಾಗದತ್ತ ತಮ್ಮ ಪ್ರವಾಸ ಮುಂದುವರೆಸಿದರು. ಮದ್ರಾಸ್, ವೆಲ್ಲೂರು, ಚಿದಂಬರಂ, ತಂಜಾವೂರು, ಕುಂಭಕೋಣಂ, ನಾಗರಕೋಯಿಲ್‌ಗಳಿಗೆ ಭೇಟಿ ನೀಡಿ, ಅಲ್ಲೆಲ್ಲ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಖಾದಿ ಮತ್ತು ಅಸ್ಪೃಶ್ಯತಾ ನಿವಾರಣೆಯ ಮಹತ್ವ ಕುರಿತು ಮಾತಾಡಿದರಲ್ಲದೆ, ಖಾದಿ ನಿಧಿಗಾಗಿ ಹಣ ಸಂಗ್ರಹಿಸುವ ಕೆಲಸವನ್ನೂ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮಂತ ಚೆಟ್ಟಿಯಾರ್‌ಗಳ ಮನೆಗಳಿಗೆ ಭೇಟಿ ನೀಡಿದ್ದ ಗಾಂಧಿ, ಆ ಮನೆಗಳೊಳಗೆ ಒಟ್ಟಿದ್ದ ಪೀಠೋಪಕರಣ ಮತ್ತು ಪ್ರದರ್ಶಿಸಿದ್ದ ಕಲಾಕೃತಿಗಳ ದಟ್ಟಣೆಯನ್ನು ನೋಡಿ ಗಾಬರಿಗೊಂಡು, ಅದನ್ನು ಉಸಿರುಗಟ್ಟಿಸುವ ಶ್ರೀಮಂತಿಕೆ ಮತ್ತು ದಾರಿತಪ್ಪಿದ ಸೌಂದರ್ಯ ಪ್ರಜ್ಞೆ ಎಂದು ಬಣ್ಣಿಸುತ್ತಾ, ಮನೆಯೊಡೆಯರಿಗೆ ತಾವು ತಮ್ಮ ವಾಸ್ತುಶಿಲ್ಪಿ ಗೆಳೆಯ ಕಲೆನ್‌ಬಾಕ್‌ರಿಂದ ಕಲಿತಿದ್ದ ಗೃಹಾಲಂಕರಣದ ಪಾಠಗಳನ್ನು ಹೇಳಿದರು. ನಾಗರಕೋಯಿಲ್‌ನಲ್ಲಿ ಮತ್ತೆ ಅವರು ಸಂಸ್ಕೃತ

(೧೭ನೇ ಪುಟಕ್ಕೆ

ಗಾಂಧಿ ಸ್ಮರಣೆ-೨

# ಈ ವರ್ಷದ ಹುಚ್ಚುಮಳೆ ಮತ್ತು ಗಾಂಧಿ ಮಾರ್ಗ

-ನಾಗೇಶ ಹೆಗಡೆ



"ಗಾಂಧೀಜಿಯ ನಿರ್ಗಮನದ ಹತ್ತೇ ವರ್ಷಗಳಲ್ಲಿ ಅವರ ಆದರ್ಶ ತತ್ವಗಳಿಗೆಲ್ಲ ಈ ದೇಶದವರೇ ಎಳ್ಳುನೀರು ಬಿಡುತ್ತಿದ್ದಾಗ ಪಶ್ಚಿಮದ ಇ.ಎಫ್. ಶೂಮೇಕರ್, ಐವಾನ್ ಇಲ್ಲಿಚ್‌ನಂಥವರು ಈ ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನೇ ಇನ್ನಷ್ಟು ವಿಸ್ತರಿಸಿ, ಗಾಂಧೀವಾದದ ಮರುಸ್ಥಾಪನೆಗೆ ಕಸರತ್ತು ನಡೆಸಿದರು. ತಂತ್ರಜ್ಞಾನ ಮತ್ತು ಬಂಡವಾಳಶಾಹಿಯ ದಾಂಗುಡಿಯಲ್ಲಿ ಇಡೀ ಜಗತ್ತೇ ತತ್ತರಿಸಲಿದೆ ಎಂಬುದನ್ನು ಅರಿತ ಈ ಮಹನೀಯರು ಬ್ರಿಟನ್ನಿನಲ್ಲಿ 'ಇಂಟರ್‌ಮೀಡಿಯೇಟ್ ಟೆಕ್ನಾಲಜಿ ಡೆವಲಪ್‌ಮೆಂಟ್ ಗ್ರೂಪ್' ಎಂಬ ಸಂಸ್ಥೆಯನ್ನು ಆರಂಭಿಸಿ ಗಾಂಧೀಪ್ರಣೀತ 'ಸಮುಚಿತ ತಂತ್ರಜ್ಞಾನದ' ಪರಿಕಲ್ಪನೆಯನ್ನು ಜೀವಂತವಾಗಿಡಲು ಯತ್ನಿಸಿದರು. ಅಭ್ಯುದಯ ಎಂದರೆ ಜನರ ಅಭ್ಯುದಯವೇ ಹೊರತೂ ಕಾರ್ಖಾನೆ, ಕಾಂಕ್ರೀಟ್ ಸೌಧಗಳ ಅಭ್ಯುದಯ ಅಲ್ಲ ಎಂದು ಸಾಧಿಸಲು ಪ್ರಯತ್ನ ನಡೆಸಿದರು. ಆದರೆ ಪಶ್ಚಿಮದವರು ತೋರಿಸಿದ ಸುಖ-ಸೌಲತ್ತು, ದೌಲತ್ತುಗಳ ಆಕರ್ಷಣೆ ಅದೆಷ್ಟಿತ್ತೆಂದರೆ ಇಡೀ ಜಗತ್ತೇ ಇಂದು ಪಳೆಯುಳಿಕೆ ಇಂಧನಗಳ ದಾಸ್ಯತ್ವಕ್ಕೆ ಸಿಲುಕಿ, ಬೊಜ್ಜು ಕರಗಿಸಲೂ ಯಂತ್ರಗಳ ನೆರವು ಕೋರಬೇಕಾಗಿ ಬಂದಿದೆ. ಇಡೀ ಪೃಥ್ವಿಯೇ ಬಿಸಿಯುಸಿರು ಬಿಡುವಂತಾಗಿದೆ. ಗಾಂಧೀಜಿಯವರನ್ನು ಮತ್ತೆ ನೆನಪಿಸಿಕೊಂಡು ಅವರ ತತ್ವಾದರ್ಶಗಳಲ್ಲಿ ಸುಸ್ಥಿರ ಅಭಿವೃದ್ಧಿಯ ಸೂತ್ರಗಳು ಇವೆಯೇ ಎಂದು ಅವರು ಶತಮಾನದ ಹಿಂದೆ ಬರೆದಿದ್ದ 'ಹಿಂದ್ ಸ್ವರಾಜ್' ಪುಟಗಳಲ್ಲಿ ಹುಡುಕುವಂತಾಗಿದೆ."



'ನೇತ್ರಾವತಿ ಬತ್ತಿದೆ, ಪ್ರವಾಸಿಗರಿಗೆ ಸ್ನಾನಕ್ಕೆ ನೀರಿಲ್ಲ; ಭಕ್ತಾದಿಗಳು ಬೇಸಿಗೆ ಮುಗಿಯುವವರೆಗೆ ಬರಬೇಡಿ' ಎಂಬರ್ಥದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಹೆಗ್ಗಡೆಯವರು ಕಳೆದ ಮೇ ತಿಂಗಳಲ್ಲಿ ಘೋಷಣೆ ಹೊರಡಿಸಿದರು.

ಮೂರು ತಿಂಗಳ ನಂತರ, 'ನೇತ್ರಾವತಿ ಮೇರೆ ಮೀರಿ ಉಕ್ಕುತ್ತಿದೆ, ದಂಡೆಯಲ್ಲಿರುವ ನಿವಾಸಿಗಳು ಮನೆಗಳನ್ನು ಖಾಲಿ ಮಾಡಿ ದೂರ ಸಾಗಿರಿ' ಎಂಬರ್ಥದಲ್ಲಿ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಶಶಿಕಾಂತ್ ಸೆಂಥಿಲ್ ನೋಟಿಸ್ ಹೊರಡಿಸಿದರು. ಬಂಟ್ವಾಳ, ಉಪ್ಪಿನಂಗಡಿಯಲ್ಲಿ ನದಿ ಅಪಾಯದ ಮಟ್ಟವನ್ನು ಮೀರಿ ಹರಿಯತೊಡಗಿದಾಗ ಅಲ್ಲೆಲ್ಲ ರಕ್ಷಣಾ ಸಿಬ್ಬಂದಿಯನ್ನು ನೇಮಿಸಿದರು.

ಪಶ್ಚಿಮಘಟ್ಟದ ನದಿಕೊಳ್ಳಗಳು ಬೇಸಿಗೆಯಲ್ಲೂ ಸಂಕಷ್ಟ ತರತೊಡಗಿವೆ, ಮಳೆಗಾಲದಲ್ಲೂ ತೀರದಷ್ಟು ಸಮಸ್ಯೆಗಳನ್ನು ತಂದೊಡ್ಡುತ್ತಿವೆ. ಈಗಿನ ಮಳೆಗಾಲದಲ್ಲಂತೂ ಘಟ್ಟಗಳ ಮೂಲಕ ಹರಿಯುವ ಎಲ್ಲ ನದಿಗಳೂ ಉಕ್ಕೇರಿ ಆಕ್ರಂದನ ಎಬ್ಬಿಸಿವೆ. ಇದೇ ಸಂದರ್ಭದಲ್ಲಿ 'ಈ ಹುಚ್ಚು ಮಳೆಯಲ್ಲಿ ಗಾಂಧಿ ಅರ್ಥಶಾಸ್ತ್ರದ ಆಶಯಗಳು ಹೇಗೆ ಅನಿವಾರ್ಯ ಆಗುತ್ತಿವೆ ಎಂಬುದರ ಬಗ್ಗೆ ಟಿಪ್ಪಣಿ ಬರೆದುಕೊಡಿ' ಎಂದು ಸಂಪಾದಕರು ಕೇಳಿದ್ದಾರೆ. ಬಾವಿಗೆ ಬೆಂಕಿ ಬಿದ್ದಾಗ ನೀರಿನ ಸೆಲೆ ಹುಡುಕುವ ಯತ್ನ ಇದೆಂದು ಹೇಳುವಂತಿಲ್ಲ. ನೀರೇ ಇಲ್ಲಿ ಸಮಸ್ಯೆಗಳ ಮೂಲವಾಗಿದೆಯಲ್ಲ! ಮೇಘಸ್ಫೋಟವಾದಾಗ ಬಾಳೆ ಎಲೆಯ ಛತ್ರಿ ಹುಡುಕುವ ಯತ್ನವೆಂದು ಹೇಳೋಣವೆ?

## ಆಡಮ್ ಸ್ಮಿತ್‌ನ ಅರ್ಥಶಾಸ್ತ್ರ

ಹವಾಮಾನದ ಈ ಪರಿಯ ವೈಪರೀತ್ಯಗಳಿಗೆಲ್ಲ ಆಡಮ್ ಸ್ಮಿತ್ ಎಂಬ ಬ್ರಿಟಿಷ್ ಪಂಡಿತನ ಬಂಡವಾಳಶಾಹಿ, ಫ್ರೀಮಾರ್ಕೆಟ್ (ಮುಕ್ತ ಮಾರುಕಟ್ಟೆ) ಅರ್ಥಶಾಸ್ತ್ರವೇ ಕಾರಣವೆಂಬುದು ಈಗೀಗ ಎಲ್ಲರಿಗೂ ಸ್ಪಷ್ಟವಾಗುತ್ತಿದೆ. ಆತ ಬರೆದ 'ವೆಲ್ತ್ ಆಫ್ ನೇಶನ್ಸ್' (ರಾಷ್ಟ್ರಗಳ ಸಂಪತ್ತು) ಗ್ರಂಥವನ್ನು ಅರ್ಥಶಾಸ್ತ್ರದ ಬೈಬಲ್ ಎಂದೇ ಈಗಲೂ ಅರ್ಥಶಾಸ್ತ್ರದ ಪದವಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಆತನ ಪ್ರಕಾರ, ಬಂಡವಾಳಶಾಹಿಗಳಿಗೆ ಮುಕ್ತ ಸ್ವಾತಂತ್ರ್ಯವನ್ನು ಕೊಟ್ಟರೆ, ಲಂಗುಲಗಾಮಿಲ್ಲದೆ ಅವರು ಲಾಭಕ್ಕಾಗಿ ಶ್ರಮಿಸಿದಾಗ ಎಲ್ಲರ ಉನ್ನತಿಯಾಗುತ್ತದೆ. ಸರಕುಗಳಿಗೆ ಮುಕ್ತ ಮಾರುಕಟ್ಟೆಯನ್ನು ಸೃಷ್ಟಿಸಿ, ಅವಕ್ಕೆ ಬೇಡಿಕೆ ಹೆಚ್ಚುವಂತೆ ಮಾಡಿದರೆ, ಅವನ್ನು ಪೂರೈಸುವ ಪ್ರಕ್ರಿಯೆಯಲ್ಲೇ ಜನರ ಆಶೋತ್ತರಗಳೂ ಪೂರೈಕೆಯಾಗುತ್ತವೆ ಎಂಬುದು ಆತನ ವಾದವಾಗಿತ್ತು. ಅವನ ಚಿಂತನೆಗಳನ್ನು ಆಧರಿಸಿಯೇ ಆಧುನಿಕ ಅರ್ಥಶಾಸ್ತ್ರ, ವಾಣಿಜ್ಯ, ಮತ್ತು ಉದ್ಯಮಗಳು ವಿಕಾಸಗೊಂಡಿವೆ. ಭೂಮಿಯ ನೈಸರ್ಗಿಕ ಸಂಪತ್ತನ್ನು, ಅದರಲ್ಲೂ ವಿಶೇಷವಾಗಿ ಪೆಟ್ರೋಲ್, ಕಲ್ಲಿದ್ದಲು, ನೈಸರ್ಗಿಕ ಅನಿಲಗಳನ್ನು ಉರಿಸುತ್ತ ಜಗತ್ತಿನ ಜನರನ್ನೆಲ್ಲ ಕೊಳ್ಳುಬಾಕರನ್ನಾಗಿ ಮಾಡುತ್ತ ಹೋದಂತೆಲ್ಲ ಬಂಡವಾಳ ಬೆಳೆಯುತ್ತ ಹೋಗುತ್ತದೆ ಎಂಬ ಧೋರಣೆಯಲ್ಲೇ ಇಡೀ ಜಗತ್ತು ಓಡುತ್ತಿದೆ. 'ಇನ್ನಷ್ಟು, ಮತ್ತಷ್ಟು'ಗಳೆಂಬ ಇಂಧನದ ಮೇಲೆಯೇ ಜಗತ್ತು ಓಡುತ್ತಿದೆ. ಅದರ ಪರಿಣಾಮವಾಗಿ ವಾತಾವರಣದಲ್ಲಿ ಉಷ್ಣವರ್ಧಕ ಅನಿಲಗಳ ದಟ್ಟಣೆ ಹೆಚ್ಚಾಗುತ್ತಿದೆ. ಭೂಮಿ ಬಿಸಿಯಾಗುತ್ತಿದೆ. ಸಮುದ್ರದಿಂದ ಮೇಲೇರುವ ಆವಿಯ ಪ್ರಮಾಣ ಹೆಚ್ಚುತ್ತ ವಾಯುಮಂಡಲದಲ್ಲಿ ಮೇಘದಟ್ಟಣೆ ಹೆಚ್ಚುತ್ತ ವಾತಾವರಣ ಹುಚ್ಚುಚ್ಚಾಗಿ ವರ್ತಿಸುತ್ತಿದೆ. ಒಂದೆಡೆ ಚಂಡಮಾರುತ, ಒಂದೆಡೆ ಧೂಳು ಮಾರುತ, ಮತ್ತೊಂದೆಡೆ ಹಿಮಕುಸಿತ, ಇನ್ನೆಲ್ಲೋ ಅಗ್ನಿವರ್ಷ- ಅಂತೂ ಇಡೀ ಭೂಮಿಯ ಋತುಮಾನಗಳೇ ತಾಳತಪ್ಪಿದಂತೆ ವರ್ತಿಸುತ್ತಿವೆ.

ಪಶ್ಚಿಮಘಟ್ಟಗಳಲ್ಲಿ ಹೆಚ್ಚುತ್ತಿರುವ ಉತ್ಪಾತಗಳಿಗೆ ಇಲ್ಲಿನವರೇ ಕಾರಣರೆಂದು ಹೇಳುವಂತಿಲ್ಲ. ಬೆಂಗಳೂರಿನ ಅಧಿಕಾರಿಗಳು, ಗುತ್ತಿಗೆದಾರರು ಕಾರಣವೆಂದೂ ಹೇಳುವಂತಿಲ್ಲ. ಇನ್ನೂ ದೂರದ ಜಪಾನ್, ಯುರೋಪ್, ಕೆನಡಾ, ದಕ್ಷಿಣ ಕೊರಿಯಾ, ಯುಎಸ್‌ಎ, ಅರಬ್ ರಾಷ್ಟ್ರಗಳೇ ಕಾರಣವಾಗಿರಬಹುದು. ಅಲ್ಲಿನವರು ಉರಿಸುವ ಅಪಾರ ಪ್ರಮಾಣದ ಪಳೆಯುಳಿಕೆ ಇಂಧನಗಳ ದುಷ್ಪರಿಣಾಮ ಇಡೀ ಪೃಥ್ವಿಯನ್ನು ಬಿಸಿ ಮಾಡುತ್ತಿದೆ. ಅವರ ಮಾದರಿಯಲ್ಲೇ ಭಾರತವನ್ನೂ ಅಭಿವೃದ್ಧಿಯ ಹೆದ್ದಾರಿಯಲ್ಲಿ ಸಾಗಿಸಬೇಕೆಂದು ಹಳ್ಳಿಹಳ್ಳಿಗೆ ಎಲ್‌ಪಿಜಿ ಯನ್ನು ವಿತರಿಸಿದ್ದೂ ಕಾರಣವಿರಬಹುದು. ಎಲ್‌ಪಿಜಿ ಎಂದರೆ ಅನಿಲದ ಸಿಲಿಂಡರ್ ಅಷ್ಟೇ ಅಲ್ಲ; ಲಿಬರಲೈಸೇಶನ್, ಪ್ರೈವೆಟೈಸೇಶನ್, ಗ್ಲೋಬಲೈಸೇಶನ್ ಈ ಮೂರನ್ನೂ ಸೇರಿಸಿ ಎಲ್‌ಪಿಜಿ ಎನ್ನುತ್ತಾರೆ. ಮುಕ್ತ ಆರ್ಥಿಕತೆ, ಖಾಸಗೀಕರಣ ಮತ್ತು ಜಾಗತೀಕರಣದ ಈ ತ್ರಿಶೂಲ ಈಗಂತೂ ಪಶ್ಚಿಮಘಟ್ಟಗಳ ಹಳ್ಳಿಹಳ್ಳಿಗಳನ್ನೂ ಪ್ರವೇಶಿಸಿವೆ. 'ಸುಖ ಸೌಲಭ್ಯಗಳ ಆಸ್ತಿ ನಿರ್ಮಾಣವೇ ಅಭಿವೃದ್ಧಿಯ ಹಾದಿ ಎಂಬ ಹಳೇ ಮಾತುಗಳನ್ನೇ ಆಡಿಸುತ್ತಾ (ಈಗಿನ ನಾಯಕರು) ಜನರನ್ನು ಥಕಥೈ ಕುಣಿಸುತ್ತಿದ್ದಾರೆ' ಎಂದು ಕಳೆದ ಸೆಪ್ಟೆಂಬರ್ ಸಂಚಿಕೆಯಲ್ಲಿ ಈ ಪತ್ರಿಕೆಯ ಸಂಪಾದಕರು ಹೇಳಿದ್ದಾರಲ್ಲ.

## ವಿಶ್ವಸಂಸ್ಥೆ ಒಪ್ಪಿದ ಗಾಂಧಿ ಮಾರ್ಗ

ಇಲ್ಲಿ ಗಾಂಧೀಜಿಯವರ ಆರ್ಥಿಕತೆ ಹೇಗೆ ಪ್ರಸ್ತುತ ಎಂಬುದನ್ನು ನೋಡೋಣ. ಇಲ್ಲೊಂದೇ ಅಲ್ಲ, ಇಡೀ ಜಗತ್ತಿಗೆ ಇಂದು ಗಾಂಧೀಜಿ ಹೇಳಿದ ಅಭಿವೃದ್ಧಿ ಮಾರ್ಗವೇ ಸರಿಯಾದ ಪರಿಹಾರ ಎಂದು ೨೦೧೨ರಲ್ಲಿ ವಿಶ್ವಸಂಸ್ಥೆಯೇ ಹೇಳಿತ್ತು. ನೈಸರ್ಗಿಕ ಸಂಪತ್ತುಗಳನ್ನು (ಅಂದರೆ ಇಂಧನ, ಖನಿಜ, ನೀರು, ಗಾಳಿಯನ್ನು) ಹಿತಮಿತವಾಗಿ ಬಳಸುವ 'ಸುಸ್ಥಿರ ಆರ್ಥಿಕತೆ'ಯನ್ನು ಅನುಷ್ಠಾನಕ್ಕೆ ತರುವುದು ಅನಿವಾರ್ಯವೆಂದು ಹೇಳಿತ್ತು. ಆ ಇಸವಿಯನ್ನು 'ಸುಸ್ಥಿರ ಆರ್ಥಿಕತೆಯ ವರ್ಷ' ಎಂತಲೂ ಘೋಷಿಸಿತ್ತು. ಗಾಂಧೀಜಿಯವರು ಸುಸ್ಥಿರತೆ ಎಂಬ ಪದವನ್ನೇ ಬಳಸಲಿಲ್ಲ ನಿಜ. ಆದರೆ ನೈಸರ್ಗಿಕ ಸಂಪನ್ಮೂಲಗಳ ಹಿತಮಿತ ಬಳಕೆಯ ಬಗ್ಗೆ ಹೇಳಿದ್ದರು. 'ಬ್ರಿಟನ್ನಿನ ಮಾದರಿಯಲ್ಲೇ

ನಮ್ಮ ದೇಶದ ೩೩ ಕೋಟಿ ಜನರೂ ಐಷಾರಾಮ ಬದುಕಲು ಹೋದರೆ ಇಡೀ ಭೂಮಿಯೇ ಮಿಡತೆಗಳ ದಾಳಿಗೆ ಸಿಕ್ಕ ಹೊಲದಂತೆ ಬಟ್ಟಬರಿದಾದೀತು' ಎಂದಿದ್ದರು. ಅವರು ಆಡಮ್ ಸ್ಮಿತ್ ಮಾದರಿಯ ಬಲಪಂಥೀಯ ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು, ಯಂತ್ರನಾಗರಿಕತೆಯನ್ನು ಒಪ್ಪಲಿಲ್ಲ. ಅಥವಾ ಕಾರ್ಲ್ ಮಾರ್ಕ್ಸ್‌ನ ಎಡಪಂಥೀಯ ಕಮ್ಯೂನಿಸ್ಟ್ ಪ್ರಣಾಳಿಕೆಯನ್ನೂ ಬೆಂಬಲಿಸಲಿಲ್ಲ. ಅವರದ್ದು ಸಾವಿರ ಕೈಗಳ ಕೆಲಸಗಳನ್ನು ಕಿತ್ತುಕೊಳ್ಳುವ ಫ್ಯಾಕ್ಟರಿ ಆರ್ಥಿಕತೆ ಆಗಿರಲಿಲ್ಲ. ಬದಲಿಗೆ ಅಹಿಂಸಾತ್ಮಕ ನೆಲೆಯಲ್ಲಿ ಸಾವಿರ ಕೈಗಳಿಗೆ ಕೆಲಸ ನೀಡುವ ಗ್ರಾಮಸ್ವರಾಜ್ಯದ ಪರಿಕಲ್ಪನೆ ಅವರದ್ದಾಗಿತ್ತು.

ಗಾಂಧೀಜಿಯವರ ಕಲ್ಪನೆಯ ಗ್ರಾಮಸ್ವರಾಜ್ಯವೆಂದರೆ ಹುಲ್ಲುಬೇರಿನ ಮಟ್ಟದಲ್ಲಿ ಜನರು ಸ್ವಾವಲಂಬಿಯಾಗಿರಬೇಕು. ಸ್ಥಳೀಯ ಜನರ ಕೌಶಲಗಳನ್ನು ಬಳಸಿಕೊಂಡು, ಸ್ಥಳೀಯ ಶಕ್ತಿಮೂಲಗಳನ್ನು ದುಡಿಸಿಕೊಂಡು, ಸ್ಥಳೀಯ ಸಂಸ್ಕೃತಿ ಪರಂಪರೆಗಳಿಗೆ ಧಕ್ಕೆ ಬಾರದಂತೆ, ಸ್ಥಳೀಯ ಆರ್ಥಿಕ ನೆರವಿನಿಂದಲೇ ಸ್ಥಳೀಯರ ಮೂಲ ಅಗತ್ಯಗಳನ್ನೂ ಆಶೋತ್ತರಗಳನ್ನೂ ಪೂರೈಸುವ ಪ್ರಜಾತಾಂತ್ರಿಕ ವ್ಯವಸ್ಥೆ ಇರಬೇಕು. ಇವೆಲ್ಲವೂ ಅಹಿಂಸಾತ್ಮಕ ನೆಲೆಯಲ್ಲಿ, ಅಂದರೆ ನಿಸರ್ಗದ ವ್ಯವಸ್ಥೆಯಲ್ಲಿ ಲೋಪವುಂಟಾಗದಂತೆ ನಿರ್ವಹಣೆಯಾಗಬೇಕು. ಗಾಂಧೀಜಿ ಹೇಳಿದ ಈ ಎಲ್ಲ ಅಂಶಗಳನ್ನೂ ಕಡೆಗಣಿಸಿ ಪ್ರಪಂಚ ಬಹುದೂರ ಸಾಗಿಬಂದಿದೆ. ಎಮ್ಮೆಗೆ ಹಾಕುವ ಮೂಗುದಾಣವೂ ಎಲ್ಲೋ ಅರ್ಧಪ್ರಪಂಚದಾಚಿನ ಸಾಗರದಾಳದ ಬಾವಿಯಿಂದ ತೆಗೆದ ಪೆಟ್ರೋಲಿಯಂ ಮೂಲದ್ರವ್ಯದಿಂದ ಉತ್ಪನ್ನವಾದ ಪ್ಲಾಸ್ಟಿಕ್ ನಾರಿನಿಂದ ಫ್ಯಾಕ್ಟರಿಯಲ್ಲಿ ಹೊಸೆದಿದ್ದೇ ಆಗಿರುತ್ತದೆ. ಇನ್ನು, ಪ್ರಜಾತಾಂತ್ರಿಕ ವ್ಯವಸ್ಥೆಯೇನೊ ಗ್ರಾಮೀಣ ಮಟ್ಟಕ್ಕೆ ಬಂದಿದೆ ನಿಜ. ಆದರೆ ಅದು ತಳಮಟ್ಟದ ಜನರ ಸಹಭಾಗಿತ್ವದ ಪ್ರಜಾತಂತ್ರವಾಗಿ ಉಳಿದಿಲ್ಲ. ಅದೂ ಬಲಿಷ್ಠರ ಹಾಗೂ ಭ್ರಷ್ಟರ ಬಿಗಿಮುಷ್ಟಿಯಲ್ಲಿ ಹಿಂಡಿ ಹಿಪ್ಪೆಯಾಗುತ್ತಿರುವ ವ್ಯವಸ್ಥೆಯೇ ಆಗಿದೆ.

## ಸಮುಚಿತ ತಂತ್ರಜ್ಞಾನದ ಪರಿಕಲ್ಪನೆ

ಗಾಂಧೀಜಿಯ ನಿರ್ಗಮನದ ಹತ್ತೇ ವರ್ಷಗಳಲ್ಲಿ ಅವರ ಆದರ್ಶ ತತ್ವಗಳಿಗೆಲ್ಲ ಈ ದೇಶದವರೇ ಎಳ್ಳುನೀರು ಬಿಡುತ್ತಿದ್ದಾಗ ಪಶ್ಚಿಮದ ಇ.ಎಫ್. ಶ್ಯೂಮೇಕರ್, ಐವಾನ್ ಇಲ್ಲಿಚ್‌ನಂಥವರು ಈ ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನೇ ಇನ್ನಷ್ಟು ವಿಸ್ತರಿಸಿ, ಗಾಂಧೀವಾದದ ಮರುಸ್ಥಾಪನೆಗೆ ಕಸರತ್ತು ನಡೆಸಿದರು. ತಂತ್ರಜ್ಞಾನ ಮತ್ತು ಬಂಡವಾಳಶಾಹಿಯ ದಾಂಗುಡಿಯಲ್ಲಿ ಇಡೀ ಜಗತ್ತೇ ತತ್ತರಿಸಲಿದೆ ಎಂಬುದನ್ನು ಅರಿತ ಈ ಮಹನೀಯರು ಬ್ರಿಟನ್ನಿನಲ್ಲಿ 'ಇಂಟರ್‌ಮೀಡಿಯೇಟ್ ಟೆಕ್ನಾಲಜಿ ಡೆವಲಪ್‌ಮೆಂಟ್ ಗ್ರೂಪ್' ಎಂಬ ಸಂಸ್ಥೆಯನ್ನು ಆರಂಭಿಸಿ ಗಾಂಧೀಪ್ರಣೀತ 'ಸಮುಚಿತ ತಂತ್ರಜ್ಞಾನದ' ಪರಿಕಲ್ಪನೆಯನ್ನು ಜೀವಂತವಾಗಿಡಲು ಯತ್ನಿಸಿದರು. ಅಭ್ಯುದಯ ಎಂದರೆ ಜನರ ಅಭ್ಯುದಯವೇ ಹೊರತೂ ಕಾರ್ಖಾನೆ, ಕಾಂಕ್ರೀಟ್ ಸೌಧಗಳ ಅಭ್ಯುದಯ ಅಲ್ಲ ಎಂದು ಸಾಧಿಸಲು ಪ್ರಯತ್ನ ನಡೆಸಿದರು. ಆದರೆ ಪಶ್ಚಿಮದವರು ತೋರಿಸಿದ ಸುಖ–ಸೌಲತ್ತು, ದೌಲತ್ತುಗಳ ಆಕರ್ಷಣೆ ಅದೆಷ್ಟಿತ್ತೆಂದರೆ ಇಡೀ ಜಗತ್ತೇ ಇಂದು ಪಳೆಯುಳಿಕೆ ಇಂಧನಗಳ ದಾಸ್ಯತ್ವಕ್ಕೆ ಸಿಲುಕಿ, ಬೊಜ್ಜು ಕರಗಿಸಲೂ ಯಂತ್ರಗಳ ನೆರವು ಕೋರಬೇಕಾಗಿ ಬಂದಿದೆ. ಇಡೀ ಪೃಥ್ವಿಯೇ ಬಿಸಿಯುಸಿರು ಬಿಡುವಂತಾಗಿದೆ. ಗಾಂಧೀಜಿಯವರನ್ನು ಮತ್ತೆ ನೆನಪಿಸಿಕೊಂಡು ಅವರ ತತ್ವಾದರ್ಶಗಳಲ್ಲಿ ಸುಸ್ಥಿರ ಅಭಿವೃದ್ಧಿಯ ಸೂತ್ರಗಳು ಇವೆಯೇ ಎಂದು ಅವರು ಶತಮಾನದ ಹಿಂದೆ ಬರೆದಿದ್ದ 'ಹಿಂದ್ ಸ್ವರಾಜ್' ಪುಟಗಳಲ್ಲಿ ಹುಡುಕುವಂತಾಗಿದೆ.

ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ೨೦೧೫ರಲ್ಲಿ 'ಸುಸ್ಥಿರ ಅಭಿವೃದ್ಧಿಯ ಗುರಿಗಳು' ಎಂದು ಒಟ್ಟು ೧೭ ಸೂತ್ರಗಳನ್ನು ರೂಪಿಸಲಾಗಿದೆ. ಆ ಹದಿನೇಳರಲ್ಲಿ ೧೪ ಸೂತ್ರಗಳು ಗಾಂಧೀಜಿಯವರ ತತ್ವಾದರ್ಶಗಳಿಂದ ನೇರವಾಗಿ ಪಡೆದಿದ್ದಾಗಿದೆ. ಇನ್ನು ಮೂರು ಸೂತ್ರಗಳು (ಶುದ್ಧ ಶಕ್ತಿಮೂಲಗಳ ಬಳಕೆ, ಸಾಗರದಾಳದ ಜೀವರಕ್ಷಣೆ ಮತ್ತು ಹವಾಗುಣ ಸಮತೋಲ ಸಾಧನೆ) ಈಗಿನ ದಿನಗಳಲ್ಲಿ ಪ್ರಾಮುಖ್ಯ ಪಡೆದಿವೆಯಾದರೂ ಗಾಂಧೀಜಿಯವರು ಜೀವಿಸಿದ್ದ ಕಾಲದಲ್ಲಿ ಅಪ್ರಸ್ತುತವಾಗಿದ್ದವು. ಈ ಹದಿನೇಳೂ ಸೂತ್ರಗಳನ್ನು ಇನ್ನು ಹತ್ತು ವರ್ಷಗಳಲ್ಲಿ (೨೦೩೦ ವೇಳೆಗೆ) ಜಾರಿಗೆ ತರುತ್ತೇವೆ ಎಂದು ಎಲ್ಲ ದೇಶಗಳೂ ಪ್ರತಿಜ್ಞಾಬದ್ಧವಾಗಿವೆ. ತಾವು ಇಂತಿಷ್ಟನ್ನು ಸಾಧಿಸಿದ್ದೇವೆ ಎಂದು ವರ್ಷವರ್ಷವೂ ಎಲ್ಲ ದೇಶಗಳೂ ವಿಶ್ವಸಂಸ್ಥೆಗೆ ವರದಿ ಒಪ್ಪಿಸುತ್ತಿವೆ. ಆ ಎಲ್ಲ ಸೂತ್ರಗಳನ್ನೂ ಪ್ರಪಂಚದ ಎಲ್ಲ ದೇಶಗಳೂ ಜಾರಿಗೆ ತಂದರೆ ಇಂದಿನ 'ಜಲವಾಯು' ಪ್ರಕೋಪ ಸಾಕಷ್ಟು ಕಡಿಮೆಯಾಗುವ ಸಾಧ್ಯತೆಯಿದೆ. ಆದರೆ ಅದು ಸುಲಭದ ಮಾರ್ಗವಂತೂ ಅಲ್ಲ. ಉದಾಹರಣೆಗೆ (ಸೂತ್ರ ೭) ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ಶುದ್ಧ ಶಕ್ತಿಮೂಲಗಳು ಲಭಿಸಬೇಕು. ಅಂದರೆ, ಪೆಟ್ರೋಲು, ಡೀಸೆಲ್ ಮೇಲಿನ ಅವಲಂಬನೆ ಸ್ಥಗಿತಗೊಳ್ಳಬೇಕು. ಸಾಧ್ಯವಾಗುವ ಮಾತೇ ಅದು? ಸೂತ್ರ ೧೧ರ ಪ್ರಕಾರ ಎಲ್ಲ ನಗರ, ಪಟ್ಟಣ, ಸಮುದಾಯಗಳೂ ಸುಸ್ಥಿರತೆಯ ಆಧಾರದ ಮೇಲೆ ರೂಪುಗೊಳ್ಳಬೇಕು. ಅಂದರೆ, ಹೊರಗಿನಿಂದ ಖನಿಜ, ಇಂಧನ, ನೀರು, ಮರಮುಟ್ಟುಗಳನ್ನು ತರಿಸಕೂಡದು. ಪಶ್ಚಿಮಘಟ್ಟಗಳ ಕಲ್ಲು, ಮರಳು, ದಿಮ್ಮಿಗಳನ್ನು ಶಿವಮೊಗ್ಗಕ್ಕೂ ತರಕೂಡದು. ನಗರವಾಸಿಗಳು ತಂತಮ್ಮ ತ್ಯಾಜ್ಯಗಳನ್ನೇ ಮರುಸಂಸ್ಕರಣೆ ಮಾಡಿಕೊಂಡು ಬದುಕಲು ಕಲಿಯಬೇಕು. ಗಟಾರದ ನೀರನ್ನು ಚರಂಡಿ ಅನಿಲದಿಂದಲೋ ಸೌರಶಕ್ತಿಯಿಂದಲೋ ಶುದ್ಧೀಕರಿಸಿ ಬಳಸಬೇಕು. ಪಶ್ಚಿಮಘಟ್ಟಗಳ ಜಲವಿದ್ಯುತ್ತನ್ನು ಬಳಸಕೂಡದು. ಈಗ ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಅವೆಲ್ಲವನ್ನೂ ಸಾಧಿಸಬಹುದು ನಿಜ. ಪ್ರತಿಯೊಂದು ಕುಟುಂಬವೂ ತ್ಯಾಜ್ಯ ಅನಿಲ, ತಿಪ್ಪೆಯಲ್ಲಿನ ಮೀಥೇನ್ ಮತ್ತು ಬಿಸಿಲಿನಿಂದ ಶಕ್ತಿಯನ್ನು ಉತ್ಪಾದಿಸಬಹುದಾದ ತಂತ್ರಜ್ಞಾನ ಸಿದ್ಧವಿದೆ. ಆದರೆ ಅದಕ್ಕೆ ಬೇಕಾದ ರಾಜಕೀಯ ಇಚ್ಛಾಶಕ್ತಿಯನ್ನು ಉತ್ಪಾದಿಸುವ ಉಪಾಯ ಎಲ್ಲಿದೆ?

## ಮೋದಿಯವರು ಹೇಳಿದ್ದೇನು? ಮಾಡಿದ್ದೇನು?

ವಾಯುಮಂಡಲದ ಪರಿಸ್ಥಿತಿ ಇದೇ ಪ್ರಮಾಣದಲ್ಲಿ ಹದಗೆಡುತ್ತ ಹೋದರೆ ಇನ್ನು ಮೂವತ್ತು ವರ್ಷಗಳಲ್ಲಿ ಆ ಇಚ್ಛಾಶಕ್ತಿ ತಂತಾನೇ ಬಂದೀತು ನಿಜ. ೨೦೧೨ರಲ್ಲಿ ವಿಶ್ವಸಂಸ್ಥೆ ಸುಸ್ಥಿರ ಅಭಿವೃದ್ಧಿಯ ಸೂತ್ರಗಳನ್ನು ಹೆಣೆಯಲೆಂದು ಶೃಂಗಸಭೆಯನ್ನು ಆಯೋಜಿಸುತ್ತಿದ್ದಾಗ, ಇತ್ತ ಪೋರ್‌ಬಂದರಿನಲ್ಲಿ ಗಾಂಧೀಜಿಯವರ ೧೪೩ನೇ ಜನ್ಮತಿಥಿಯ ಸಂದರ್ಭದಲ್ಲಿ ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ದಾಮೋದರದಾಸ್ ಮೋದಿಯವರು ಒಂದು ಮಾತನ್ನು ಹೇಳಿದ್ದರು: 'ಗಾಂಧೀಜಿಯವರ ಆದರ್ಶಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಕಾರ್ಯರೂಪಕ್ಕೆ ತಂದರೆ, ಅದರಿಂದ ಹವಾಮಾನ ಸಮತೋಲವಷ್ಟೇ ಅಲ್ಲ, ಜಗತ್ತಿನ ಬಹಳಷ್ಟು ಸಮಸ್ಯೆಗಳು ನಿವಾರಣೆಯಾಗುತ್ತವೆ' ಎಂದಿದ್ದರು. ಅವರೇ ಕಳೆದ ಐದೂ + ವರ್ಷಗಳಿಂದ ದೇಶದ ಚುಕ್ಕಾಣಿ ಹಿಡಿದಿದ್ದಾರೆ. ಥಳಕು ಅಭಿವೃದ್ಧಿಯ ಬುಲ್‌ಡೋಝರ್‌ಗಳನ್ನು ಎಲ್ಲೆಂದರಲ್ಲಿ ಓಡಿಸುತ್ತಿದ್ದಾರೆ. ಬುಲೆಟ್ ಟ್ರೇನ್ ಓಡಿಸಲು ಟೊಂಕ ಕಟ್ಟಿದ್ದಾರೆ. ಜಗತ್ತಿನ ಯಾವ ದೇಶದ ಕಂಪನಿಗಳಾದರೂ ನಮ್ಮ ದೇಶದ ಕಲ್ಲಿದ್ದಲ ಗಣಿಗಾರಿಕೆ ಮಾಡಲು ಅವಕಾಶದ ಬಾಗಿಲು ತೆರೆದಿದ್ದಾರೆ. ಸಾವಿರಾರು ಕುಟುಂಬಗಳ ಬದುಕು ಜಲಸಮಾಧಿಯಾಗುವುದನ್ನೂ ಕಡೆಗಣಿಸಿ ಸರ್ದಾರ್ ಸರೋವರದಲ್ಲಿ ನೀರನ್ನು ತುಂಬಿಸಿ ಅಲ್ಲೇ ತಮ್ಮ ೬೯ನೇ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಿಕೊಂಡಿದ್ದಾರೆ.

'ನೇತ್ರಾವತಿ ಉಕ್ಕಿಹರಿಯುತ್ತಿದೆ–ದೂರ ಓಡಿ ಬಚಾವಾಗಿ' ಎಂದು ಎಚ್ಚರಿಕೆ ಕೊಟ್ಟ ಜಿಲ್ಲಾಧಿಕಾರಿ ಸೆಂಥಿಲ್ ತಾವೇ ಈಗಿನ ಉಸಿರುಗಟ್ಟುವ ವ್ಯವಸ್ಥೆಯಲ್ಲಿ ಈಜಲಾಗದೇ ಕೈಸೋತು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ. ನೇತ್ರಾವತಿ, ಶರಾವತಿ, ಅಘನಾಶಿನಿ, ಗಂಗಾವಳಿ, ಕಾಳಿ ನದೀತಟಗಳಲ್ಲಿ ವಾಸಿಸುವವರು ಹಾಗೆ ಕೈಚೆಲ್ಲಿ ಹೋಗುವಂತಿಲ್ಲವಲ್ಲ.

ಪಶ್ಚಿಮ ಘಟ್ಟಗಳ ಸದ್ಯದ ಸಂಕಟದಿಂದ ಪಾರಾಗಲು ಗಾಂಧೀಜಿಯವರ ತತ್ವಾದರ್ಶಗಳು ನೆರವಿಗೆ ಬರಬಹುದೆ? ರಾಷ್ಟ್ರಮಟ್ಟದ ರಾಜಕೀಯದ ಥಕಥೈ ಹೇಗೂ ಇರಲಿ, ಗ್ರಾಮಮಟ್ಟದಲ್ಲಿ ಪ್ರಜಾತಂತ್ರದ ಅಸಲೀ ಶಕ್ತಿ ಪ್ರಕಟವಾದರೆ ಅದು ಸಾಧ್ಯವಾದೀತು. ಬೆಂಗಳೂರಿಗೆ ಶರಾವತಿಯ ನೀರನ್ನು ಸಾಗಿಸಿ ತರುವ ಸರಕಾರಿ ಯೋಜನೆಗೆ ಸಿಕ್ಕ ಅನನ್ಯ ಪ್ರತಿರೋಧದಲ್ಲಿ ಅಂಥದ್ದೊಂದು ಸಣ್ಣ ಸಾಧ್ಯತೆ ಕಾಣಿಸಿತ್ತು. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಒಕ್ಕೊರಲಿನಿಂದ ಜನರು ದನಿಯೆತ್ತಿದ್ದರು. ನಿತ್ಯದ ಬದುಕಿನ ಇತರ ಮಜಲುಗಳಲ್ಲೂ ಗ್ರಾಮೀಣ ಜನರು ಅಷ್ಟೇ ಒಗ್ಗಟ್ಟಾಗಿದ್ದರೆ, 'ನಮ್ಮ ಬದುಕು–ಭವಿಷ್ಯವನ್ನು ನಾವೇ ನಿರ್ಧರಿಸುತ್ತೇವೆ' ಎಂದು ಟೊಂಕ ಕಟ್ಟಿದರೆ, ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಕೃತಿಯಲ್ಲಿ ತೋರಿಸಲು ಸಜ್ಜಾದರೆ ಈಗಿನ ಮಹಾಪೂರವಷ್ಟೇ ಅಲ್ಲ, ಮುಂದೆ ಬರಬಹುದಾದ ಬರಗಾಲವನ್ನೂ ಎದುರಿಸಲು ಸಾಧ್ಯವಿದೆ.

ಪಶ್ಚಿಮ ಘಟ್ಟ 'ಇಡೀ ದಕ್ಷಿಣ ಬಾರತದ ಜಲಾಗಾರ, ಅದನ್ನು ರಕ್ಷಿಸಿಕೊಳ್ಳೋಣ' ಎಂಬ ಹಿನ್ನೆಲೆಯಲ್ಲಿ ರೂಪುಗೊಂಡ ಮಾಧವ ಗಾಡಗೀಳ ಸಮಿತಿಯ ವರದಿಯಲ್ಲಿ (ವಿಶ್ವಸಂಸ್ಥೆ ಹೇಳಿದ) ಸುಸ್ಥಿರ ಸೂತ್ರಗಳ ಬಹುಪಾಲು ಪಡಿನೆಳಲನ್ನು ನಾವು ಕಾಣಬಹುದು. 'ನಿಮ್ಮ ಸುತ್ತಲಿನ ನಿಸರ್ಗವನ್ನು ನಿಭಾಯಿಸಲು ನೀವೇ ಸಮರ್ಥರು. ನಗರದವರು ಒಡ್ಡುವ ಆಮಿಷಗಳಿಗೆ ಬಲಿಯಾಗಬೇಡಿ; ನಗರದವರ ಆಶೋತ್ತರಗಳ ಪೂರೈಕೆಗೆ ನಿಮ್ಮ ಪ್ರಕೃತಿಯನ್ನು, ನಿಮ್ಮ ಭವಿಷ್ಯವನ್ನು ಬಲಿಹಾಕಬೇಡಿ' ಎಂಬರ್ಥದ ಮಾತುಗಳು, ಆಶಯಗಳು ಆ ವರದಿಯಲ್ಲಿವೆ. ಆದರೇನು ಮಾಡೋಣ? ಗಾಂಧೀಜಿಯವರ ತತ್ವಾದರ್ಶಗಳನ್ನು ಗ್ರಾಮೀಣ ಪರಿಸರದಿಂದ ದೂರ ಸರಿಸಿದಷ್ಟೇ ಸಲೀಸಾಗಿ ಗಾಡಗೀಳ ವರದಿಯನ್ನೂ ನಾವು ಮೂಲೆಗೆ ತಳ್ಳಿದ್ದೇವಲ್ಲ?



**(ನಾಗೇಶ ಹೆಗಡೆಯವರು ಕನ್ನಡದ ಖ್ಯಾತ ವಿಜ್ಞಾನ ಲೇಖಕರು ಮತ್ತು ಅಂಕಣಕಾರರು)**

ಗಾಂಧಿ ಸ್ಮರಣೆ-೩

# ಜಾಗತೀಕರಣದ ನಂತರದ ಸನ್ನಿವೇಶದಲ್ಲಿ ಗಾಂಧಿ ಆರ್ಥಿಕತೆಯ ಮಾದರಿ

-ಸಂದೀಪ್ ಪಾಂಡೆ



ನಮ್ಮ ಸುತ್ತ ಎಷ್ಟೆಲ್ಲಾ ಕೈಗಾರಿಕಾ ಉತ್ಪನ್ನಗಳು ಆವರಿಸಿರುವಾಗ ನಾವು ಏನು ಮಾಡಬೇಕು ಎಂಬ ಪ್ರಶ್ನೆಯ ಸಂದರ್ಭದಲ್ಲಿ, ಮಹಾತ್ಮ ಗಾಂಧಿಯವರು ಸ್ವದೇಶಿ ನೀತಿಯನ್ನು ಅನುಸರಿಸಲು ಮತ್ತು ಆಧುನಿಕ ಉತ್ಪನ್ನಗಳು ಮಾರುಕಟ್ಟೆಗೆ ಬರುವುದಕ್ಕೆ ಮೊದಲು ಬಳಸುತ್ತಿದ್ದಂತಹ ವಸ್ತುಗಳ ಬಳಕೆಯನ್ನು ಉತ್ತೇಜಿಸಲು ಸಲಹೆ ನೀಡಿದ್ದರು. ಯಂತ್ರದಿಂದ ತಯಾರಿಸಲ್ಪಟ್ಟ ಎಲ್ಲ ವಸ್ತುಗಳನ್ನು ತಕ್ಷಣವೇ ಏಕಕಾಲಕ್ಕೆ ಬಿಟ್ಟುಕೊಡಲು ಎಲ್ಲರಿಗೂ ಸಾಧ್ಯವಾಗದಿರಬಹುದು ಎಂಬುದನ್ನು ಅವರು ಒಪ್ಪಿಕೊಂಡಿದ್ದರು. ಆದರೆ ಜನ ಏನು ಬಿಟ್ಟುಕೊಡಬಹುದೆಂದು ಕಂಡುಕೊಳ್ಳಬಹುದು ಮತ್ತು ಕ್ರಮೇಣ ಅದರ ಬಳಕೆಯನ್ನು ನಿಲ್ಲಿಸಬಹುದು ಎಂದಿದ್ದರು. ಇತರರು ಬಿಟ್ಟುಕೊಡುವುದನ್ನು ನಾವು ಕಾಯುತ್ತಾ ಕೂರಬಾರದು ಮತ್ತು ನಾವೇ ಮೊದಲಿಗರಾಗಿ ಬಿಟ್ಟುಕೊಡಲು ಮುಂದಾಗಬೇಕು ಎಂದು ಅವರು ಪ್ರತಿಪಾದಿಸಿದರು.

ಆಗಸ್ಟ್ ೨೦, ೨೦೧೯ ರಂದು ಇಂಡಿಯನ್ ಎಕ್ಸ್‌ಪ್ರೆಸ್‌ನ ಇ-ಪೇಪರ್‌ನಲ್ಲಿ, ಭಾರತದ ಚರಕ ಉದ್ಯಮವು ಭಾರಿ ಬಿಕ್ಕಟ್ಟನ್ನು ಎದುರಿಸುತ್ತಿರುವ ಬಗ್ಗೆ, ಉತ್ತರ ಭಾರತ ಜವಳಿ ಗಿರಣಿಗಳ ಸಂಘವು ಒಂದು ವಿಶೇಷ ಜಾಹೀರಾತನ್ನು ನೀಡಿತು. ಅದರಲ್ಲಿ, 'ನೂಲುವ ಗಿರಣಿಗಳು ಭಾರೀ ನಷ್ಟವನ್ನು ಅನುಭವಿಸುತ್ತಿವೆ; ಅವು ಭಾರತೀಯ ಹತ್ತಿಯನ್ನು ಖರೀದಿಸುವ ಸ್ಥಿತಿಯಲ್ಲಿಲ್ಲ; ೧೦ ಕೋಟಿ ಜನರ ಜೀವನೋಪಾಯ, ನೇರವಾಗಿ ಅಥವಾ ಪರೋಕ್ಷವಾಗಿ, ಜವಳಿ ಉದ್ಯಮದ ಮೇಲೆ ಅವಲಂಬಿತವಾಗಿದೆ ಮತ್ತು ಹತ್ತಿ ಉತ್ಪಾದಿಸುವ ಅಪಾರ ಸಂಖ್ಯೆಯ ರೈತರು ಅಪಾಯಕ್ಕೆ ಸಿಲುಕಿದ್ದಾರೆ' ಎಂದಿತ್ತು. ಇದಕ್ಕೂ ಮುನ್ನ ಆಗಸ್ಟ್ ೧ರಂದು 'ದಿ ಎಕನಾಮಿಕ್ ಟೈಮ್ಸ್'ನಲ್ಲಿ ಪ್ರಕಟವಾದ ಮತ್ತೊಂದು ಜಾಹೀರಾತಿನಲ್ಲಿ, ಚಹಾ ಉದ್ಯಮವು ಬಿಕ್ಕಟ್ಟಿನಲ್ಲಿರುವ ಬಗ್ಗೆ 'ಚಹಾ ತೋಟಗಳಲ್ಲಿ ಹೆಚ್ಚುತ್ತಿರುವ ನಷ್ಟದಿಂದಾಗಿ, ೧೦ ಲಕ್ಷಕ್ಕೂ ಹೆಚ್ಚು ಕಾರ್ಮಿಕರ ಜೀವನೋಪಾಯಕ್ಕೆ ಕುತ್ತು ಬಂದಿದೆ' ಎಂದು ಇಂಡಿಯನ್ ಟೀ ಅಸೋಸಿಯೇಷನ್ ಪರವಾದ ಹೇಳಿಕೆ ಇತ್ತು. ಹಾಗೆಯೇ, 'ಔಟ್‌ಲುಕ್' ಪತ್ರಿಕೆಯು ತನ್ನ ಆಗಸ್ಟ್ ೨೧ರ ಆವೃತ್ತಿಯಲ್ಲಿ, 'ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ)ಯನ್ನು ಸರ್ಕಾರ ಕಡಿಮೆ ಮಾಡದಿದ್ದಲ್ಲಿ, ದೇಶದ ಅತಿದೊಡ್ಡ ಬಿಸ್ಕತ್ತು ತಯಾರಕರಾದ ಪಾರ್ಲೆ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್, ತನ್ನ ೧೦ ಸಾವಿರ ಉದ್ಯೋಗಿಗಳ ಉದ್ಯೋಗವನ್ನು ಕಡಿತಗೊಳಿಸಬಹುದು' ಎಂದು ವರದಿ ಮಾಡಿತ್ತು.

ಮತ್ತೊಂದೆಡೆ, ನರೇಂದ್ರ ಮೋದಿಯವರು ಎರಡನೇ ಬಾರಿಗೆ ಪ್ರಚಂಡ ಬಹುಮತದೊಂದಿಗೆ ಪ್ರಧಾನಿಯಾದ ನಂತರ, ಸರ್ಕಾರವು ನೂರು ದಿನಗಳು ಪೂರೈಸಿದ ಸಂಭ್ರಮದಲ್ಲಿ, ಭಾರೀ ಆರ್ಥಿಕ ಸುಧಾರಣೆಗಳನ್ನು ಘೋಷಿಸಿದೆ. ಅದರ ಭಾಗವಾಗಿ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸೇರಿದ ಸಾರ್ವಜನಿಕ ಸ್ವತ್ತುಗಳು, ಯುದ್ಧೋಪಕರಣಗಳ ಕಾರ್ಖಾನೆಗಳಂತಹ ಸರ್ಕಾರಿ ಇಲಾಖೆಗಳೂ ಸಹ, ಒಂದೋ ಮಾರಾಟಕ್ಕಿವೆ ಇಲ್ಲವೇ ಖಾಸಗೀಕರಣಕ್ಕಾಗಿ ಕಾದಿವೆ. ಈ ಪ್ರಕ್ರಿಯೆಯ ಮೂಲಕ, 'ಆಸ್ತಿಯ ಹಣಕಾಸು ಬೆಲೆ ಕಟ್ಟುವಿಕೆ'ಯ ನೆಪದಲ್ಲಿ, ಬೃಹತ್ ಪ್ರಮಾಣದಲ್ಲಿ ಅಂದರೆ, ಸುಮಾರು ೯೦,೦೦೦ ಕೋಟಿ ರೂಪಾಯಿಗಳಷ್ಟನ್ನು ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಸರ್ಕಾರ ತನ್ನ ಹಣಕಾಸಿನ ಕೊರತೆಯನ್ನು ಪೂರೈಸಿಕೊಳ್ಳಲು, ಎಷ್ಟು ತರಾತುರಿಯಲ್ಲಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಅಥವಾ ಇತರ ಸರ್ಕಾರಿ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ ಎಂಬುದಕ್ಕೆ, ಕಳೆದ ವರ್ಷ ಅದು ೮೦,೦೦೦ ಕೋಟಿಗಳ ತನ್ನ ಗುರಿಯನ್ನು ಮೀರಿರುವುದೇ ಸಾಕ್ಷಿ.

ಇವು, ದೇಶದ ಆರ್ಥಿಕತೆಯ ಒಳ್ಳೆಯ ಲಕ್ಷಣಗಳೇ? ಎಲ್ಲವೂ ತೃಪ್ತಿಕರವಾಗಿದೆ ಎಂದು ಸರ್ಕಾರ ನಟಿಸುತ್ತಿದ್ದರೂ ಆರ್ಥಿಕತೆಯ ಮೇಲೆ ಒಂದು ಬಿಕ್ಕಟ್ಟಿನ ನೆರಳು ಬಿದ್ದಿರುವುದು ಗೋಚರಿಸುತ್ತಿದೆ. ಭಾರತವು ೨೦೨೫ರ ವೇಳೆಗೆ ೫ ಟ್ರಿಲಿಯನ್ ಗಾತ್ರದ ಆರ್ಥಿಕತೆಯನ್ನು ಮುಟ್ಟಬೇಕೆನ್ನುವ ದೃಷ್ಟಿಕೋನ ನಮ್ಮ ಪ್ರಧಾನಿಯವರದ್ದು. ಪ್ರಧಾನಮಂತ್ರಿಯಾಗಿ ಅವರ ಈ ಹಿಂದಿನ ಅಧಿಕಾರಾವಧಿಯಲ್ಲಿ, ಉದ್ಯೋಗವನ್ನು ಸೃಷ್ಟಿಸುವ ಉದ್ದೇಶದಿಂದ ಅವರು ಹಾಕಿಕೊಂಡಿದ್ದ, ಬಹುನಿರೀಕ್ಷಿತ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವು, ಚುನಾವಣೆಗೆ ಸ್ವಲ್ಪ ಮೊದಲು, ಸಾಮಾನ್ಯ ವರ್ಗದವರಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಉದ್ಯೋಗಗಳಲ್ಲಿ ೧೦% ಮೀಸಲಾತಿಯನ್ನು ನೀಡುವುದರಲ್ಲಿ ಪರ್ಯವಸಾನವಾಯಿತು.

ಮಹಾತ್ಮ ಗಾಂಧಿಯವರು ಆರ್ಥಿಕತೆಯ ಬಗ್ಗೆ ಸಂಪೂರ್ಣವಾಗಿ ವಿಭಿನ್ನ ದೃಷ್ಟಿಕೋನವನ್ನು ಹೊಂದಿದ್ದರು. ಅವರು, ಯಂತ್ರೋಪಕರಣಗಳ ವಿರುದ್ಧವಲ್ಲ, ಆದರೆ ಕೆಲಸ ಕಡಿಮೆ ಮಾಡುವ ಸಲುವಾಗಿ, ಯಂತ್ರೋಪಕರಣಗಳ ವ್ಯಾಮೋಹಕ್ಕೆ ಬಲಿಯಾಗುವುದರ ವಿರುದ್ಧವಾಗಿದ್ದೇನೆ ಎಂದು ಸ್ಪಷ್ಟಪಡಿಸಿದ್ದರು. ಕೆಲಸ ಕಡಿಮೆ ಮಾಡುವ ಪ್ರಕ್ರಿಯೆಯ ಆತ್ಯಂತಿಕ ಪರಿಣಾಮವೆಂದರೆ, ಸಾವಿರಾರು ಜನರು ನಿರುದ್ಯೋಗಿಗಳಾಗುವುದು. ಗಾಂಧಿಯವರು, ಸಮಯ ಮತ್ತು ಶ್ರಮವನ್ನು ಮಾನವಕುಲದ ಒಂದು ವರ್ಗಕ್ಕೆ ಮಾತ್ರವಲ್ಲ, ಎಲ್ಲರಿಗೂ ಉಳಿಸಲು ಬಯಸಿದ್ದಾಗಿ ಹೇಳಿದ್ದರು. ಸಂಪತ್ತಿನ ಕ್ರೋಢೀಕರಣ ಕೆಲವರ ಕೈಯಲ್ಲಿ ಮಾತ್ರವಲ್ಲ, ಎಲ್ಲರ ಕೈಯಲ್ಲೂ ವಿತರಣೆಯಾಗಿರಬೇಕೆಂದು ಅವರು ಬಯಸಿದ್ದರು. ಕೆಲಸದ ಉಳಿತಾಯ ವಾದದ ಹಿಂದಿನ ನಿಜವಾದ ಕಾರಣ, ಹೆಚ್ಚಿನ ಲಾಭದ ದುರಾಶೆ ಎಂದು ನಂಬಿದ್ದರು. ಮಹಾತ್ಮ ಗಾಂಧಿಯವರು ಮನುಷ್ಯರನ್ನು ತಮ್ಮ ಆರ್ಥಿಕ ಚಿಂತನೆಯ ಕೇಂದ್ರದಲ್ಲಿ ಇಟ್ಟುಕೊಂಡಿದ್ದರು. ಯಂತ್ರಗಳು ಮನುಷ್ಯರ ಕೈಕಾಲುಗಳನ್ನು ಮೊಟಕುಗೊಳಿಸಬಾರದು ಎಂದು ಅವರು ನಂಬಿದ್ದರು.

ಅವರೇ ಒಪ್ಪಿಕೊಂಡಂತೆ, ಅದಕ್ಕೆ ಕೆಲ ವಿನಾಯಿತಿಗಳನ್ನು ಕೊಟ್ಟಿದ್ದರು. ಉದಾಹರಣೆಗೆ, ಹೊಲಿಗೆ ಯಂತ್ರವು ಉಪಯುಕ್ತ ಸಾಧನ ಎಂದು ಅವರು ಭಾವಿಸಿದ್ದರು. ಅದೇ ರೀತಿ, ತಮ್ಮ ವಸ್ತುಗಳ ತಯಾರಿಕೆಯ ಯೋಜನೆಯಲ್ಲಿ, ನೂಲಲು ಬೇಕಾದ ಸ್ಪಿಂಡಲ್‌ಗಳನ್ನು ಕಮ್ಮಾರರಿಂದ ತಯಾರಿಸಲಾಗಿದ್ದರೂ ಸಹ, ಡೊಂಕಾದ ಸ್ಪಿಂಡಲ್‌ಗಳನ್ನು ನೇರಗೊಳಿಸಬಲ್ಲ ಯಂತ್ರವನ್ನು ಅವರು ಒಪ್ಪಿದ್ದರು. ಹಾಗಾದರೆ, ನೀವು ಗೆರೆಯನ್ನು ಎಲ್ಲಿ ಎಳೆದುಕೊಳ್ಳುತ್ತೀರಿ ಎಂಬ ಪ್ರಶ್ನೆಗೆ, ಅವರು, 'ಯಾವ ಹಂತದಲ್ಲಿ ಅದು ವ್ಯಕ್ತಿಗೆ ಸಹಾಯ ಮಾಡುವುದನ್ನು ನಿಲ್ಲಿಸುತ್ತದೋ, ಮತ್ತು ವ್ಯಕ್ತಿಯ ವ್ಯಕ್ತಿತ್ವವನ್ನು ಅತಿಕ್ರಮಿಸಲು ಆರಂಭಿಸುತ್ತೋ ಅಲ್ಲಿ' ಎಂದು ಹೇಳಿದ್ದರು. ಮೋಟಾರು ಕಾರುಗಳ ವೇಗವನ್ನು- ಅದು ಮನುಷ್ಯರ ಪ್ರಾಥಮಿಕ ಬಯಕೆಯಲ್ಲವಾದ್ದರಿಂದ- ಅವಶ್ಯಕವೆಂದು ಅವರು ನಂಬಿರಲಿಲ್ಲ.

'ಯಂತ್ರೋಪಕರಣಗಳು ಭಾರತವನ್ನು ಬಡತನಕ್ಕೆ ದೂಡಿದೆ ಮತ್ತು ಕಾರ್ಮಿಕರು ಗುಲಾಮರಾಗಿದ್ದು, ಅದರಿಂದ ಗಿರಣಿ ಮಾಲೀಕರು ಅನೈತಿಕವಾಗಿ ಶ್ರೀಮಂತರಾಗಿರುವುದು ಪಾಪದ ಸಂಕೇತವಾಗಿದೆ' ಎಂದು ಗಾಂಧಿ ಭಾವಿಸಿದ್ದರು. ಬಡವರು ಬ್ರಿಟಿಷರ ವಿರುದ್ಧ ಹೋರಾಡಬಲ್ಲರು, ಆದರೆ ಶ್ರೀಮಂತರು ಯಾವಾಗಲೂ ಅವರನ್ನು ಬೆಂಬಲಿಸುತ್ತಾರೆ ಎಂಬುದು ಅವರ ತಿಳಿವಾಗಿತ್ತು. ಗಿರಣಿಗಳನ್ನು ಮುಚ್ಚಬೇಕೇ ಎಂದು ಕೇಳಿದಾಗ, ಅದು ಕಠಿಣ ನಿರ್ಧಾರ, ಆದರೆ ಅವು ಖಂಡಿತವಾಗಿಯೂ ವಿಸ್ತರಿಸಬಾರದು ಎಂದು ಹೇಳಿದ್ದರು. ಚಹಾ ಉದ್ಯಮವು ಎದುರಿಸುತ್ತಿರುವ, ಮೇಲೆ ತಿಳಿಸಿದ ಪ್ರಸ್ತುತ ಬಿಕ್ಕಟ್ಟಿನಲ್ಲಿ, ಅತಿಯಾದ ಪೂರೈಕೆಯನ್ನು ಸರಿದೂಗಿಸಲು, ೫ ವರ್ಷಗಳ ಕಾಲ ಚಹಾ ಪ್ರದೇಶಗಳ ವಿಸ್ತರಣೆಯನ್ನು ನಿಷೇಧಿಸುವಂತೆ ಭಾರತೀಯ ಚಹಾ ಸಂಘವು ಸರ್ಕಾರವನ್ನು ಒತ್ತಾಯಿಸಿದೆ ಎಂಬುದು ಈ ಹಿನ್ನೆಲೆಯಲ್ಲಿ ಕುತೂಹಲಕಾರಿಯಾಗಿದೆ.

ನಮ್ಮ ಸುತ್ತ ಎಷ್ಟೆಲ್ಲಾ ಕೈಗಾರಿಕಾ ಉತ್ಪನ್ನಗಳು ಆವರಿಸಿರುವಾಗ ನಾವು ಏನು ಮಾಡಬೇಕು ಎಂಬ ಪ್ರಶ್ನೆಯ ಸಂದರ್ಭದಲ್ಲಿ, ಮಹಾತ್ಮ ಗಾಂಧಿಯವರು ಸ್ವದೇಶಿ ನೀತಿಯನ್ನು ಅನುಸರಿಸಲು ಮತ್ತು ಆಧುನಿಕ ಉತ್ಪನ್ನಗಳು ಮಾರುಕಟ್ಟೆಗೆ ಬರುವುದಕ್ಕೆ ಮೊದಲು ಬಳಸುತ್ತಿದ್ದಂತಹ ವಸ್ತುಗಳ ಬಳಕೆಯನ್ನು ಉತ್ತೇಜಿಸಲು ಸಲಹೆ ನೀಡಿದ್ದರು. ಯಂತ್ರದಿಂದ ತಯಾರಿಲ್ಪಟ್ಟ ಎಲ್ಲ ವಸ್ತುಗಳನ್ನು ತಕ್ಷಣವೇ ಏಕಕಾಲಕ್ಕೆ ಬಿಟ್ಟುಕೊಡಲು ಎಲ್ಲರಿಗೂ ಸಾಧ್ಯವಾಗದಿರಬಹುದು ಎಂಬುದನ್ನು ಅವರು ಒಪ್ಪಿಕೊಂಡಿದ್ದರು. ಆದರೆ ಜನ ಏನು ಬಿಟ್ಟುಕೊಡಬಹುದೆಂದು ಕಂಡುಕೊಳ್ಳಬಹುದು ಮತ್ತು ಕ್ರಮೇಣ ಅದರ ಬಳಕೆಯನ್ನು ನಿಲ್ಲಿಸಬಹುದು ಎಂದಿದ್ದರು. ಇತರರು ಬಿಟ್ಟುಕೊಡುವುದನ್ನು ನಾವು ಕಾಯುತ್ತಾ ಕೂರಬಾರದು ಮತ್ತು ನಾವೇ ಮೊದಲಿಗರಾಗಿ ಬಿಟ್ಟುಕೊಡಲು ಮುಂದಾಗಬೇಕು ಎಂದು ಅವರು ಪ್ರತಿಪಾದಿಸಿದರು. ಇದಕ್ಕೆ ಇತ್ತೀಚಿನ

ಉತ್ತಮ ಉದಾಹರಣೆಯೆಂದರೆ, 'ಫ್ಲೈಟ್ ಶೇಮ್ ಆ್ಯಂಡ್ ಟ್ರೈನ್ ಬ್ರ್ಯಾಗ್' ಎಂಬ ಆಂದೋಲನವನ್ನು ಮುನ್ನಡೆಸುತ್ತಿರುವ ಸ್ವೀಡನ್ನಿನ ಎಳೆಯ ವಯಸ್ಸಿನ ಹವಾಮಾನ ಬದಲಾವಣೆಯ ಕಾರ್ಯಕರ್ತೆ ಗ್ರೆಟಾ ಥನ್ಬರ್ಗ್. ಅಲ್ಲಿ ಅವಳು, ಅವಳ ತಾಯಿ (ಒಪೆರಾ ಗಾಯಕಿ ಮೆಲೀನಾ ಎರ್ನ್‌ಮನ್) ಮತ್ತು ಹಲವಾರು ಇತರ ಯುರೋಪಿಯನ್ ನಾಗರಿಕರು, ವಿಮಾನಕ್ಕೆ ಹೋಲಿಸಿದರೆ ರೈಲು ಕಡಿಮೆ ಇಂಗಾಲವನ್ನು ಹೊರಸೂಸುವುದರಿಂದ, ವಿಮಾನ ಪ್ರಯಾಣವನ್ನು ನಿಲ್ಲಿಸಿ ರೈಲುಗಳಲ್ಲಿ ಪ್ರಯಾಣಿಸಲು ಪ್ರಾರಂಭಿಸಿದ್ದಾರೆ. ಈ ಆಂದೋಲನದಿಂದಾಗಿ, ಸ್ವೀಡನ್ನಲ್ಲಿ ರೈಲು ಪ್ರಯಾಣದಲ್ಲಿ ಏರಿಕೆ ಮತ್ತು ವಿಮಾನ ಪ್ರಯಾಣದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ. ಅಂತೆಯೇ, ಲಕ್ನೋ ಮೂಲದ ಆರೋಗ್ಯ ಕಾರ್ಯಕರ್ತ ಬಾಬಿ ರಮಾಕಾಂತ್ ಅವರು ಕಾರಿನ ಮಾಲೀಕತ್ವ ಮತ್ತು ಚಾಲನೆಯನ್ನು ತ್ಯಜಿಸಿದ್ದಾರೆ. ನಡೆಯಲು, ಸೈಕಲ್ ತುಳಿಯಲು ಮತ್ತು ಸಾರ್ವಜನಿಕ ಸಾರಿಗೆಯನ್ನು ಬಳಸಲು ಆದ್ಯತೆ ನೀಡಿದ್ದಾರೆ. ಬೆಂಗಳೂರು ಮೂಲದ ಕಾರ್ಯಕರ್ತ ಗುರುಮೂರ್ತಿ ಮಾತೃಭೂತಂ, ದೇಶೀಯ ವಿಮಾನ ಪ್ರಯಾಣವನ್ನು ತ್ಯಜಿಸಿ, ಅದರ ಬದಲಿಗೆ ರೈಲುಗಳನ್ನು ಬಳಸುತ್ತಾರೆ. ಹೀಗೆ ನಮ್ಮ ಸುತ್ತ, ಯಂತ್ರಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಲು ಮುಂದಾಗಿರುವಂತಹ ವ್ಯಕ್ತಿಗಳ ನಿದರ್ಶನಗಳು ಬಹಳಷ್ಟು ಸಿಕ್ಕಬಹುದು.

ಕೈಗಾರಿಕೀಕರಣ ಆಧಾರಿತ ಅಭಿವೃದ್ಧಿಯ ಆಧುನಿಕ ಮಾದರಿಗಳಿಗೆ ಆತ್ಯಂತಿಕ ಸವಾಲು, ಹವಾಮಾನ ಬದಲಾವಣೆಯ ಬಿಕ್ಕಟ್ಟಿನ ಮೂಲಕ ಎದುರಾಗುತ್ತದೆ ಎಂದು ತೋರುತ್ತದೆ.

ಆದರೆ ೨೦೦೬ ರಲ್ಲಿ ನಮ್ಮ ದೇಶದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು ಜಾರಿಗೆ ತಂದಾಗ, ಅತ್ಯಂತ ಆಶ್ಚರ್ಯಕರವಾಗಿ, ಗಾಂಧಿವಾದಿ ಚಿಂತನೆಗೆ ಸ್ವಲ್ಪಮಟ್ಟಿನ ನ್ಯಾಯ ಒದಗಿತ್ತು. ನಂತರ ಮಹಾತ್ಮ ಗಾಂಧಿಯವರ ಹೆಸರನ್ನು ಪೂರ್ವಪ್ರತ್ಯಯವಾಗಿ ಸೇರಿಸಿ ಇದನ್ನು ಎಂಎನ್‌ಆರ್‌ಇಜಿಎ(ಮನರೇಗಾ) ಎಂದು ಮರುನಾಮಕರಣ ಮಾಡಲಾಯಿತು. ಕಾರ್ಮಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಇದು ಗಾಂಧಿ ವಿರೋಧಿಸಿದ್ದ ಯಂತ್ರಗಳು ಮತ್ತು ಗುತ್ತಿಗೆದಾರರನ್ನು ನಿಷೇಧಿಸಿತು. ಪ್ರಸಿದ್ಧ ಬೆಲ್ಜಿಯಂ ಮೂಲದ ಭಾರತೀಯ ಅರ್ಥಶಾಸ್ತ್ರಜ್ಞ ಜೀನ್ ಡ್ರೆಜ್ ಅವರು ರೂಪಿಸಿದ್ದ ಈ ಯೋಜನೆಯ ಮೂಲ ವಾದವೆಂದರೆ, ಜನಸಾಮಾನ್ಯರಿಗೆ ಉದ್ಯೋಗ ನೀಡುವುದು ಉದ್ದೇಶವಾಗಿದ್ದರೆ, ಎಂಎನ್‌ಆರ್‌ಇಜಿಎ ಅಡಿಯಲ್ಲಿ ನೀಡಬೇಕಾದ ಕೆಲಸಗಳಲ್ಲಿ ಯಂತ್ರಗಳನ್ನು ಹೊರಗಿಡಬೇಕಾಗುತ್ತದೆ ಎಂಬುದು.



**(ಉತ್ತರ ಪ್ರದೇಶದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸೇವೆ ಒದಗಿಸುವ 'ಆಶಾ' ಎಂಬ ಸ್ವಯಂಸೇವಾ ಸಂಸ್ಥೆ ನಡೆಸುವ ಸಂದೀಪ್ ಪಾಂಡೆಯವರು ೨೦೦೨ರಲ್ಲಿ ಉದಯೋನ್ಮುಖ ನಾಯಕರೆಂದು ಮ್ಯಾಗ್ಸೆಸೆ ಪ್ರಶಸ್ತಿಯಿಂದ ಪುರಸ್ಕೃತರಾದ ಸಾಮಾಜಿಕ ಕಾರ್ಯಕರ್ತರು.)**

(ಕನ್ನಡಕ್ಕೆ: **ರೇಖಾಂಬ ಟಿ ಎಲ್**

**ಕೃಪೆ: ಜನತಾ ನ್ಯೂಸ್ ಲೆಟರ್,** ೮ ಸೆಪ್ಟೆಂ. ೨೦೧೯)

## ಗಮನಿಸಿ : ನಿಮ್ಮ ಚಂದಾ ಮುಗಿದಿದೆ

**ಕಳೆದ ಸಂಚಿಕೆಯೊಂದಿಗೆ ನಮ್ಮ ಬಹಳಷ್ಟು ಓದುಗರ ಚಂದಾ ಮುಗಿದಿದ್ದು, ಅಂತಹವರು ಚಂದಾ ನವೀಕರಿಸಬೇಕೆಂದು ಕೋರಿದ್ದರೂ ಇನ್ನೂ ಹಲವಾರು ಜನ ಹಾಗೆ ಮಾಡಿಲ್ಲ. ಕಳೆದ ಸಂಚಿಕೆಯ ಈ ಪ್ರಕಟಣೆಯಲ್ಲಿ ifsc code ತಪ್ಪಾಗಿದ್ದುದರಿಂದ ಕೆಲ ಓದುಗರಿಗೆ ಚಂದಾ ನವೀಕರಣದಲ್ಲಿ ತೊಂದರೆಯಾಗಿರಬಹುದೆಂದು ಭಾವಿಸಿ ಅದರ ಗಡುವನ್ನು ಅಕ್ಟೋಬರ್ 20ರವರೆಗೆ ವಿಸ್ತರಿಸಿದ್ದೇವೆ. ಈ ಗಡುವಿನಲ್ಲಿ ನಿಮ್ಮ ಚಂದಾ ಪಾವತಿಯಾಗದಿದ್ದರೆ ನವೆಂಬರ್ ಸಂಚಿಕೆಯನ್ನು ಕಳಿಸಲಾಗುವುದಿಲ್ಲ. 200 ರೂ. ಗಳ ವಾರ್ಷಿಕ ಚಂದಾವನ್ನು ಚೆಕ್/ಡಿಡಿ/ಎಂ.ಒ ಮೂಲಕ ಅಥವಾ ಶಿವಮೊಗ್ಗದ ಎಸ್‌ಬಿಐ.ನ ಗೀತಾಕೃಪಾ ಶಾಖೆಯಲ್ಲಿ (ifsc: sbin 0040444) 'ಸಂಪಾದಕರು: ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ಹಣ ವರ್ಗಾವಣೆ ಮಾಡಬಹುದು. ನಗದು ವರ್ಗಾವಣೆ ಬೇಡ. ಚಂದಾ ಪಾವತಿಯಾದ ನಂತರ 9449242284 ಈ ಸಂಖ್ಯೆಗೆ ಪಾವತಿಯ ಬಗ್ಗೆ ಕರೆ ಅಥವಾ ಸಂದೇಶದ ಮೂಲಕ ತಿಳಿಸಲು ವಿನಂತಿ–ಸಂ.**

**೨ನೇ ಪುಟದಿಂದ)**

ಒಳಗೊಂಡಿದ್ದು ನಮ್ಮಂಥವರಿಗೆ ತಿಳುವಳಿಕಾ ಮಾರ್ಗಕ್ಕೆ ದಿಕ್ಸೂಚಿಯಂತಿವೆ. ಈ ನಿಟ್ಟಿನಲ್ಲಿ ಸುಧೀಂದ್ರ ಕುಲಕರ್ಣಿಯವರ 'ಜಮ್ಮು ಮತ್ತು ಕಾಶ್ಮೀರ : ಮುಂದೇನು?' ಲೇಖನ, ಟಿ.ಎಸ್. ವೇಣುಗೋಪಾಲ್ ಅವರ 'ತೀವ್ರವಾಗುತ್ತಿರುವ ಆರ್ಥಿಕ ಹಿನ್ನಡೆ: ಒಂದು ವಿಶ್ಲೇಷಣೆ' ಲೇಖನಗಳು ಅತ್ಯಂತ ಪ್ರಸ್ತುತ ಮತ್ತು 'ಹೆಚ್ಚು ವಸ್ತುನಿಷ್ಠವಾಗಿವೆ ಮತ್ತು ಮೊದಲ ಲೇಖನದ ತರ್ಜುಮೆ (ಟಿ.ಎಲ್ ರೇಖಾಂಬ) ನಿಜವಾಗಿಯೂ ಮೂಲವೆಂಬಂತೇ ಇದೆ. ಹಾಗೂ ಶಿಕ್ಷಣ ನೀತಿಯ ಬಗೆಗಿನ ಜಿ ಎಸ್ ಜಯದೇವರ ಲೇಖನ ಮತ್ತು ತಿನ್ನುಣ್ಣದವರೂ ಕೂಡ ಒಂದು ಸುತ್ತು ಎಲ್ಲಾ ಪ್ರತ್ಯಕ್ಷವಾಗಿ ನೋಡಿಬಂದಂತೆಯೇ ಆಗುವಂತೆ ಬರೆದಿರುವ ಸಮತಾ ಯುವರಾಜ ರ ಬೋಟಿ ಗೊಜ್ಜು ಲೇಖನಗಳು ಕೂಡ ಚಂದ ಇವೆ. ಇನ್ನು ಎಂದಿನಂತೆ ಸಂಪಾದಕರ ಜಿಡ್ಡು ಕೃಷ್ಣಮೂರ್ತಿಯವರ ಚಿಂತನೆಗಳು ಎಂದಿಗೂ ಬೇಕಾದಂತವೇ ಆಗಿ ಒಟ್ಟು ಪತ್ರಿಕೆ ಅತ್ಯಂತ ಸದೃಢವಾಗಿದ್ದು ಒಳ್ಳೆಯ ಜ್ಞಾನ ಭಂಡಾರವಾಗಿದೆ.

**–ಕೆ.ಪಿ. ಮಹದೇವಿ,** ಅರಸೀಕೆರೆ

ಎಂದಿನಂತೆ ಹೊಸ ಮನುಷ್ಯ ಪತ್ರಿಕೆಯು ಹಲವು ಹೊಸ ಹೊಳಹು ನೀಡುವಂತಹ ಲೇಖನಗಳನ್ನು ಒಳಗೊಂಡಿದೆ.ಕಾಶ್ಮೀರಕ್ಕೆ ನೀಡಿದ್ದ ಸಂವಿಧಾನದ ೩೭೦ನೆ ವಿಧಿಯ ವಿಶೇಷಾಧಿಕಾರವನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿರುವ ಕುರಿತು ಸುಧೀಂದ್ರ ಕುಲಕರ್ಣಿಯವರ ಲೇಖನ ಚಿಂತನೆಗೆ ಒರೆ ಹಚ್ಚುವಂತಿದೆ.ಸಂಪಾದಕೀಯ,ಸಾಹಿತ್ಯ,ಸಂಸ್ಕೃತಿ ಕುರಿತ ಬರಹ ಚೆನ್ನಾಗಿದೆ.

**–ಎಂ. ರಾಘವೇಂದ್ರ** ಸಾಗರ

ಸೆಪ್ಟೆಂಬರ್ ತಿಂಗಳ 'ಹೊಸ ಮನುಷ್ಯ'ದಲ್ಲಿ ಸತೀಶ್ ಕುಲಕರ್ಣಿಯವರ ಚಾಕು ಜಾದೂಗಾರ ಕವನ ಓದಿ ಖುಷಿಯಾಯ್ತು. ಯಾರಿಗೂ ಗೊತ್ತಾಗುತ್ತಿಲ್ಲ/ ಕಣ್ಣು ಕಟ್ಟಿದ್ದಾನೆ, ಕಣ್ಕಟ್ಟಾಟ! ಕವನ ಹೆಣೆಯುವ ಪದಗಳ ಚಮತ್ಕಾರ ಮೆಚ್ಚುವಂತದ್ದು.. ಜೆಕೆ ಅವರ ಚಿಂತನೆಗಳಲ್ಲಿ ಆಯ್ದ ಹದಿನೈದು ಸೂಕ್ತಿಗಳು ಏಕ್ದಂ ಸೂಪರ್. ಸಂಪಾದಕೀಯ ಅರ್ಥಪೂರ್ಣವಾಗಿದೆ. ಕರ್ನಾಟಕದ ಜನರನ್ನು ದೇವರೇ– ಅವನಿದ್ದರೆ – ಕಾಪಾಡಬೇಕು! ಈ ಕೊನೆ ಸಾಲಿನಲ್ಲಿನ ಪಂಚ್ ಮೆಚ್ಚುವಂತದ್ದು ಸರ್!

**–ಡಾ. ಎಂ.ಈ.ಶಿವಕುಮಾರ್ ಹೊನ್ನಾಳಿ,** ರಾಣೇಬೆನ್ನೂರು

ಸೆಪ್ಟೆಂಬರ್ ಸಂಚಿಕೆಯಲ್ಲಿನ 'ಯುವ ಲಹರಿ'ಯ ಸುಶಿ ಕಾಡನಕುಪ್ಪೆ ಅವರ ಕೊನೆಯುಸಿರಿರುವವರೆಗೂ ಜೀವ ತೇಯುವ ಹಿರಿ ಜೀವಗಳು, ಸಮತಾ ಯುವರಾಜ್ ಅವರ ಲಲಿತ ಪ್ರಬಂಧ 'ಬೋಟಿ ಗೊಜ್ಜು' ಮತ್ತು ಕೆ.ಎಸ್. ಭಗವಾನ್ ಅವರು ಬಹುರೂಪಿ ರಾಮನನ್ನು ಮರೆತಿದ್ದಾರೆಂದು ಹೇಳುವ ಎಂ ಚಂದ್ರಶೇಖರಯ್ಯನವರ ಪುಸ್ತಕಾವಲೋಕನ ನನಗೆ ಮೆಚ್ಚುಗೆಯಾದ ಲೇಖನಗಳು.

**–ಸಂಗೀತಾ ಶೆಣೈ,** ಬೆಂಗಳೂರು

ಎಂದಿನಂತೆ ಕುತೂಹಲಕರ ವಿಚಾರ ಚಿಂತನೆಗಳಿಂದ ಕೂಡಿದ ಸೆಪ್ಟೆಂಬರ್ ಸಂಚಿಕೆ ಆನೇಕ ಕಾರಣಗಳಿಂದ ಮೆಚ್ಚುಗೆಯಾಯಿತು. ವೇಣುರವರ ಆರ್ಥಿಕ ಹಿನ್ನಡೆ ಕುರಿತ ಲೇಖನ, ಹಿರಿಯ ಜೀವಗಳ ಕುರಿತ ಸುಶೀರವರ ಲೇಖನ, ಜಿಕೆಯವರ ವಿಚಾರಸಂಗ್ರಹ ಎಲ್ಲವೂ ಮೌಲಿಕ ಬರಹಗಳಾಗಿವೆ. ಬೋಟಿಗೊಜ್ಜು ಎಂಬ ಸಮತಾರವರ ಪ್ರಬಂಧವಂತೂ ಅದರ ಭಾಷೆ ಮತ್ತು ದಟ್ಟ ಅನುಭವದ ಹಿನ್ನಲೆಯಲ್ಲಿ ಉತ್ತಮವಾಗಿ ಮೂಡಿಬಂದಿದೆ.

**–ಮಂಜುಳಾ ಕೆ.** ಶಿವಮೊಗ್ಗ

ಬಹಳ ಜನ ಬರೆಯದ, ಬರೆಯಲು ಸಂಕೋಚ ಪಡುವ 'ಬೋಟಿ ಗೊಜ್ಜು; ವಿಷಯವನ್ನುಸಮತಾ ಯುವರಾಜ್ ಅವರು ತುಂಬ ಮನೋಜ್ಞವಾಗಿ ಚಿತ್ರಿಸಿದ್ದಾರೆ. ನಾನೂ ಅವರಂತೆಯೇ ನನ್ನ ಮೊಮ್ಮಕ್ಕಳನ್ನು ಅಕ್ಕಪಕ್ಕ ಕೂರಿಸಿಕೊಳ್ಳುತ್ತೇನೆ. ಇನ್ನು ಪಿಜ್ಜಾಗೆ ಹೋಲಿಸಿದರೆ ನಮ್ಮ ಅಕ್ಕಿ ರೊಟ್ಟಿಯೇ ಸೊಗಸು ಎನ್ನುವಲ್ಲಿ ನನ್ನ ಸಹಮತವಿದೆ. ಬೋಟಿಗೊಜ್ಜಿನ ಬಗೆಗಿನ ಲಲಿತ ಪ್ರಬಂಧ ಬರೆದ ಮತ್ತು ಅದನ್ನು ಪ್ರಕಟಿಸುವ ಮೂಲಕ ನಮ್ಮನ್ನು ಹೊಸ ಗಾಳಿಗೆ ತೆರೆದ ಸಮತಾ ಮತ್ತು ನಿಮಗೂ ಧನ್ಯವಾದಗಳು.

**–ಪ್ರೊ. ಬಿ.ಎನ್ ಶ್ರೀರಾಮ್,** ಮೈಸೂರು

**ಮಲೆನಾಡಿನ ಅಪ್ಪಟ ಜನಪರ ಹೋರಾಟಗಾರ ಕಾಮ್ರೇಡ್ ಕೆ. ಎಂ. ಶ್ರೀನಿವಾಸ್ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.–ಸಂ.**

# ಒಮ್ಮೆ ಬನ್ನಿ ಆಲ್ಮೋರಾಕ್ಕೆ!

–ಬಿ.ಎಸ್. ದಿವಾಕರ್



ಭಾರತೀಯರಾಗಿ ಹುಟ್ಟಿದವರು ಮಾತ್ರವಲ್ಲ, ಜಗತ್ತಿನ ಪ್ರಕೃತಿ ಆರಾಧಕರೆಲ್ಲರೂ ಒಮ್ಮೆ ದರ್ಶನ ಮಾಡಲು ಹಾತೊರೆಯುವ ಜಾಗವೆಂದರೆ ಹಿಮಾಲಯ, ಅದು ತನ್ನ ಪ್ರಕೃತಿ ಸೌಂದರ್ಯದಲ್ಲೇ ಒಂದು ಅನುಭಾವಿಕ ಆಕರ್ಷಣೆಯನ್ನೂ ಹುದುಗಿಸಿಕೊಂಡು ಜಗತ್ತಿನ ಅನೇಕ ಉನ್ನತ ಧಾರ್ಮಿಕ ವ್ಯಕ್ತಿಗಳನ್ನು ತನ್ನೆಡೆಗೆ ಸೆಳೆದುಕೊಂಡಿದೆ. ಅಂತಹ ಇಬ್ಬರು ಮಹಾನ್ ವ್ಯಕ್ತಿಗಳಾದ ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರನ್ನು ಸೆಳೆದಿದ್ದ ಹಿಮಾಲಯದ ಎರಡು ಸ್ಥಳಗಳನ್ನು ಕುರಿತಾಗಿದೆ ಈ ಸಚಿತ್ರ ಲೇಖನ.-ಸಂ.





ಮಾಯಾವತಿ: ಕಲಾವಿದ ಎಲಿಯಟ್ ಕ್ಲಾರ್ಕ್‌ನ ತೈಲ ಚಿತ್ರ

ಕೃಪೆ: ಸ್ಮಿತೋನಿಯನ್ ಅಮೆರಿಕನ್ ಆರ್ಟ್ ಮ್ಯೂಸಿಯಂ

**ಮ**ನುಕುಲದ ಇತಿಹಾಸ, ಚಿಂತನೆ, ವಿಚಾರಧಾರೆಯನ್ನು ರೂಪಿಸಿ, ಪ್ರಭಾವಿಸಿದ ಪ್ರಕೃತಿ ವಿಲಾಸವೇ ಹಿಮಾಲಯ. ಇದರ ಮಡಿಲಿನಲ್ಲಿ ಇರುವ ಸುಂದರ ರಾಜ್ಯಗಳಲ್ಲಿ ಉತ್ತರಾಖಂಡವು ಚೆಲುವಿನ ತಾಣ. ಉತ್ತರಪ್ರದೇಶದಿಂದ ಬೇರ್ಪಟ್ಟು ಗಢವಾಲ್ ಮತ್ತು ಖುಮಯೂನ್ ಎಂಬ ವಿಭಿನ್ನ ಅಸ್ಮಿತೆಗಳು ಕೂಡಿ ಒಂದಾದ್ದು ಈ ರಾಜ್ಯ. ಖುಮಯೂನ್ ಭಾಗದ ಗತಕಾಲದ ಶಕ್ತಿ ಕೇಂದ್ರವೇ ಆಲ್ಮೋರಾ.

ದೆಹಲಿಯಿಂದ ರೈಲಿನಲ್ಲಿ ಹೊರಟು, ಆ ಮಾರ್ಗದ ಕೊನೆಯ ನಿಲ್ದಾಣ ಹಲ್‌ದ್ವಾನಿ ತಲುಪುತ್ತೇವೆ. ಅಲ್ಲಿಂದ ರಸ್ತೆಯ ಪ್ರಯಾಣ ಆರಂಭ. ಐದು ಕಿ.ಮೀ. ಸಾಗುತ್ತಿದ್ದಂತೆ ವಿಶಾಲ ಬಯಲು ಥಟ್ಟನೆ ಮಾಯವಾಯಿತಲ್ಲ ಎಂದು ಗೊತ್ತಾಗುವಷ್ಟರಲ್ಲಿ, ಹಿಮಾಲಯದ ಪರ್ವತಶ್ರೇಣಿಗಳ ಅಂಕುಡೊಂಕಿನ, ನಿರಂತರ ಏರುತ್ತಲೇ ಹೋಗುವ ರಸ್ತೆಯಲ್ಲಿ ಸಾಗುತ್ತಾ, ಹೊಸದೊಂದು ಲೋಕವನ್ನು ನಾವು ಪ್ರವೇಶಿಸುತ್ತೇವೆ.. ಎಂಬತ್ತೈದು ಕಿ.ಮೀ. ದೂರದ ಆಲ್ಮೋರಾಕ್ಕೆ ರಸ್ತೆಗಳೇನೊ ಸುಸ್ಥಿತಿಯಲ್ಲಿವೆ. ಆದರೂ ಕ್ಷೇಮವಾಗಿ ತಲುಪಲು ಕನಿಷ್ಠ ಮೂರು ಗಂಟೆಗಳು ಬೇಕೇ ಬೇಕು. ರುದ್ರರಮಣೀಯ ಸೌಂದರ್ಯದ ರಹದಾರಿ ಇದು. ಆದರೆ ಎಚ್ಚರ ತಪ್ಪಿದರೆ ಭವಬಂಧನದಿಂ ಪರಾರಿ (ಬೆಂಗಳೂರಿನ ರಸ್ತೆಗಳಲ್ಲಿ ಮೋಕ್ಷ ಇನ್ನೂ ಸುಲಭ ಎಂಬುದನ್ನು ಅಲ್ಲಗಳೆಯಲಾರೆ). ಆಲ್ಮೋರಾ ಮಡಿಕೇರಿಯಷ್ಟು ದೊಡ್ಡದೂ ಅಲ್ಲ, ಮುಳ್ಳಯ್ಯನಗಿರಿಯಷ್ಟು ಎತ್ತರದಲ್ಲೂ ಇಲ್ಲ. ವಾಯುಮಾರ್ಗದಲ್ಲಿ ೫೦ ಕಿ.ಮೀ. ಗಳಷ್ಟು ದೂರದಲ್ಲಿ ಉತ್ತರ ಗಡಿ. ಅಲ್ಲಿ ಅಂಚಿನಲ್ಲಿ  ನೇಪಾಳ, ಟಿಬೆಟ್ ಹಿಮಾಲಯ ಶ್ರೇಣಿ. ನಂದಾದೇವಿ, ತ್ರಿಶೂಲ್ ಸೇರಿದಂತೆ ಹಲವು ಭವ್ಯ ಶಿಖರಗಳ ಸುಂದರ ಗಿರಿಮಾಲೆ. ವಾತಾವರಣ ತಿಳಿಯಾಗಿ, ಮೋಡ ರಹಿತವಾಗಿದ್ದಾಗ, ಥಳಥಳನೆ ಹೊಳೆಯುವ ಬೆಳ್ಳಿಯ ಬೆಟ್ಟಗಳು. ನೈನಿತಾಲ್, ರಾಣಿಖೇತ್, ಕೌಸಾನಿ; ಇವು ಆಲ್ಮೋರಾದ ಸುತ್ತ ೫೦ ರಿಂದ ೭೦ ಕಿ.ಮೀ. ವ್ಯಾಪ್ತಿಯಲ್ಲಿರುವ ಪ್ರಸಿದ್ಧ ಜಾಗಗಳು. ದೇವದಾರು, ಪೈನ್ ವೃಕ್ಷಗಳನ್ನು ಹೊತ್ತ ಏರಿಳಿದಾರಿಗಳು, ಗುಹೆಗಳು, ಹುಲ್ಲುಗಾವಲುಗಳು, ರಭಸದ ತೊರೆ–ನದಿಗಳು, ವಿಶಾಲ ಸರೋವರಗಳು, ನೂರಾರು ದೇವ ಮಂದಿರಗಳು.



ಮಾಯಾವತಿಯ ಅದ್ವೈತ ಆಶ್ರಮ

## ವಿವೇಕಾನಂದರ ಧ್ಯಾನ ಸ್ಥಳ

ಧ್ಯಾನಸ್ಥ ಮನದಾಳದಲ್ಲಿ, ಮೌನ ಶರಧಿಯ ಮಡಿಲಲ್ಲಿ, ತಮ್ಮ ದೇಹಗಳನ್ನು ದಂಡಿಸಿ, ಅತಿ ನಿಷ್ಠುರ, ಹಾಗೂ ಕಠೋರ ಸಾಧನೆಗಳಿಂದ ಕೊನೆಯುಸಿರಿನ ತನಕ, ತಮ್ಮ ಅನ್ವೇಷಣೆಯಲ್ಲಿ ಮನುಕುಲದ ಕಲ್ಯಾಣ, ಮಾನವ ಪ್ರಜ್ಞೆಯ ನಂದಾದೀಪವನ್ನು ಬೆಳಗುತ್ತಾ, ಗುರಿ–ದಾರಿ–ಧ್ಯೇಯಗಳಿಗಾಗಿ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡ ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿಯವರ ಅಂತರಂಗಗಳಲ್ಲಿ ಸೃಷ್ಟಿಯ ಈ ಭವ್ಯ, ದಿವ್ಯ, ಮನೋಹರ ಭೂರಮೆ ಸೃಜಿಸಿದ ಚೈತನ್ಯ ಧಾರೆಯನ್ನು ನಾವು ಗಮನಿಸಲೇಬೇಕು. ೧೮೯೦ರ ಅವರ 'ಅಲೆಮಾರಿ ಸನ್ಯಾಸಿ' ಘಟ್ಟದಲ್ಲಿ ವಿವೇಕಾನಂದರು ಮೊದಲ ಬಾರಿಗೆ ಕಾಲ್ನಡಿಗೆಯಲ್ಲಿ ಆಲ್ಮೋರಾದಲ್ಲಿ ಕಸಾರ್ ದೇವಿ ಮಂದಿರ ತಲುಪುತ್ತಾರೆ. ಭೂಮಿಯನ್ನು ಸೀಳಿ, ಹೊರಚಾಚಿ ನಿಂತ ಕಲ್ಲು ಬಂಡೆಯ ಅಡಿಯ ಸಣ್ಣ ಗುಹೆಯಲ್ಲಿ ಮೂರು ತಿಂಗಳು ಕಾಲ ಧ್ಯಾನದಲ್ಲಿ ಲೀನವಾಗುತ್ತಾರೆ. ಸುತ್ತಲೂ ವಿಸ್ತಾರವಾಗಿ ಹಬ್ಬಿರುವ ಹವಾಲಬಾಗ್ ಕಣಿವೆಯ ಭವ್ಯ ನೋಟ. ಜಡ ಚೇತನಕ್ಕೆ ಪುಳಕ ನೀಡುವ ತಂಪಾದ ಗಾಳಿ.

ಏಳು ವರ್ಷಗಳ ನಂತರ, ಪಶ್ಚಿಮ ದೇಶಗಳ ಪ್ರವಾಸ, ಪ್ರಚಾರ ಕಾರ್ಯ ಮುಗಿಸಿ, 'ಕೊಲಂಬೋದಿಂದ ಆಲ್ಮೋರಾಕ್ಕೆ' ಎಂಬ ಪುಸ್ತಕದಲ್ಲಿರುವ ಅವರ ಆಲ್ಮೋರಾದ ಕೊನೆಯ ಉಪನ್ಯಾಸದಲ್ಲಿ ಹೇಳುವ ಮಾತುಗಳಿವು:

'ನಾನು ಬಾಲ್ಯದಿಂದ ಕನಸು ಕಾಣುತ್ತಿದ್ದ ಸ್ಥಳವಿದು. ನಾನು ನನ್ನ ಕೊನೆಯ ದಿನಗಳನ್ನು ಇಲ್ಲಿಯೇ ಕಳೆಯುವ ಆಸೆ ಹೊಂದಿದ್ದೇನೆ. ನಾನು ಈ ಹಿಂದೆ ಏನು ಮಾಡಿದೆ, ಮುಂದೆ ಏನು ಮಾಡುತ್ತೇನೆ ಎಂಬುದನ್ನು ಮರೆತು, ಹಿಮಾಲಯದ ಗಿರಿಶರೀರದ ಪಲ್ಲವಿಯತ್ತ ಮನಸ್ಸು ಹೊರಳಿದೆ. ಭಾರತದ ಧಾರ್ಮಿಕ ಇತಿಹಾಸದಿಂದ ಹಿಮಾಲಯವನ್ನು ತೆಗೆದುಬಿಟ್ಟರೆ, ಉಳಿಯುವುದು ಅತ್ಯಲ್ಪ. ಪ್ರಪಂಚದಲ್ಲಿ ಎಲ್ಲ ಭಯದಿಂದ ಕೂಡಿದೆ. ವೈರಾಗ್ಯ ಒಂದೇ ಒಬ್ಬನನ್ನು ನಿರ್ಭೀತನನ್ನಾಗಿ ಮಾಡುವುದು. ಇದು ತ್ಯಾಗ ಭೂಮಿ'

ತಾವು ಸ್ವಿಟ್ಜರ್‌ಲೆಂಡ್ ಪ್ರವಾಸದಲ್ಲಿದ್ದಾಗ, ಹಿಮಾಲಯದಲ್ಲೊಂದು ಆಶ್ರಮ ಸ್ಥಾಪಿಸುವ ಬಯಕೆ ಬಲಗೊಂಡು, ತಮ್ಮ ಅನುಯಾಯಿಗಳಾದ ಇಂಗ್ಲೆಂಡಿನ ಕ್ಯಾಪ್ಟನ್ ಸೇವಿಯರ್ ದಂಪತಿಗಳನ್ನು ಪ್ರೇರೇಪಿಸಿ, ೧೮೯೯ರಲ್ಲಿ ಮಾಯಾವತಿ ಆಶ್ರಮ ಸ್ಥಾಪಿಸುತ್ತಾರೆ



ಕೌಸಾನಿಯ ಅನಾಸಕ್ತಿ ಯೋಗ ಆಶ್ರಮ

ಮತ್ತು 'ಪ್ರಬುದ್ಧ ಚೇತನ' ಪ್ರಕಟಣೆಯ ಜವಾಬ್ದಾರಿಯನ್ನು ಅವರಿಗೆ ನೀಡುತ್ತಾರೆ.

ಆಲ್ಮೋರಾದಿಂದ ೧೩೦ಕಿ.ಮೀ. ದೂರದ ಲೋಹಾಘಾಟ್ ಸಮೀಪದ ಮೌಂಟ್ ಅಬೋಟ್‌ನಲ್ಲಿರುವ ಈ ಆಶ್ರಮ ವರ್ಷದಲ್ಲಿ ನಾಲ್ಕು ತಿಂಗಳುಗಳ ಕಾಲ ತೀವ್ರ ಹಿಮಪಾತದಿಂದ ಮುಚ್ಚಿರುತ್ತದೆ. ಆದರೆ ಕಳೆದ ನೂರು ವರ್ಷಗಳಿಂದ ಸುತ್ತಮುತ್ತಲಿನ ನೂರಾರು ಹಳ್ಳಿಗಳ, ಕೆಲವೊಮ್ಮೆ ಟಿಬೆಟಿನ ಗಡಿಭಾಗದ ಹಳ್ಳಿಗಳಿಂದ ಬರುವ ರೋಗಿಗಳಿಗೆ ಉಚಿತ ಶುಶ್ರೂಷೆ ನೀಡುವ ೨೫ ಹಾಸಿಗೆಗಳ ಆಸ್ಪತ್ರೆ ಸದಾ ಕಾರ್ಯನಿರ್ವಹಿಸುತ್ತದೆ. ಜನಸಮೂಹದಿಂದ ದೂರದ ಏಕಾಂತದಲ್ಲಿ ದೇವದಾರು, ಓಕ್, ಪೈನ್, ರೋಡೆಂಟ್ರನ್ ವೃಕ್ಷ ಸಮೂಹದ ಹಚ್ಚಹಸಿರಿನ ಹುಲ್ಲುಗಾವಲಿನ ಸುಂದರ ಪರ್ವತದಲ್ಲಿ ನೆಲೆಗೊಂಡಿರುವ ಪ್ರಶಾಂತ ತಪೋಭೂಮಿ; ಪೂಜೆ, ಭಜನೆಗಳೇ ಇಲ್ಲದ, ಅದ್ವೈತ ವೇದಾಂತದಲ್ಲಿರುವ ಮೌನ ತಾಣವಿದು. ಹಿಮಾಚಲ ಪ್ರದೇಶದಿಂದ ಹಿಡಿದು ನೇಪಾಳ ಗಡಿಯವರೆಗಿನ ೩೭೬ ಕಿ.ಮೀ. ಉದ್ದದ ಹಿಮಾಲಯದ ಈ ಭವ್ಯ ನೋಟ, ನಮ್ಮೊಳಗಿನ ಕ್ಷುದ್ರತೆಯನ್ನು ನಿವಾಳಿಸಿ ಒಗೆಯಬಲ್ಲದು. 'ಹಿಮಾದ್ರಿತ ದೃಶ್ಯ, ಆಧ್ಯಾತ್ಮಿಕ ವ್ಯಕ್ತಿತ್ವ, ಚಾರಿತ್ರಿಕ ಶುದ್ಧಿ, ವಿವೇಕ, ತ್ಯಾಗ-ವೈರಾಗ್ಯಗಳ ಅಸೀಮ ಅನಂತ ಭಾವವು, ನಿಶ್ಚಲವಾದ, ನೀರವವಾದ, ಭೂಮವಾದ ಧ್ಯಾನ ಪರ್ವತದ ಮಹಾ ಗಾಂಭೀರ್ಯ, ಅವ್ಯಕ್ತ ನಿನಾದದಂತೆ' ಎಂಬ ಕುವೆಂಪು ಭಾವಲಹರಿ ಅತಿ ಸುಂದರವಾಗಿ ಸಾಕ್ಷಾತ್ಕಾರಗೊಳ್ಳುವ ಮಾಯಾವತಿ, ಪ್ರಶಾಂತ, ಭವ್ಯ, ಸುಖ ಶೀತಲ.

## ಗಾಂಧಿ ಕಂಡ ಕೌಸಾನಿ

ಆಲ್ಮೋರಾದಿಂದ ಐವತ್ತು ಕಿ.ಮೀ. ದೂರವಿರುವ ಗಿರಿಧಾಮ ಕೌಸಾನಿ. ಸೋಮೇಶ್ವರ ಕಣಿವೆ ಪ್ರಪಾತದ ಸುಂದರ ಹಾದಿ. ೧೯೨೯ರ ಬೇಸಿಗೆಯಲ್ಲಿ ಗಾಂಧೀಜಿ ಎರಡು ವಾರ ಇಲ್ಲಿ ತಂಗಿದ್ದರು. ಅವರ ಈ ಭೇಟಿ, ಈ ಭಾಗದ ಸ್ವಾತಂತ್ರ್ಯ ಹೋರಾಟಕ್ಕೆ ಬಲ ತುಂಬಿತ್ತು. 'ಗಾಂಧೀಜಿ ಅವರಲ್ಲಿರುವ ಸೃಜನಶೀಲ, ಚೇತೋಹಾರಿ, ಅಂತರಂಗದ ಅಗಾಧತೆಗೆ ಬೆರಗಾಗಿದ್ದೇನೆ. ಅವರ ಭಾವನೆಗಳು ಬರಹಗಳಾಗುವ ಪರಿ, ಅಚ್ಚರಿ ಹುಟ್ಟಿಸುವಂತಹದ್ದು. ನಾನೂ ಏನೇನೊ ತಿಪ್ಪರಲಾಗ ಹಾಕಿದರೂ ಮಹಾತ್ಮರಂತೆ ಹಿಮಾಲಯದ ಸೌಂದರ್ಯವನ್ನು ಅಕ್ಷರಗಳಲ್ಲಿ ಸೆರೆಹಿಡಿಯದೆ ಸೋತು ಹೋದೆ.' ಇವು ಗಾಂಧೀಜಿಯ ಮೊಮ್ಮಗ ರಾಜ್‌ಮೋಹನ್ ಗಾಂಧಿ ಅವರ, 'ಮೋಹನದಾಸ' ಪುಸ್ತಕದಲ್ಲಿನ ಗಾಂಧೀಜಿಯ ಕೌಸಾನಿ ಭೇಟಿಯ ಬಗ್ಗೆ ಬರೆದಿರುವ ಸಾಲುಗಳು. ಕೌಸಾನಿಯ ರುದ್ರರಮಣೀಯ ಸೌಂದರ್ಯದಿಂದ ಮಂತ್ರಮುಗ್ಧರಾಗಿದ್ದ ಗಾಂಧಿ ಅಲ್ಲಿ ತಂಗಿದ್ದ ಅವಧಿಯಲ್ಲಿ ಗುಜರಾತಿ ಭಾಷೆಗೆ ತಾವು ತರ್ಜುಮೆ ಮಾಡಿದ್ದ 'ಭಗವದ್ಗೀತೆ' ಮತ್ತು ಅದಕ್ಕೆ ಬರೆದಿದ್ದ ವ್ಯಾಖ್ಯಾನಕ್ಕೆ ಒಂದು ಪ್ರಸ್ತಾವನೆಯನ್ನು ಬರೆದರು. ಅದು ಈಗ 'ಅನಾಸಕ್ತಿಯೋಗ' ಎಂದೇ ಪ್ರಸಿದ್ಧವಾಗಿದೆ ಮತ್ತು ಅವರು ಇದನ್ನು ಬರೆಯಲು ತಂಗಿದ್ದ ಕುಟೀರ ಈಗ ಅನಾಸಕ್ತಿಯೋಗ ಆಶ್ರಮವೆಂದೇ ಹೆಸರಾಗಿ ಪ್ರವಾಸಿಗರ ದೊಡ್ಡ ಆಕರ್ಷಣೆಯಾಗಿದೆ. ಕೌಸಾನಿಯ ಪ್ರಕೃತಿ ಸೌಂದರ್ಯಕ್ಕೆ ಮನಸೋತ ಗಾಂಧೀಜಿ ಹೀಗೆ ಉದ್ಗರಿಸಿದ್ದರು:

'ಈ ಯೋಚನೆಗಳು ಮತ್ತೆ ಮತ್ತೆ ನನ್ನನ್ನು ಮುತ್ತಿಕೊಳ್ಳುತ್ತಿವೆ. ಹಿಮಶ್ವೇತ ಕುಲಾವಿ ಧರಿಸಿದ, ಸೂರ್ಯ ರಶ್ಮಿಯಲ್ಲಿ ಫಳಫಳ ಹೊಳೆಯುತ್ತಿರುವ ಈ ಧವಳ ಗಿರಿ ಶೃಂಗಗಳನ್ನು ಕಂಡಾಗ ಇಂತಹ ಆಲೋಚನೆ ಮತ್ತೆ ಮತ್ತೆ ನನ್ನ ಮನಸ್ಸನ್ನು ಆವರಿಸಿಕೊಳ್ಳುತ್ತಿದೆ... ಗಂಗಾ, ಯಮುನಾ, ಬ್ರಹ್ಮಪುತ್ರ, ಸಿಂಧೂ ನದಿಗಳಿಲ್ಲದಿದ್ದರೆ, ಹಿಮಾಲಯ ಪರ್ವತ ಇಲ್ಲದಿದ್ದರೆ, ಮಳೆ ಬರುತ್ತಿರಲಿಲ್ಲ. ಆಗ ಭಾರತ ಸಹಾರಾದಂತೆ ಮರುಭೂಮಿಯಾಗಿಬಿಡುತ್ತಿತ್ತು'

ಸದ್ದುಗದ್ದಲಗಳಿಂದ, ಜಂಜಾಟಗಳಿಂದ ಮುಕ್ತವಾದ ಹಿಮಾಲಯದ



ಕೌಸಾನಿಯಿಂದ ಕಾಣುವ ಹಿಮಾಲಯ ಪರ್ವತ ಶ್ರೇಣಿ

ನಿರುಂಬಳ ವಾಸ್ತವ್ಯ ಗಾಂಧಿಗೆ ಚೇತೋಹಾರಿಯಾಗಿತ್ತು. ರಾಷ್ಟ್ರದ ಉದ್ದಗಲ ತಿರುಗಾಡುತ್ತಾ ಜನಸ್ತೋಮದ ಬದುಕನ್ನು ನೋಡುವುದರಲ್ಲಿ, ಆಲಿಸುವುದರಲ್ಲಿ ಮುಳುಗಿ ಹೋಗಿದ್ದ ಅವರಿಗೆ ನಿಸರ್ಗದೊಂದಿಗೆ ಒಡನಾಟ-ಆಪ್ತ ಸಂಪರ್ಕಗಳು ಸಾಧ್ಯವಾಗೇ ಇರಲಿಲ್ಲ. ಈ ಹಿಮಾಲಯದ ಬಹುಮುಖ ಸೌಂದರ್ಯವನ್ನು ಆಸ್ವಾದಿಸುತ್ತಾ ತಮ್ಮ ಕಲ್ಪನಾಲಹರಿಯನ್ನು ಮುಗ್ಧತೆಯಿಂದ ಹೀಗೆ ತೇಲಿಬಿಡುತ್ತಾರೆ:

'ಮಕ್ಕಳು ಈ ದೃಶ್ಯವನ್ನು ಕಂಡಲ್ಲಿ ಪರ್ವತ ದೂದ್ ಫೇಡಾದಿಂದ ನಿರ್ಮಿಸಲಾದ ಗಿರಿಶೃಂಗವಿದ್ದೀತೆ ಎಂದು ತಮ್ಮೊಳಗೇ ಅಂದುಕೊಳ್ಳಬಹುದು. ಏರಬೇಕು, ಈ ಪರ್ವತದ ಶಿಖರವನ್ನು ತಲುಪಿ, ಅಲ್ಲಿ ಪರ್ವತದ ನೆತ್ತಿಯ ಮೇಲೆ ಕುಳಿತು ಈ ಸಿಹಿ ತಿಂಡಿಯನ್ನು ಮೆಲ್ಲಬೇಕು ಎಂದು ಮಕ್ಕಳು ಆಸೆ ಪಡಬಹುದು. ಇನ್ನು ನನ್ನಂತೆ ಚರಕದ ಹುಚ್ಚು ಹಿಡಿಸಿಕೊಂಡವರು, ಈ ಹಿಮವತ್ಪರ್ವತ ಹತ್ತಿಯ ಬೆಟ್ಟದಂತೆ, ಮುಗಿಯದ ರೇಶಿಮೆಯ ದಾಸ್ತಾನಿನಂತೆ ಎಂದು ಉದ್ಗರಿಸಬಹುದು. ಪಾರ್ಸಿ ಭಕ್ತನೊಬ್ಬ ಈ ದೃಶ್ಯ ಕಂಡಲ್ಲಿ ಅವನು ಸೂರ್ಯದೇವನಿಗೆ ತಲೆಬಾಗಿ ಹೀಗೆ ಉದ್ಗರಿಸಬಹುದು; 'ಈ ಪರ್ವತಗಳತ್ತ ಒಮ್ಮೆ ಕಣ್ಣು ಹಾಯಿಸಿ, ಇವು ಹೇಗೆ, ಇದೇ ತಾನೆ ಪೆಟ್ಟಿಗೆಯಿಂದ ಹೊರತೆಗೆದ ಶುಭ್ರ ಹಾಲು ಬಿಳುಪಿನ ಪಗಡಿ ಮತ್ತು ನಿಲುವಂಗಿಗಳನ್ನು ಧರಿಸಿದ ನಮ್ಮ ಪುರೋಹಿತರಂತೆ. ಅಷ್ಟೇ ಶುಭ್ರವಾದ ಅದೇ ತಾನೆ ಇಸ್ತ್ರಿ ಮಾಡಿದ ಹಾಲುಬಿಳುಪಿನ ನಿಲುವಂಗಿಗಳನ್ನು ತೊಟ್ಟು, ಅಚಲರಾಗಿ ಕೈಮುಗಿದು ನಿಂತು ಸೂರ್ಯದೇವರ ದರ್ಶನದಲ್ಲಿ ತಲ್ಲೀನರಾಗಿರುವ ನಮ್ಮ ಪುರೋಹಿತರಂತೆ ಕಾಣುತ್ತದೆ ಈ ಪರ್ವತ ಶಿಖರಗಳು'

ದೂರದ ಮೋಡಗಳು ಹನಿಸಿದ ನೀರಿನಿಂದ ತೊಯ್ದು ಹಿಮಮಣಿಗಳಿಂದ, ಥಳಥಳಿಸುತ್ತಿರುವ ಹಿಮಾಲಯ ಪರ್ವತ, ಹಿಂದೂ ಭಕ್ತನಿಗೆ-ಸಾಕ್ಷಾತ್ ಶಿವನಂತೆ, ಕರುಣಾಸಾಗರ ಈಶ್ವರನಂತೆ... ಗಂಗೆಯನ್ನು ತನ್ನ ಶಿಖೆಯಲ್ಲಿ ಧರಿಸಿ ಭಾರತವನ್ನು ಜಲಪ್ರಳಯದಿಂದ ಪಾರು ಮಾಡಿದ ಭಗವಾನ್ ಶಿವನಂತೆ ಕಾಣಿಸುತ್ತದೆ.'

ಇಷ್ಟೇ ಅಲ್ಲ, ಗಾಂಧಿ ಇದರಲ್ಲಿ ಜೀವಾಧಾರವಾದ ಶಕ್ತಿಯನ್ನು ಕಾಣುತ್ತಾರೆ. ಜೀವಪೋಷಕ ದ್ರವ್ಯವಿದೆ ಎನ್ನುತ್ತಾರೆ-

'ಪ್ರಿಯ ವಾಚಕರೇ, ನಿಜವಾದ ಹಿಮಾಲಯ ಇರುವುದು ನಮ್ಮ ಹೃದಯದಲ್ಲಿ.... ನಿಜವಾದ ಯಾತ್ರೆ... ಆ ಗುಹೆಯೊಳಗೆ ಆಶ್ರಯ ಪಡೆದು ಅಲ್ಲಿ, ಶಿವನ ದರ್ಶನ ಪಡೆಯುವುದೇ ಆಗಿದೆ.' (ನವಜೀವನ: ೧೪ ಜುಲೈ, ೧೯೨೯)

ಗುರುದೇವ ರವೀಂದ್ರನಾಥ ಟಾಗೋರ್ ಸೇರಿದಂತೆ, ಹಲವು ಹತ್ತು ಭಾರತೀಯ ಹಾಗೂ ಪೂರ್ವ-ಪಶ್ಚಿಮ ಖಂಡಗಳಿಂದ ಬಂದ ಅನುಭಾವಿಗಳು, ದಾರ್ಶನಿಕರು, ತತ್ವಜ್ಞಾನಿಗಳು, ಲೇಖಕರು, ಕಲಾವಿದರು, ಸಂಗೀತಗಾರರು, ಆಲ್ಮೋರಾ ಹಾಗೂ ಸುತ್ತಮುತ್ತ ನೆಲೆಸಿ ಹೋಗಿದ್ದಾರೆ. ಇವರ ದೊಡ್ಡ ಪಟ್ಟಿಯೇ ಇದೆ. ನೀವೂ ಬನ್ನಿ, ಆಲ್ಮೋರಾಕ್ಕೆ.



**(ಇಂಜಿನಿಯರಿಂಗ್ ಪದವೀಧರರಾದ ದಿವಾಕರ್ ಬೆಂಗಳೂರಿನಲ್ಲಿ ಯಂತ್ರೋಪಕರಣಗಳ ಬಿಡಿಭಾಗಗಳ ಕಾರ್ಖಾನೆಯೊಂದರ ಪಾಲುದಾರ ಮಾಲೀಕರಲ್ಲೊಬ್ಬರಾಗಿದ್ದು ಸದ್ಯಕ್ಕೆ ಆಲ್ಮೋರಾದಲ್ಲಿ ವಾಸಿಸುತ್ತಿದ್ದಾರೆ.)**

# ನವಿಲುಗರಿ

## ಎಲ್ಲಿಂದೆಲ್ಲಿಗೋ

ಮಳೆಯ ದಿನ ಮುತ್ತು ಸುರಿಸಿದ
ಗಳಿಗೆಯೊಂದರೆ ಪ್ರೀತಿಗಾಗಿ
ಸೆಡೆತ ಮೈಮನಗಳಲ್ಲಿ ತೀವ್ರ ರಕ್ತಸಂಚಾರ
ಮುನ್ನುಗ್ಗಿ, ಹಿಮ ಕರಗಿದಂತೆ ಹರಿಯುತ್ತೇನೆ
ಒಮ್ಮೊಮ್ಮೆ

ಅಲ್ಲಿ ತಬ್ಬುವ ದಡಗಳಿಲ್ಲದೆ ಹಿಮಗಟ್ಟುತ್ತವೆ
ಹರಿದ ಹನಿ ಮುತ್ತುಗಳು
ಹಳೆಯ ಸ್ಮಾರಕದಂತೆ ಘನವಾಗಿ
ಆದರೂ ಅದರೊಳಗೆ ಮೈಬಿಚ್ಚಿ ನುಲಿಯುವ
ಬಣ್ಣದ ಮೀನಿನ ಕನಸುಗಳಿಗೆ
ಟೊಳ್ಳುಗಟ್ಟುತ್ತೇನೆ ಎದೆಯ

ಹಿಮದ ದಾರಗಳ ನೇತುಬಿಟ್ಟ
ಸೂಜಿಮೊನೆಯ ಮರದ ಮೇಲೆ
ಬಾಲದಂಡೆಯ ಹಕ್ಕಿ ಕರ್ರನೆ ....
ಕರೆಯಿತ್ತ ದಿಕ್ಕಲ್ಲಿ ಹಿಮಗರಡಿ ಹಾರಿ
ಹಿಮಗಡ್ಡೆಯ ಸೀಳಿ ಮೀನ ಹಿಡಿದಿರುತ್ತದೆ

ಇದೊಂದನ್ನೂ ಅರಿಯದೆ ಸೀಲ್ಗಳು
ಕರಗಿದ ಸರೋವರದ ಇನಿತು
ನೀರ ಹೊಂಡದಲ್ಲಿ ಲಾಗ ಹಾಕುತ್ತವೆ
ಮುದಿಸೀಲಿಗೆ ಮೈಭಾರ ಕರಗಿಸುವ ವೃತ್ತ
ತಿರುಗಿ ಕಲ್ಲುಬಂಡೆಯ ತಾಕಿ
ಹಿಮಗಾಳಿಗೆ ಮೀಸೆಯರಳಿಸುತ್ತದೆ

ಪೆಂಗ್ವಿನ್ ದಂಡು ದಂಡೆಯುದ್ದಕ್ಕೂ
ಬಸುರಿ ಹೆಂಗಸರು ಮೆರವಣಿಗೆ ಹೊರಟಂತಿವೆ
ಹಿಮದ ಹುಸುಕೊಳಗೇ ಹೂತ ಕಾಲನ್ನೆತ್ತಿಡುತ್ತಾ ...
ಯಾವುದೋ ದೊಡ್ಡ ಹೆಜ್ಜೆ ಗುರುತು
ಪರ್ವತವ ಬಳಸಿ ದಾಟಿದ್ದು ಕಾಣಿಸುತ್ತಿದೆ

ನನ್ನ ಬೇಲಿಯೊಳಗಿನ ಕನಸು ಏಳುಕೀಳು
ಸಮುದ್ರವನ್ನೂ ದಾಟಿ ಹಿಮಪರ್ವತದಲ್ಲೇಕೆ
ಅಲೆಯುತ್ತಿದೆ ಅನಾಥವಾಗಿ ಅದೂ ಅಲ್ಲಿ ....
ಹಿಮಮಾನವನ ಮೊಳದುದ್ದ ಹೆಜ್ಜೆಗುರುತನ್ನಷ್ಟೇ
ಕಂಡಲ್ಲಿ....
ಅವನ ಗುಹೆಯಲ್ಲಿ ನಿನ್ನೊಲವ ಬಚ್ಚಿಟ್ಟಿದ್ದೀಯೇನು?
ಅನುಮಾನವೆನಗೆ!
ಹೂಗುಡದೆ ಕಥೆ ಹೇಳಲ್ಲ ಅನ್ನುತ್ತಿದ್ದ
ಅಜ್ಜಮ್ಮನಂತೆ....

ನವರಂಗಿ ಗಿಳಿಯೊಂದು ಕಿಚಿಗುಡುತ
ಹಾರಿಹೋಗುತ್ತಿದೆ ದೂರ ದೂರ .....
ನಿನ್ನ ಪ್ರಾಣವಿದೆಯೇ? ಕೇಳೋಣವೆಂದರೆ
ಅಜ್ಜಮ್ಮ ಗೊಣಗಿದಂತಾಯಿತು ಕಿವಿಯಲ್ಲಿ.....
“ಓಡಿ ಹೋಗೋಳು ಹೆಪ್ಪಾಕಾಳಾ ಬಾ ಹಾಲಿಗೆ”
ನಿದ್ದೆ ಮಾಯವಾಗಿತ್ತು ! ಎಚ್ಚರಾಗಿತ್ತು.

–ಹೆಚ್. ಆರ್. ಸುಜಾತಾ









ಚಿತ್ರಗಳು: ಗುಜ್ಜಾರ್

## ಬೆಳಗು ರಸ್ತೆ

ಹೊತ್ತು ಮೂಡುವ ಮೊದಲೆ ಎದ್ದು ಕೆಲಸಕ್ಕೆ ಹೊರಟವನಿಗೆ
ಮನೆ ಬಾಗಿಲಿಗೆ ಬೀಗ ಹಾಕಲು ಮರೆವು.
ತುಳಸಿ ಕಟ್ಟೆಯ ಮುಂದೆ ಮಲಗಿ ಬೀಳ್ಕೊಡುವ
ಮನೆಯೊಡತಿಯಿಟ್ಟ ರಂಗೋಲಿ.
ಪರಂಗಿಗಳ ಸೇವೆಗೆ ಹೊರಟವನ ನೋಡಿ
ಸಂಸ್ಕೃತಿಯ ಚಿಹ್ನೆಯೊಂದು ನಕ್ಕಂತೆ ಭಾಸ ನನಗೆ.
ಮನೆ ಗೇಟು ದಾಟಿದರೆ ಬೇರೆಯದೇ ಲೋಕ.

ಮುಖಕ್ಕಿಷ್ಟು ನೀರು ಚುಮುಕಿಸಿಕೊಂಡು ಹೊರಬಂದ
ಗಿರಾಕಿಯ ಕಾಯುತ್ತ ಅಂಗಡಿಯ ಮುಂದೆ ನಿಂತ ಕ್ಷೌರಿಕ.
ಜೋಡಿ ಪೊರಕೆಯನಿಡಿದು ಕಸಗುಡಿಸುವ
ಮಲಗಿದ್ದ ಧೂಳನೆಬ್ಬಿಸಿ ಕುಡಿದು, ನನಗೂ ಕುಡಿಸುವ
ಮುನಿಸಿಪಾಲಿಟಿಯ ಹೆಂಗಸರು.
ಪ್ರತಿ ಮನೆಯ ಮುಂದೆ ವಿಲೇವಾರಿಗೆ ಕಾಯುತ್ತಾ ಕುಳಿತ
ಹಿಂದಿನ ದಿನದ ಕಸದ ಬುಟ್ಟಿಗಳು ರಸ್ತೆಯುದ್ದಕ್ಕೂ.
ನಿತ್ಯದರ್ಶನ.

ತಿಲಕನಗರ ಸ್ಲಮ್ಮಿನ ಅಡ್ಡರಸ್ತೆಯ ತಿರುವಿನಿಂದ
ಗುಟುರು ಹಾಕುತ್ತ ನುಗ್ಗಿಬರುವ ಸ್ಕೂಟರು.
ತುರ್ತುಕಾರ್ಯಕ್ಕೆ ಗೆಳೆಯರ ಸವಾರಿ.
ಒಟ್ಟೊಟ್ಟಿಗೆ ಬರುವ ಭಯ ಮತ್ತು ಸಿಟ್ಟು.
ದಡಬಡಿಸಿ ಸಾಗುವ ಮಣಾ ಮಣಾ ಸದ್ದಿನ ಲಾರಿ.
ಅಂಗಡಿಗಳ ಮುಂದೆ ಮಲಗಿರುವ ಬೀದಿನಾಯಿಗಳು.

ಮೈಮರೆತು ನಡೆಯುವ ಯುವಕನನ್ನು ಅಡ್ಡಗಟ್ಟುವ
ದ್ವಿಲಿಂಗಿಗಳು.
ಚಪ್ಪಾಳೆಗೂ ಕೂಡ ಇಲ್ಲಿ ದಂಡ ತೆರಬೇಕು.
ಕಾಲುದಾರಿಯ ಸಂದಿನಲ್ಲಿರುವ ಕೊಬ್ಬರಿಯಂಡಿಗೆ
ಪೇದೆಯ ಭೇಟಿ.
ಹುಳಿಮಾವಿಗೆ ಹೋಗಲು ಬಸ್ಸಿನ ಸಂಖ್ಯೆ ಕೇಳುವ,
ಉತ್ತರ ಸಿಗದೆ ಮೂಲೆಯಲ್ಲಿ ನಿಂತು ಬೀಡಿ ಸೇದುವ
ಹಳ್ಳಿಗ ನಿಲ್ದಾಣದಲ್ಲಿ.

ಕಂಪನಿ ಬಸ್ಸಿನ ಚಾಲಕ ನನ್ನೆದುರಿಗೆ ಬಸ್ಸು ನಿಲ್ಲಿಸುತ್ತಾನೆ.
ಬಸ್ಸು ಹತ್ತಿದರೆ ಕಿಟಕಿ ನೋಟ ಶುರು.
ಪೇದೆಯ ಕೈಲಿ ಕೊಬ್ಬರಿ, ದ್ವಿಲಿಂಗಿಗಳ ಕೈಲಿ ದುಡ್ಡು,
ಹೆಂಗಸರ ಕೈಲಿ ಪೊರಕೆ, ಹಳ್ಳಿಗನ ಕೈಲಿ ಬೀಡಿ,
ನಿತ್ಯ ನಡೆಯುವ ಬೆಳಗಿನ ಮಂಗಳಾರತಿ.



–ಚರಣರಾಜ ಎಂ.ಜಿ.

### ಪತ್ರಿಕೆಗೆ ಬರಹ–ಪುಸ್ತಕಗಳನ್ನು ಕಳಿಸುವುದು ಬೇಡ

‘ಹೊಸ ಮನುಷ್ಯ’ ಪೂರ್ಣ ಪೂರ್ವನಿಯೋಜನೆಯೊಂದಿಗೆ, ಪ್ರಧಾನವಾಗಿ ಆಹ್ವಾನಿತ ಬರಹಗಳನ್ನೊಳಗೊಂಡ ಪತ್ರಿಕೆಯಾಗಿರುವುದರಿಂದ ದಯವಿಟ್ಟು ಯಾರೂ ಸ್ವ ಇಚ್ಛೆಯಿಂದ ಪ್ರಕಟಣೆಗಾಗಿ ಕವನ–ಕಥೆ ಸೇರಿದಂತೆ ಯಾವುದೇ ಬರಹವನ್ನು ಅಥವಾ ಅವಲೋಕನಕ್ಕಾಗಿ ಪುಸ್ತಕಗಳನ್ನು ಕಳಿಸಬಾರದೆಂದು ಕೋರುತ್ತೇವೆ. ಅವಲೋಕನಕ್ಕಾಗಿ ಪುಸ್ತಕಗಳನ್ನು ಪತ್ರಿಕೆಯೇ ಆಯ್ದು ಸಂಬಂಧಪಟ್ಟವರಿಂದ ತರಿಸಿಕೊಳ್ಳುವುದು.

ಪತ್ರಿಕೆಯಲ್ಲಿನ ಲೇಖನಗಳಿಗೆ ಪ್ರತಿಸ್ಪಂದಿಸಬಯಸುವವರು, ತಮ್ಮ ಪ್ರತಿಕ್ರಿಯೆಗಳನ್ನು ಸಂಕ್ಷಿಪ್ತವಾಗಿ–ಸಾಮಾನ್ಯ ಸಂದರ್ಭಗಳಲ್ಲಿ ನೂರು ಪದಗಳನ್ನು ಮೀರದಂತೆ– ಆಯಾ ತಿಂಗಳ ೨೦ರೊಳಗಾಗಿ ನಮಗೆ ತಲುಪುವಂತೆ ಬರೆದು ಕಳಿಸಬಹುದು/ಮೇಲ್ ಮಾಡಬಹುದು–ಸಂ.

ಧರ್ಮವಿಚಾರ ಪುಟ

# ಯೂಜಿ ವಿಚಾರಗಳು

–ಪ್ರಶಾಂತ್ ಸಿ.



ಯೂಜಿ ಎಂದೇ ಅವರ ಅನುಯಾಯಿಗಳ ಮಧ್ಯೆ ಪರಿಚಿತರಾಗಿರುವ ಯು. ಜಿ. ಕೃಷ್ಣಮೂರ್ತಿ (೧೯೧೮ – ೨೦೦೭), ಜಿದ್ದು ಕೃಷ್ಣಮೂರ್ತಿಯವರ ಸಮಕಾಲೀನರು. ಥಿಯೊಸೋಫಿಕಲ್ ಸೊಸೈಟಿಯ ಪ್ರವರ್ತಕರಾಗಿದ್ದ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿ, ವೇದಾಂತ, ಬೌದ್ಧಧರ್ಮದ ಚರ್ಚೆಗಳು ನಿತ್ಯವೂ ನಡೆಯುತ್ತಿದ್ದ ಪರಿಸರದಲ್ಲಿ ಬೆಳೆದು, ಮನಃಶಾಸ್ತ್ರ, ತತ್ವಶಾಸ್ತ್ರಗಳಲ್ಲಿ ಉನ್ನತ ಶಿಕ್ಷಣ ಪಡೆದರು. ನಂತರ ಚಿಕ್ಕ ವಯಸ್ಸಿನಲ್ಲೇ ಸೊಸೈಟಿಯ ಅಂತಾರಾಷ್ಟ್ರೀಯ ಭಾಷಣಕಾರರಾಗಿ, ಸೊಸೈಟಿಯ ಸಿದ್ಧಾಂತದಿಂದ ಭ್ರಮನಿರಸನರಾದ ಅವರು, ಜಿದ್ದು ಕೃಷ್ಣಮೂರ್ತಿಯವರಂತೆ ಥಿಯೊಸೋಫಿಕಲ್ ಸೊಸೈಟಿ ತೊರೆದು ಸ್ವಲ್ಪ ಕಾಲ ಜಿದ್ದು ಕೃಷ್ಣಮೂರ್ತಿಯವರ ಅನುಯಾಯಿಯಾಗಿದ್ದರು. ಆದರೆ ಅನತಿ ಕಾಲದಲ್ಲೇ ಯೂಜಿ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ ಜಿದ್ದು ಅವರಿಂದ ಸಂಬಂಧ ಕಡೆದುಕೊಂಡು ಯೂಜಿ, ಸ್ವಾಮಿ ಶಿವಾನಂದರೊಂದಿಗೆ ಕೆಲವು ವರ್ಷಗಳ ಕಾಲ ಹಿಮಾಲಯದಲ್ಲಿ ನೆಲೆಸಿ, ಯೋಗ ಮತ್ತು ಧ್ಯಾನಾಭ್ಯಾಸ ಮಾಡಿದರು.

ಆದರೆ ಎಲ್ಲಾ ಸಾಧನೆ, ಬೋಧನೆ ಮತ್ತು ಮಾರ್ಗಗಳು ತಮ್ಮ ಆತ್ಮಸಾಕ್ಷಾತ್ಕಾರದ ಉತ್ಕಟ ಇಚ್ಛೆಗೆ ಮಾರಕವಾದುವೆ ಹೊರತು ಪೂರಕವಾದುವಲ್ಲವೆಂದು ಅರಿತು ನಂತರ ಅವನ್ನೆಲ್ಲಾ ಯೂಜಿ ಧಿಕ್ಕರಿಸಿದರು. ಆದ ಕಾರಣ ಅವರು ಗುರು ಪರಂಪರೆಯನ್ನು ಮತ್ತು ಆತ್ಮ ಸಾಕ್ಷಾತ್ಕಾರದ ಪ್ರಯತ್ನಗಳನ್ನು ತೀವ್ರವಾಗಿ ಖಂಡಿಸಲು ಅನುವಾದರು. ೧೯೬೭ರಲ್ಲಿ ತಮಗೆ ಆದ ಅಬೋಧಿತ ತೀಕ್ಷ್ಣ ಅನುಭವ ತಮ್ಮನ್ನು ಮನುಷ್ಯನ 'ಸಹಜ ಸ್ಥಿತಿ'ಗೆ ಶಾಶ್ವತವಾಗಿ ಮರಳಿಸಿತು ಮತ್ತು ಆ ಸ್ಥಿತಿಗೆ ತಲುಪಲು ಯಾವ ಗುರುವೂ, ಬೋಧನೆಗಳೂ ಅಥವಾ ಆತ್ಮಸಾಕ್ಷಾತ್ಕಾರದ ಪಾರಂಪಾರಿಕ ಸಾಧನಗಳೂ ಸಹಾಯಕವಾಗಲಿಲ್ಲ ಎಂದು ಹೇಳಿಕೊಂಡರು. ತಾವು ಕಂಡುಕೊಂಡಿರುವ 'ಸಹಜ ಸ್ಥಿತಿ'ಯಿಂದ ಯಾರಿಗೂ ಯಾವ ಸಹಾಯವನ್ನೂ ಮಾಡಲು ಸಾಧ್ಯವಿಲ್ಲ ಮತ್ತು ಅದನ್ನು ಭಾಷೆಯ ಮೂಲಕ ವ್ಯಕ್ತಪಡಿಸಲೂ ಅಸಾಧ್ಯ ಎಂದು ಆಧ್ಯಾತ್ಮದ ವಿಚಾರದಲ್ಲಿ ಅವರ ಸಹಾಯ ಕೋರಿ ಹೋಗುತ್ತಿದ್ದವರಿಗೆ ತಿಳಿಹೇಳುತ್ತಿದ್ದರು. ಮನುಷ್ಯ, ಎಲ್ಲಾ ಮಾರ್ಗಗಳನ್ನೂ, ಆದರ್ಶಗಳನ್ನೂ, ಗುರುಗಳನ್ನೂ ಮತ್ತವರ ತತ್ವಬೋಧನೆಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸಿದಾಗ ಮಾತ್ರ ಪ್ರಕೃತಿಗೆ ಆ ಮನುಷ್ಯನನ್ನು 'ಸಹಜ ಸ್ಥಿತಿ'ಗೆ ಮರಳಿಸಲು ಸಾಧ್ಯವಾದೀತು ಎಂದು ತಮ್ಮ ಅನುಯಾಯಿಗಳಿಗೆ ಹೇಳುತ್ತಿದ್ದ ಯೂಜಿ, ತಮ್ಮ ಅನುಭವದ ಹೇಳಿಕೆಗಳಿಗೆ ಯಾವುದೇ ಸೈದ್ಧಾಂತಿಕ ರೂಪ–ವಿನ್ಯಾಸ ಕೊಡಲು, ಸಾಂಸ್ಥೀಕರಿಸಲು ಅಥವಾ ಹೊಸ ಪರಿಭಾಷೆ ಸೃಷ್ಟಿಸಲು ತಮ್ಮ ಜೀವನದ ಅಂತ್ಯದವರೆಗೂ ಖಡಾ ಖಂಡಿತವಾಗಿ ನಿರಾಕರಿಸಿದರು.

 ಪ್ರಕೃತಿಯು ಪರಿಪೂರ್ಣ ಅದ್ವಿತೀಯ ವ್ಯಕ್ತಿಗಳನ್ನಷ್ಟೇ ಸೃಷ್ಟಿಸುವಲ್ಲಿ ಸತತವಾಗಿ ಕಾರ್ಯ ನಿರತವಾಗಿದೆ. ಆದರೆ ಸಂಸ್ಕೃತಿ ಒಂದೇ ಒಂದು ಎರಕವನ್ನು ಹುಟ್ಟುಹಾಕಿ ಎಲ್ಲರೂ ಅದಕ್ಕೆ ಅನುರೂಪವಾಗಿರುವಂತೆ ಮಾಡಿದೆ. ಇದೊಂದು ಘೋರ ವಿಕಾರ.

 ನಾವು ಜೀಸಸ್, ಬುದ್ಧ ಮತ್ತು ಕೃಷ್ಣರಂತಹ ಆದರ್ಶಗಳನ್ನು ರಚಿಸಿಕೊಂಡಿರುವುದರಿಂದ, ಪ್ರಕೃತಿ ಅನನ್ಯ ವ್ಯಕ್ತಿಗಳನ್ನು ಸೃಷ್ಟಿಸುವ ಸಾಧ್ಯತೆಯನ್ನೇ ನಾಶಗೊಳಿಸಿದ್ದೇವೆ.

 ಯಾವುದೋ ಒಂದು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಸಂಸ್ಕೃತಿ ಅದನ್ನು ಹತ್ತಿಕ್ಕುತ್ತಿದೆ. ಅದು ಈ ಸಂಸ್ಕೃತಿಯನ್ನು ಸಾರಾಸಗಟಾಗಿ ಹೊರಗೆಸೆದಾಗ ಮಾತ್ರವೇ ಅದಕ್ಕೆ ತನ್ನದೇ ಆದ ಅನನ್ಯ ರೀತಿಯಲ್ಲಿ ವ್ಯಕ್ತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

 ನಾವು ಮನುಷ್ಯರು ಪ್ರಪಂಚದ ಬೇರೆ ಯಾವುದೇ ವಸ್ತುವಿಗಿಂತ ಹೆಚ್ಚಿನ ಘನೋದ್ದೇಶ ಅಥವಾ ಅರ್ಥಪೂರ್ಣತೆ ಹೊಂದಿಲ್ಲ. ಅಲ್ಲಿ ಇರುವ ಇರುವೆಗಳು ಅಥವಾ ಹಾರಾಡುತ್ತಿರುವ ನೊಣಗಳು ಅಥವಾ ನಮ್ಮ ರಕ್ತ ಹೀರುತ್ತಿರುವ ಸೊಳ್ಳೆಗಳಿಗಿಂತ ಮಹತ್ವದ್ದಾದ ಉದ್ದೇಶ ಸಾಕಾರಗೊಳಿಸಕ್ಕಾಗಿ ನಮ್ಮ ಸೃಷ್ಟಿಯಾಗಿಲ್ಲ.

 ನೀನು ನಿನ್ನ ಸಮಾಜದ ಆಲೋಚನೆಗಳನ್ನು ಯೋಚಿಸುತ್ತೀಯ, ನಿನ್ನ ಸಮಾಜದ ಭಾವನೆಗಳನ್ನು ಭಾವಿಸುತ್ತೀಯ, ನಿನ್ನ ಸಮಾಜದ ಅನುಭವಗಳನ್ನು ಅನುಭವಿಸುತ್ತೀಯ. ಹೊಸ ಅನುಭವಗಳಾವುವೂ ನಿನಗೆ ಇಲ್ಲ.

 ಎಲ್ಲಿಯವರೆಗೂ ನಾವು ಆಲೋಚನೆಗಳಿಂದ ಎಲ್ಲವನ್ನೂ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತೇವೆಯೋ, ಅಲ್ಲಿಯವರೆಗೂ ವಿಶ್ವದ ಜೀವ ಶಕ್ತಿಯ ಸಂಪರ್ಕ ಮಾಡುವುದಕ್ಕಾಗುವುದಿಲ್ಲ.

 ನನ್ನ ಮನಸ್ಸು ಮತ್ತು ನಿನ್ನ ಮನಸ್ಸು ಎಂಬುವು ಇಲ್ಲ. ಇರುವುದೊಂದೇ ಮನಸ್ಸು – ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಂಡ ಮನುಷ್ಯನ ಎಲ್ಲಾ ತಿಳುವಳಿಕೆ, ಭಾವನೆಗಳ ಮತ್ತು ಅನುಭವಗಳ ಸಂಪೂರ್ಣ ಸಾರ ಅದು.

 ಆಲೋಚನೆಗಳು ನಮ್ಮ ಶತ್ರುಗಳು. ನಿನ್ನನ್ನು ಪ್ರತ್ಯೇಕಿಸಿ, ಏಕಾಂಗಿಯನ್ನಾಗಿ ಮಾಡುವುದು ಆಲೋಚನೆ. ಅದು ಗಡಿಗಳನ್ನು, ಎಲ್ಲೆಗಳನ್ನು ಸೃಷ್ಟಿಸುತ್ತದೆ. ಅದು ಇಲ್ಲದಾದಾಗ, ನಿನಗೆ ಯಾವುದೇ ಗಡಿಗಳಿರುವುದಿಲ್ಲ, ಅಪರಿಮಿತನಾಗುತ್ತೀಯ.

 ಆಲೋಚನೆಗಳು ನಮ್ಮ ಬೇಡಿಕೆಗಳಿಂದ ಹುಟ್ಟುತ್ತವೆ. ಸಂವಹನ ಒಂದೇ ಆಲೋಚನೆಗಳ ಉದ್ದೇಶ. ಅದಲ್ಲದೆ ಅವಕ್ಕೆ ಬೇರಾವುದೇ ಮೌಲ್ಯ ಇಲ್ಲ. ಜ್ಞಾನವೆಂಬುದು ವಸ್ತುಗಳಿಗೆ ಹೆಸರಿಡುವ ಪ್ರಕ್ರಿಯೆ ಮಾತ್ರ.

 ನಮ್ಮ ತಂತ್ರಜ್ಞಾನ ಮುಂದುವರಿದಂತೆ, ನಮ್ಮ ಮನುಕುಲ ಮತ್ತು ಪ್ರಪಂಚ ಸರ್ವನಾಶದತ್ತ ಮುನ್ನುಗ್ಗುತ್ತಿದೆ.

 'ನೀನು' ಹೋದರೂ ಮತ್ತು 'ನಾನು' ಹೋದರೂ, ಜೀವನ ಮುಂದುವರಿಯುತ್ತದೆ. ದೀಪಗಳು ಆರಿ ಹೋಗುತ್ತವೆ, ಆದರೆ ವಿದ್ಯುಚ್ಛಕ್ತಿ ಪ್ರವಹಿಸುತ್ತಿರುತ್ತದೆ.

 ತಿಳುವಳಿಕೆ ಎಂದರೆ ತಿಳುವಳಿಕೆಯ ಉತ್ಕಟ ಇಚ್ಛೆ ಇಲ್ಲದೆ ತಾನಾಗಿ ಬರುವಂತಹ ಅರಿವು.

 ಅರಿವು ಎಷ್ಟು ಪವಿತ್ರ ಎಂದರೆ ನೀನು ಅದನ್ನು ಪವಿತ್ರಗೊಳಿಸಲು ಮಾಡುತ್ತಿರುವ ಸಾಧನೆಗಳೆಲ್ಲವೂ ಅದನ್ನು ಅಪವಿತ್ರಗೊಳಿಸುತ್ತಲಿವೆ.

 ನಿನ್ನ 'ಸಹಜ ಸ್ಥಿತಿ'ಯನ್ನು ನೀನು ತಿಳಿಯಬೇಕಿಲ್ಲ. ಅದು ತನ್ನ ಕೆಲಸವನ್ನು ಮಾಡಲು ಅನುವು ಮಾಡಿಕೊಟ್ಟರೇ ಅಷ್ಟೇ ಸಾಕು. 'ಹೇಗೆ' ಎಂದು ಯಾರನ್ನಾದರೂ ಪ್ರಶ್ನಿಸಿದ ಕ್ಷಣ, ಅವರ ಮೇಲೆ ಅವಲಂಬಿತನಾಗುತ್ತೀಯ.

 ನೆಮ್ಮದಿ ಪಡೆದುಕೊಳ್ಳಲು ನೀನು ಮಾಡುತ್ತಿರುವ ಕಾರ್ಯಗಳೆಲ್ಲವೂ ಎಂದಿಗೂ ಇರುವ ನೆಮ್ಮದಿಯನ್ನು ಹಾಳುಮಾಡುತ್ತಿವೆ.

 ಎಲ್ಲಾ ಮಾರ್ಗಗಳನ್ನು ತಿರಸ್ಕರಿಸಿದ ಮೇಲೆಯೇ ನಿನ್ನದೇ ಆದ ಮಾರ್ಗ ಕಂಡುಕೊಳ್ಳಲು ಸಾಧ್ಯ.

 ಮನುಷ್ಯ ಮೊದಲನೇ ಬಾರಿ ಮನುಷ್ಯನಾಗುವುದು ಮನುಕುಲದ ಸಂಪೂರ್ಣ ಪರಂಪರೆಯ ಹೊರೆಯಿಂದ ತನ್ನನ್ನು ತಾನು ಬಿಡಿಸಿಕೊಂಡಾಗ. ಒಬ್ಬ ನಿಜವಾದ ಗುರು, ಅಂಥವನು ಇದ್ದರೆ, ಅವನು ನಿನ್ನನ್ನು ತನ್ನಿಂದ ಮುಕ್ತಗೊಳಿಸುತ್ತಾನೆ. ಮೂಲಭೂತ ಅಗತ್ಯಗಳನ್ನು ತ್ಯಜಿಸುವುದು ಆಧ್ಯಾತ್ಮಿಕತೆಯ ಲಕ್ಷಣವಲ್ಲ. ಆದರೆ ಆಹಾರ, ಬಟ್ಟೆ ಮತ್ತು ಸೂರುಗಳಿಗಿಂತ ಹೆಚ್ಚು ಸೌಲಭ್ಯಗಳನ್ನು ಅಪೇಕ್ಷಿಸುವುದು ತೀವ್ರ ಚಿತ್ತವಿಕೃತಿಯ ಲಕ್ಷಣ.

 ಇನ್ನೊಬ್ಬರೊಂದಿಗೆ ಎಷ್ಟೇ ನಿಕಟ ಸಂಬಂಧ ಇದ್ದರೂ ನಿನಗೆ ಅವರು ಹೇಳಿದ್ದು ತಿಳಿಯುವುದಿಲ್ಲ.. ನಿನಗೆ ತಿಳಿಯುವುದು ಅವರು ಹೇಳಿದ್ದರ ನಿನ್ನ ವ್ಯಾಖ್ಯಾನವಷ್ಟೆ

 ನಾನು ಎಂದಿಗೂ ಯಾರಾದರೂ ನನ್ನನ್ನು ಮಾದರಿಯನ್ನಾಗಿ ಇಟ್ಟುಕೊಂಡು ನನ್ನನ್ನು ಅನುಸರಿಸುವುದನ್ನು ಸೂಚಿಸುವುದಿಲ್ಲ.

 ನನ್ನದೇ ಆದ ಯಾವುದೇ ಬೋಧನೆಗಳಿಲ್ಲ. ರಕ್ಷಿಸಿ ಕಾಪಾಡುವಂತಹದ್ದು ಯಾವುದೂ ಇಲ್ಲ. ಬೋಧನೆ ಎಂದರೆ ಬದಲಾವಣೆಗಳನ್ನು ತರುವ ವಿಧಾನ. ಕ್ಷಮಿಸಿ, ಇಲ್ಲಿ ಅಂತಹ ಯಾವುದೇ ಬೋಧನೆಗಳಿಲ್ಲ, ಇರುವುದೆಲ್ಲ ಬರೀ ತುಂಡಾದ, ಸಂಬಂಧ ರಹಿತವಾದ ವಾಕ್ಯ ಸಂಗ್ರಹಗಳಷ್ಟೆ. ಅವು ನಾಯಿಯ ಬೊಗಳಿಕೆಯಂತೆ. ಅದನ್ನು ವ್ಯಾಖ್ಯಾನಿಸುತ್ತಿರುವುದು ನೀವು.

(ಸಿ. ಪ್ರಶಾಂತ್ ಬೆಂಗಳೂರಿನಲ್ಲಿ ವಾಸಿಸುವ ಓರ್ವ ಸಾಫ್ಟ್‌ವೇರ್ ಇಂಜಿನಿಯರ್)

# ಬೆಂಗಳೂರಿನಲ್ಲಿ 'ಗಾಂಧಿ ಉತ್ಸವ': 'ಗಾಂಧಿ ಕಥನ' ಬಿಡುಗಡೆ: ಒಂದು ವರದಿ




ಚಿತ್ರ ಕೃಪೆ: 'ಆಂದೋಲನ', ಮೈಸೂರು

'**ಗಾ**ಂಧಿಯು ವರ್ಣಭೇದ ನೀತಿಗೆ ಒಳಗಾಗಿ ಯಾವಾಗ ರೈಲಿನಿಂದ ಹೊರದಬ್ಬಿಸಿಕೊಂಡು ಆಚೆ ಬಿದ್ದು ಅಸ್ಪೃಶ್ಯರಾದರೋ ಆ ಗಳಿಗೆಯಲ್ಲೇ ಗಾಂಧಿ ಎಂಬ ವ್ಯಕ್ತಿಯ ಆತ್ಮಕ್ಕೆ ಎಲ್ಲಾ ನೊಂದು ಬೆಂದ ಅಸ್ಪೃಶ್ಯ ಆತ್ಮಗಳು ಸೇರಿಕೊಂಡವು ಎಂದು ಕಾಣುತ್ತದೆ. ಆಗಲೇ ಗಾಂಧಿ ಮಹಾತ್ಮನಾದ' ಎಂದು ಸಾಹಿತಿ ದೇವನೂರು ಮಹಾದೇವ ಹೇಳಿದರು. ಅವರು ಎಂ. ಚಂದ್ರಶೇಖರ್ ಪ್ರತಿಷ್ಠಾನ, ಬೆಂಗಳೂರು ಹಾಗೂ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ, ಇವರು ಸಂಯುಕ್ತವಾಗಿ ಕಳೆದ ಸೆಪ್ಟೆಂಬರ್ ೨೯ರ ಭಾನುವಾರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ 'ಗಾಂಧಿ ಹಬ್ಬ'ದ ಭಾಗವಾಗಿ ಡಿ.ಎಸ್.ನಾಗಭೂಷಣ ವಿರಚಿತ 'ಗಾಂಧಿ ಕಥನ' ಎಂಬ, ಕನ್ನಡದಲ್ಲಿ ಗಾಂಧಿ ಬದುಕಿನ ಸಮಗ್ರ ಚಿತ್ರಣದ ಪುಸ್ತಕವನ್ನು ಬಿಡುಗಡೆ ಮಾಡುತ್ತಾ ಮಾತನಾಡಿದರು.

'ಇಂದು 'ಜೈ ಶ್ರೀ ರಾಮ್' ಎಂಬ ಹಿಂಸೆಯು 'ಹೇ ರಾಮ್' ಎಂಬ ಅಹಿಂಸೆಯನ್ನು ಭಾರತದಿಂದ ಹೊರಹಾಕಲು ಟೊಂಕ ಕಟ್ಟಿ ನಿಂತಿದೆ. ಆದರೆ ಇಂದು ನಾವು ಗೋಡ್ಸೆಗೆ ದೇವಸ್ಥಾನವನ್ನು ಕಟ್ಟಿ ಗಾಂಧಿಯನ್ನು ಹೊರದಬ್ಬುತ್ತಿರುವ ವಿಚಾರಧಾರೆಯನ್ನು ಹೊರದಬ್ಬಲು ಟೊಂಕ ಕಟ್ಟಿ ನಿಲ್ಲಬೇಕಿದೆ. ಹೊರದಬ್ಬುತ್ತಿರುವವರನ್ನೂ ಮನುಷ್ಯರನ್ನಾಗಿಸಬೇಕಾಗಿದೆ. ಜೊತೆಗೆ ಕಟ್ಟ ಕಡೆಯವನ ಕಡೆಗೆ ನಡೆಯುತ್ತಿರುವ ಗಾಂಧೀ ಮತ್ತು ಕಟ್ಟಕಡೆಯವನನ್ನು ಪ್ರತಿನಿಧಿಸಿದ ಅಂಬೇಡ್ಕರ್ ಅವರ ನಡುವಿನ ಕಗ್ಗಂಟನ್ನು ಬಿಡಿಸಿಕೊಳ್ಳಬೇಕಾಗಿದೆ' ಎಂದು ನುಡಿದರು.

ಪುಸ್ತಕದ ಬಗ್ಗೆ ಮಾತನಾಡುತ್ತಾ ಡಾ.ನಿತ್ಯಾನಂದ ಬಿ.ಶೆಟ್ಟಿ ಅವರು, 'ಡಿ. ಎಸ್. ನಾಗಭೂಷಣರು ಸುಮಾರು ಐವತ್ತು ಸಾವಿರ ಪುಟಗಳಷ್ಟು, ಗಾಂಧೀ ಚರಿತ್ರೆಯ ಬಗ್ಗೆ ಬಂದಿರುವ ವಿವಿಧ ಲೇಖಕರ ಗ್ರಂಥಗಳನ್ನು ಓದಿ, ಚಿಂತಿಸಿ, ಮಥಿಸಿ ಗಾಂಧೀ ಚರಿತ್ರೆಯನ್ನು ಅತ್ಯಂತ ಹೊಸತಾಗಿ ಕನ್ನಡದಲ್ಲಿ ರೂಪಿಸಿಕೊಟ್ಟಿದ್ದಾರೆ. ಯಾವುದೇ ಸಿದ್ಧಾಂತದ ಪ್ರತಿಪಾದನೆಯ ಹಠವಿಲ್ಲದೆ ಒಬ್ಬ ತತ್ವಜ್ಞಾನಿಯ ದೃಷ್ಟಿಕೋನದಲ್ಲಿ ನಿರಂತರವಾಗಿ ಸತ್ಯದ ಶೋಧನೆಯಲ್ಲಿದ್ದ ಗಾಂಧಿ, ಈ 'ಗಾಂಧಿ ಕಥನ' ಪುಸ್ತಕದಲ್ಲಿ ವಿಕಾಸವಾಗುತ್ತಾ ಹೋಗುತ್ತಾರೆ. ಸುಮಾರು ನಾಲ್ಕು ದಶಕಗಳಿಂದ ಡಿ.ಎಸ್.ನಾಗಭೂಷಣ, ಗಾಂಧಿಯ ಬಗ್ಗೆ ಓದುತ್ತ ಬರೆಯುತ್ತಾ ತಮ್ಮ ಬದುಕಿನ ಅತ್ಯಂತ ಪ್ರಬುದ್ಧ ವಯಸ್ಸಿನಲ್ಲಿ ಗಾಂಧಿಯನ್ನು ಸಮಗ್ರವಾಗಿ ಕನ್ನಡದ ಜನತೆಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಪುಸ್ತಕದಲ್ಲಿ ಲೇಖಕರು ಗಾಂಧಿಯ ಕುರಿತು ಅನೇಕಾನೇಕ ವಿವರಗಳನ್ನು ಹೇಗೆ ಹೆಣೆದಿದ್ದಾರೆ ಎಂದರೆ, ಇದು ಕಥನವು ಒಳಗೊಂಡಿರುವ ತತ್ವಜ್ಞಾನಿಯ ಜಿಜ್ಞಾಸೆಯೋ ಎಂದು ಭಾಸವಾಗುವಂತಿದೆ. ನಾಗಭೂಷಣ ಅವರು ಕಟ್ಟಿದ ಈ ನಮ್ಮ ಕಾಲದ ಮಹಾಭಾರತದಂಥ ಗಾಂಧೀ ಕಥನದಲ್ಲಿ ಗಾಂಧಿಯವರೇ ಭಗವದ್ಗೀತೆಯೋಪಾದಿಯಲ್ಲಿ ಪರಿಕಲ್ಪಿಸಿದ ಹಿಂದ್ ಸ್ವರಾಜ್ ಕೃತಿಯ ದಾರ್ಶನಿಕತೆಯು/ತಾತ್ವಿಕತೆಯು ಗಾಂಧಿ ಕಥನದ ಸಾಲು ಸಾಲಿನಲ್ಲೂ ಹೆಣೆದುಕೊಂಡು ಬಂದಿದೆ. ಮಹಾಕವಿಯು ತನ್ನ ದಾರ್ಶನಿಕತೆಯ ತುತ್ತತುದಿಯಲ್ಲಿ ಮಾತ್ರ ಕಥನವನ್ನೂ, ತಾತ್ವಿಕತೆಯನ್ನೂ ಬೇರ್ಪಡಿಸಲಾಗದಂತೆ ಯಾವ ರೀತಿಯಲ್ಲಿ ಕಟ್ಟಬಹುದೋ ಆ ರೀತಿಯಲ್ಲಿ 'ಗಾಂಧೀ ಕಥನ'ವನ್ನು ಲೇಖಕರು ಕಟ್ಟಿದ್ದಾರೆ. ಈ ಕೃತಿಯು ಎಲ್ಲರು ಓದಬಹುದಾದ, ಓದಿ ತನ್ಮಯಗೊಳ್ಳಬಹುದಾದ, ರೋಮಾಂಚನಗೊಳ್ಳಬಹುದಾದ, ಯೋಚಿಸಿಬಹುದಾದ, ಒಂದು ಅಪೂರ್ವ ಕೃತಿಯಾಗಿದೆ' ಎಂದು ಹೇಳಿದರು.

ನಂತರ ಮಾತನಾಡಿದ ಕೃತಿಕಾರ ಡಿ.ಎಸ್.ನಾಗಭೂಷಣ ಅವರು, 'ನಾನು ಸುಮಾರು ಏಳು ವರ್ಷದ ಹುಡುಗನಾಗಿದ್ದಾಗ, ನಮ್ಮ ಊರಿನಲ್ಲಿ ಗಾಂಧೀ ಚಿತ್ರಪಟವನ್ನು ಇಟ್ಟುಕೊಂಡು ಒಂದು ಸಣ್ಣ ಸತ್ಯಾಗ್ರಹವನ್ನು ಮಾಡುತ್ತಿದ್ದ ಜನರನ್ನು ಕಂಡು ಹುಟ್ಟಿದ ಗಾಂಧಿಯ ಬಗೆಗಿನ ಕುತೂಹಲವು, ಮುಂದೆ ನನ್ನ ಜೀವನದಲ್ಲಿ ನೋಡುತ್ತಾ ಹೋದ ಸಮಾಜದ ಅನೇಕ ಸಮಸ್ಯೆಗಳು, ಬಿಕ್ಕಟ್ಟುಗಳಿಗೆ, ಕಾರಣ ಮತ್ತು ಪರಿಹಾರವನ್ನು ಹುಡುಕುತ್ತಾ ಮತ್ತು ಜನಸಾಮಾನ್ಯರಲ್ಲಿ ಬಿತ್ತಲಾಗಿದ್ದ ಗಾಂಧಿ ಬಗೆಗಿನ ಅನೇಕ ಅಪಕಲ್ಪನೆಗಳನ್ನು ನೋಡಿ, ಅದಕ್ಕೆ ಗಾಂಧಿ ಜೀವನದ ಸತ್ಯಗಳನ್ನು ಜನರಿಗೆ ತಿಳಿಸಬೇಕೆಂಬ ಪ್ರೇರಣೆಯಿಂದಾಗಿ ಈ ಪುಸ್ತಕವನ್ನು ರಚಿಸುವಂತಾಯಿತು. ಹಾಗೆ ನೋಡಿದರೆ ಈ ಪುಸ್ತಕ ಮೂಲತಃ ನನ್ನದಲ್ಲ. ಆದರೆ ಅನೇಕ ಮೂಲಗಳಿಂದ ಆಯ್ದು ನನ್ನದೇ ಆದ ರೀತಿಯಲ್ಲಿ ಜೋಡಿಸಿ ಬರೆದಿದ್ದೇನೆ' ಎಂದು ತಿಳಿಸಿದರು.

ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಾ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರು, 'ಇಂತಹ ಅಮೂಲ್ಯವಾದ ಪುಸ್ತಕವನ್ನು ಕನ್ನಡದ ಜನತೆಗೆ ತಲುಪಿಸಿದ ನಾಗಭೂಷಣ ಅವರ ಕೆಲಸವನ್ನು ಶ್ಲಾಘಿಸುತ್ತಾ ಗಾಂಧೀ ಕಥನವು ನಿಂತ ನೀರಲ್ಲ, ಅದು ವಿಸ್ತರಿಸುತ್ತಲೇ, ವಿಕಾಸವಾಗುತ್ತಲೇ ಇರುವಂತಹ ವಿಚಾರಧಾರೆ. ಗಾಂಧೀ ಪ್ರಭಾವದಲ್ಲಿ ರೂಪುಗೊಂಡು ಸಾರ್ವಜನಿಕ ಬದುಕಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡ ಜಯಪ್ರಕಾಶ್ ನಾರಾಯಣ, ವಿನೋಬಾ ಭಾವೆ, ಲೋಹಿಯಾ, ಧರ್ಮಾಧಿಕಾರಿ ಅಂತಹವರು ಗಾಂಧೀ ವಿಚಾರಧಾರೆಯನ್ನು ನಂತರದಲ್ಲಿ ವಿಸ್ತರಿಸಿದ ಕಥನವನ್ನೂ ನಾಗಭೂಷಣ ಅವರು ಕನ್ನಡದ ಜನತೆಗೆ ಕಟ್ಟಿಕೊಡುವಂತಾಗಲಿ' ಎಂದು ಹಾರೈಸಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮ ಖ್ಯಾತ ಗಾಯಕಿ ಸಂಗೀತಾ ಕಟ್ಟಿ ಅವರು ಗಾಂಧಿಗೆ ಪ್ರಿಯವಾದ ಭಜನೆಗಳ ಗಾಯನದೊಂದಿಗೆ ಆರಂಭವಾಯಿತು. ಇಡೀ ಕಾರ್ಯಕ್ರಮವನ್ನು ಎಂ. ಚಂದ್ರಶೇಖರ ಪ್ರತಿಷ್ಠಾನದ ಮಾರ್ಗದರ್ಶಿಗಳಾದ ನ್ಯಾ. ಎ.ಜೆ. ಸದಾಶಿವ ಗಾಂಧಿ ಮೂರ್ತಿಗೆ ಪುಷ್ಪ ಅರ್ಪಿಸುವ ಮೂಲಕ ಉದ್ಘಾಟಿಸಿದರು., ಶ್ರೀಮತಿ ಸರೋಜಾ ಚಂದ್ರಶೇಖರ್ ಹಾಜರಿದ್ದರು. ಎಂ.ಸಿ, ನರೇಂದ್ರ ಎಲ್ಲರನ್ನೂ ಸ್ವಾಗತಿಸಿದರೆ, ಎನ್.ಆರ್ ವಿಶುಕುಮಾರ್ ವಂದಿಸಿದರು. ಪ್ರೊ. ಜಿ.ಬಿ. ಶಿವರಾಜು ಕಾರ್ಯಕ್ರಮವನ್ನು ನಿರ್ವಹಿಸಿದರು,

ನಂತರ ನಡೆದ 'ಇಂದಿಗೆ ಬೇಕಾದ ಗಾಂಧಿ' ಕುರಿತ ಇಂಗ್ಲಿಷ್ ಭಾಷೆಯಲ್ಲಿನ ವಿಚಾರ ಗೋಷ್ಠಿಯಲ್ಲಿ ಮೊದಲಿಗೆ ಖ್ಯಾತ ಭಾಷಾ ತಜ್ಞ ಶ್ರೀ ಗಣೇಶ್ ಎನ್. ದೇವಿಯವರು ಮಾತನಾಡುತ್ತಾ 'ರಾಷ್ಟ್ರೀಯ ಪೌರತ್ವ ನೊಂದಣಿಯ ಮತ್ತು ಸಂಕುಚಿತ ಧರ್ಮ, ಅಂಧ ರಾಷ್ಟ್ರೀಯತೆಯ ಹೆಸರಿನಲ್ಲಿ ದೇಶದ ಜನತೆಯನ್ನು ವಿಭಜಿಸುತ್ತಿರುವ ಮತ್ತು ಪ್ರಜಾತಂತ್ರ ಎಂಬ ಮುಖವಾಡದ ಮೂಲಕ, ಬಹುಸಂಖ್ಯಾತವಾದವನ್ನು ಜಾರಿಗೊಳಿಸುತ್ತಿರುವ ಮತ್ತು ಬಂಡವಾಳಶಾಹಿ ಆರ್ಥಿಕತೆಯ ಹೆಸರಿನಲ್ಲಿ ಅನೇಕ ರೀತಿಯ ಹಿಂಸೆಯನ್ನು ಕಾನೂನುಬದ್ಧಗೊಳಿಸುತ್ತಿರುವ ಇಂದಿನ ರಾಜಕಾರಣದ ಸಂದರ್ಭದಲ್ಲಿ, ಗಾಂಧೀಜಿ ಅವರ ಮಾನವೀಯತೆಯ ಪರವಾದ ನಿರ್ಭೀತ ಸತ್ಯಾಗ್ರಹ ಮತ್ತು ಅಸಹಕಾರ ಕಾರ್ಯಕ್ರಮಗಳಿಂದ ಸ್ಫೂರ್ತಿಯನ್ನು ಪಡೆದುಕೊಳ್ಳಬೇಕಾಗಿದೆ. ಆ ಮೂಲಕ ಅನ್ಯಾಯದ ವಿರುದ್ಧ ನಮ್ಮ ಚಳುವಳಿಗಳನ್ನು ಕಟ್ಟಬೇಕಾಗಿದೆ. ಹಾಗಾದಾಗ ಮಾತ್ರ ಇಂದಿನ ಗಾಂಧೀ ಬಗೆಗಿನ ಕಾರ್ಯಕ್ರಮವು ಅರ್ಥಪೂರ್ಣತೆಯನ್ನು ಪಡೆದುಕೊಳ್ಳುತ್ತದೆ' ಎಂದು ಹೇಳಿದರು.

ನಂತರ ಬೆಂಗಳೂರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ.ವುಡೇ ಪಿ.ಕೃಷ್ಣ ಮಾತನಾಡುತ್ತ 'ಗಾಂಧಿ ಅವರು ಈ ಜಗತ್ತು ಒಂದು ಅಹಿಂಸಾತ್ಮಕವಾದ, ಸಾಮುದಾಯಿಕ ಮತ್ತು ಸುಸ್ಥಿರವಾದ ಬದುಕನ್ನು ಕಟ್ಟಿಕೊಳ್ಳುವ ಮಾದರಿಯನ್ನು ನಿರಂತರವಾಗಿ ಚಿಂತಿಸಿ, ಗ್ರಾಮ ಸ್ವರಾಜ್ಯ, ಸ್ವದೇಶೀ, ಅಸಹಕಾರ, ಅಸ್ಪೃಶ್ಯತೆ ನಿವಾರಣೆ, ಸತ್ಯಾಗ್ರಹ ಮುಂತಾದ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿಕೊಟ್ಟು, ಜಗತ್ತಿನ ಇಂದಿನ ಅನೇಕ ತಲ್ಲಣಗಳ ಪರಿಹಾರಕ್ಕೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳ ಮೂಲ ಸೆಲೆ ಅಪ್ಪಟ ಮಾನವ ಪ್ರೀತಿ, ಅಹಿಂಸೆ ಮತ್ತು ಸತ್ಯದ ಹುಡುಕಾಟದ ನೆಲೆಯದಾಗಿತ್ತು. ಅದರ ಆಧಾರದಲ್ಲಿ ನಾವು ಕೆಲಸ ಮಾಡಿ ವರ್ತಮಾನದ ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ' ಎಂದು ಹೇಳಿದರು.

ಊಟದ ವಿರಾಮದ ನಂತರ ಇದೆ ವಿಷಯದ ಬಗ್ಗೆ ಕನ್ನಡ ಭಾಷೆಯ ವಿಚಾರ ಸಂಕಿರಣದಲ್ಲಿ ಮೊದಲಿಗೆ ಮಾತನಾಡಿದ ಇತಿಹಾಸಜ್ಞರಾದ ಡಾ.ಎಸ್.ಚಂದ್ರಶೇಖರ್ 'ಗಾಂಧೀ ಮತ್ತು ರಾಜಕಾರಣ' ಎಂಬ ವಿಷಯವಾಗಿ ಮಾತನಾಡುತ್ತಾ, 'ಗಾಂಧಿ ದಕ್ಷಿಣ ಆಫ್ರಿಕಾದಿಂದ ಬಂದ ಸಂದರ್ಭದಲ್ಲಿ ಕಾಂಗ್ರೆಸ್

ನೇತೃತ್ವದ ರಾಷ್ಟ್ರೀಯ ಚಳುವಳಿಯು ಮತೀಯ, ಉಗ್ರ ರಾಷ್ಟ್ರೀಯ, ಜಾತೀಯ, ಭೂಮಾಲಿಕರ, ಭಯೋತ್ಪಾದಕ, ಕ್ರಾಂತಿಕಾರಿ ಧಾರೆಗಳು ಸೇರಿಕೊಂಡಿದ್ದ ಒಂದು ಹೋರಾಟವಾಗಿತ್ತು. ಆದರೆ ಬಹುಸಂಖ್ಯಾತ ಶೂದ್ರ ಮತ್ತು ದಲಿತ ವರ್ಗಗಳು ಕಾಂಗ್ರೆಸ್ ಹೋರಾಟದಿಂದ ಪ್ರಭಾವಿತಗೊಂಡಿರಲಿಲ್ಲ. ಆದರೆ ಗಾಂಧಿ ಚಿಂತನಧಾರೆ ವಿಭಿನ್ನ ರೀತಿಯಲ್ಲಿ ಕೆಲಸ ಮಾಡುತ್ತಿತ್ತು. ಅವರು ರೈತ ಮತ್ತು ಕಾರ್ಮಿಕರ ಸಮಸ್ಯೆಗಳನ್ನು, ಅಸ್ಪೃಶ್ಯತಾ ನಿವಾರಣಾ ಕೆಲಸವನ್ನು ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸೇರುವಂತೆ ಮಾಡಿ 'ಪತಿತ ಪಾವನ ಸೀತರಾಮನನ್ನು' ಪ್ರತಿಮೆಯಾಗಿ ಬಿಂಬಿಸಿ, ರಾಮರಾಜ್ಯದ ಪರಿಕಲ್ಪನೆಯನ್ನು ಜನರಲ್ಲಿ ಮತ್ತು ತಮ್ಮ ರಾಜಕಾರಣದಲ್ಲಿ ಪಾಲಿಸಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುತ್ತಾರೆ. ಸ್ವರಾಜ್ಯವನ್ನು ಗಳಿಸಲು ಭಾರತೀಯರೆಲ್ಲರ ಒಗ್ಗಟ್ಟು ಮುಖ್ಯವೆಂದು ಅರಿತು ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋರಾಟವನ್ನು ಕಟ್ಟಿದರು. ಗಾಂಧೀಜಿಯ ವಿಚಾರಧಾರೆಯಲ್ಲಿ ಮತ್ತು ಜೀವನ ಸಂದೇಶದಲ್ಲಿ ಮತ, ಮತೀಯತೆ, ಪ್ರತ್ಯೇಕತೆ, ಸಾಮ್ರಾಜ್ಯಶಾಹಿಯಂತಹ ಅನೇಕ ಸಮಸ್ಯೆಗಳನ್ನು ಎದುರಿಸಲು ಸಾಕಷ್ಟು ಸತ್ವ ಇದೆ' ಎಂದು ಹೇಳಿದರು.

'ಗಾಂಧೀ ಮತ್ತು ಆರ್ಥಿಕತೆ' ಕುರಿತು ಡಾ.ರಾಜೇಂದ್ರ ಚೆನ್ನಿ ಮಾತನಾಡುತ್ತಾ 'ಇಂದು ನಮಗೆ ಮಿತಿಯುಳ್ಳ ಜೀವನದ ಬಗ್ಗೆ ಹೇಳಿದ, ಕುರುಡು ಯಂತ್ರ ನಾಗರಿಕತೆಯ ಅಪಾಯದ ಬಗ್ಗೆ ಎಚ್ಚರಿಸಿದ, ಸುಸ್ಥಿರ ಆರ್ಥಿಕತೆಯ ಬಗ್ಗೆ ಮಾತನಾಡಿದ ಗಾಂಧೀ ಬೇಡವಾಗಿದ್ದಾರೆ. ಹಾಗಾಗಿ ಜಗತ್ತು ಇಂದು ಕಂಡರಿಯದ ಸಮಸ್ಯೆಗಳನ್ನು ಎದುರಿಸುತ್ತಿದೆ' ಎಂದು ಹೇಳಿದರು. 'ಗಾಂಧಿಗೆ ಭಾರತದ ಇಡೀ ಅರ್ಥವ್ಯವಸ್ಥೆಯನ್ನು ಪುನರ್ರಚಿಸಬೇಕಾದ ಅಗತ್ಯ ಕಂಡು ಬಂದಿತ್ತು. ಅದನ್ನು ಸತ್ಯ ಮತ್ತು ಅಹಿಂಸೆಯ ಮೌಲ್ಯದಲ್ಲಿ ವಿಕೇಂದ್ರೀಕೃತ ಮತ್ತು ಸ್ಥಳೀಯತೆಯ (ಸ್ವದೇಶೀ) ನೆಲೆಯಲ್ಲಿ ಕಟ್ಟಿಕೊಳ್ಳಬೇಕಾದ ಅಗತ್ಯವನ್ನು ಐರೋಪ್ಯ ಅಥವಾ ಆಧುನಿಕ ನಾಗರೀಕತೆಯ ಅಪಾಯದ ಹಿನ್ನೆಲೆಯಲ್ಲಿ ಮನಗಂಡಿದ್ದರು. ಅವರ 'ಹಿಂದ್ ಸ್ವರಾಜ್' ಕೃತಿಯ ಬಹುಮುಖ್ಯ ಕಾಣ್ಕೆ ಎಂದರೆ, ಈ ಆಧುನಿಕ ನಾಗರೀಕತೆಯನ್ನು ಎದುರಿಸಿದ್ದು. ಈ ಐರೋಪ್ಯ ಅರ್ಥಶಾಸ್ತ್ರ ಕೇವಲ ಅಂಕಿ ಅಂಶ ಮತ್ತು ಲಾಭಾಧಾರಿತ ನರಭಕ್ಷಕ ವ್ಯವಸ್ಥೆ. ಇದು ಸಕಲ ಜೀವಕೋಟಿಗೆ ಮಾರಕವಾದಂಥದ್ದು ಎಂದು ಗಾಂಧಿ ತಿಳಿದಿದ್ದರು. ಹಾಗಾಗಿ ಅವರು ಜೆ.ಸಿ.ಕುಮಾರಪ್ಪ ಅವರೊಡಗೂಂಡು ರೂಪಿಸಿದ ವಿಕೇಂದ್ರೀಕೃತ ಸ್ವದೇಶೀ ಮತ್ತು ಸುಸ್ಥಿರ ಆರ್ಥಿಕ ವ್ಯವಸ್ಥೆಯು ಇಂದು ಈ ಜಗತ್ತು ಉಳಿಯಬೇಕಾದರೆ ಅತ್ಯಗತ್ಯ' ಎಂದು ಅಭಿಪ್ರಾಯಪಟ್ಟರು.

'ಗಾಂಧೀ ಮತ್ತು ಧರ್ಮ' ಕುರಿತು ಚಿಂತಕ ಲಕ್ಷ್ಮೀಶ ತೋಳ್ಪಾಡಿ ಅವರು ನಿಜವಾಗಿಯೂ 'ಮಹಾತ್ಮ ಗಾಂಧೀ' ಹುಟ್ಟಿದ್ದು ಜೂನ್ ೬, ೧೮೯೩ ರಂದು. ಅಂದು ಅವರು ವರ್ಣಬೇದ ನೀತಿಯಿಂದಾಗಿ ರೈಲಿನಿಂದ ತಳ್ಳಲ್ಪಟ್ಟು ಅನುಭವಿಸಿದ ತಮ್ಮ ವೈಯಕ್ತಿಕ ಅಪಮಾನ, ಸಂಕಟವು ತಮ್ಮ ಆಂತರ್ಯದಲ್ಲಿ ಮಥನಗೊಂಡು, ಜಿಜ್ಞಾಸೆಗೊಳಪಟ್ಟು ಅದು ಇಡೀ ಮಾನವ ಕುಲದ ಸಂಕಟವಾಗಿ ಕಂಡು, ಅದು ಅಪಾರವಾದ ಕರುಣೆಯಾಗಿ ಪರಿವರ್ತನೆಗೊಂಡಿತು. 'ಸ್ವ' ಮತ್ತು 'ಅನ್ಯ' ಎಂದು ಇರುವ ಪ್ರತ್ಯೇಕತೆಯು ಅವರಲ್ಲಿ ಕರಗಿ ಎಲ್ಲವೂ ಒಂದು ಎಂಬ ಹೊಳಹು ದಕ್ಕಿ, ಧರ್ಮ ಎಂದರೆ ಏನು ಎಂದು ಅರ್ಥವಾಯಿತು. ಆದರಿಂದಲೇ ಅವರು ಭೀತಿಯನ್ನು ಕಳೆದುಕೊಂಡು ಎಲ್ಲರನ್ನೂ ಪ್ರೀತಿಸುವಂಥ ಸೂಕ್ಷ್ಮತೆಯನ್ನು ಪಡೆದುಕೊಂಡದ್ದು. ಗಾಂಧಿಗೆ ಅನುಭವ ಮುಖ್ಯವಾಗಿತ್ತೆ ಹೊರತು ವಿವರಣೆ(ಆರ್ಟಿಕ್ಯುಲೇಷನ್) ಮುಖ್ಯವಾಗಿರಲಿಲ್ಲ. ಇನ್ನೊಬ್ಬನ ನೋವನ್ನು ತಿಳಿದುಕೊಳ್ಳುವುದರ ಮೂಲಕ ಮಾತ್ರ ಅವನನ್ನು ಬದಲಾಯಿಸುವುದು ಸಾಧ್ಯ ಎಂಬುದು ಅವರ ಅನುಭವವಾಗಿತ್ತು. ಈ ಅನುಭವದ ಮೂಸೆಯಿಂದಲೇ ಅವರ ನಂತರದ ಎಲ್ಲ ವಿಚಾರ, ಪ್ರಯೋಗ ಮತ್ತು ಕ್ರಿಯೆಗಳು ರೂಪುಗೊಂಡಿತು' ಎಂದು ಹೇಳಿದರು. 'ಗಾಂಧಿ ತಮ್ಮ ಅನೇಕ ಪ್ರಯೋಗಗಳಿಂದ ಮಾಡಿದ್ದು ಸತ್ಯದ ಶೋಧನೆ' ಎಂದೂ ವಿವರಿಸಿದರು.

ಇದೇ ಸಂದರ್ಭದಲ್ಲಿ ಪುಸ್ತಕ ಅಚ್ಚುಕಟ್ಟಾಗಿ ಹೊರಬರಲು ನೆರವಾದ ಎಂ. ಕೃಷ್ಣಮೂರ್ತಿ, ಎಚ್.ಆರ್ ರವಿಪ್ರಸಾದ್, ಟಿ.ಎಲ್. ರೇಖಾಂಬ ಮತ್ತು ಸವಿತಾ ನಾಗಭೂಷಣ ಅವರನ್ನು ಸನ್ಮಾನಿಸಲಾಯಿತು.

ವಿಚಾರ ಗೋಷ್ಠಿಯ ನಂತರ 'ಪಾಪು–ಬಾಪು' ನಾಟಕದ ಪ್ರದರ್ಶನ ಮತ್ತು ರಂಗ ಸಂವಾದ ನಡೆಯಿತು. ಇದರಲ್ಲಿ ಹಿರಿಯ ರಂಗಕರ್ಮಿ ಪ್ರಸನ್ನ ಸೇರಿದಂತೆ ಬೆಂಗಳೂರಿನ ಅನೇಕ ರಂಗಕರ್ಮಿಗಳು ಭಾಗವಹಿಸಿದ್ದರು. ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧರಿತ ಈ ನಾಟಕವನ್ನು ಶ್ರೀಪಾದ ಭಟ್ ನಿರ್ದೇಶಿಸಿದ್ದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಇದನ್ನು ಪ್ರಾಯೋಜಿಸಿತ್ತು.

ಬೆಳಿಗ್ಗೆ ಹತ್ತು ಘಂಟೆಯಿಂದ ರಾತ್ರಿ ಎಂಟು ಘಂಟೆಯವರೆಗೆ ನಡೆದ 'ಗಾಂಧಿ ಉತ್ಸವ'ದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಜನ ರವೀಂದ್ರ ಕಲಾಕ್ಷೇತ್ರದಲ್ಲಿ ಕಿಕ್ಕಿರಿದು ಸೇರಿ ಸಕ್ರಿಯವಾಗಿ ಭಾಗವಹಿಸಿದ್ದು ಒಂದು ವಿಶೇಷವಾಗಿತ್ತು,

(ವರದಿ: ಬಿ.ವಿ. ಸುರೇಂದ್ರ)

**೭ನೇ ಪುಟದಿಂದ)**

'ಗ್ರಂಥಗಳಲ್ಲಿರುವುದನ್ನೆಲ್ಲ ಪವಿತ್ರವೆಂದು ಪರಿಗಣಿಸಬಾರದೆಂದು ಕರೆಕೊಡುತ್ತಾ, ಯಾವುದು ಎಷ್ಟೇ ಪುರಾತನವಾದರೂ ಮಾನವ ಕುಲದ ನೈತಿಕ ಪ್ರಜ್ಞೆಗೆ ಸರಿ ಎನ್ನಿಸದ್ದನ್ನು, ಶಾಸ್ತ್ರ ಎಂದು ಒಪ್ಪಬಾರದು ಎಂದು ಸೂಚಿಸಿದರು. ಮುಂದೆ ತಿರುವಾಂಕೂರು ಪ್ರಾಂತ್ಯವನ್ನು ಪ್ರವೇಶಿಸಿದ ಅವರು, ಕ್ವಿಲಾನ್‌ನಲ್ಲಿ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಎಂಬುದು ಹಾಲಿನಲ್ಲಿ ಬೆರೆತ ಒಂದು ತೊಟ್ಟು ವಿಷದಂತೆ ಎಂದು ಜನರನ್ನು ಎಚ್ಚರಿಸಿದರು.

## ಸಿಲೋನ್ ಯಾತ್ರೆ

ಈ ಮಧ್ಯೆ ದೇಶಕ್ಕೆ ರೀಡಿಂಗ್ ಅವರ ಜಾಗಕ್ಕೆ ಲಾರ್ಡ್ ಇರ್ವಿನ್‌ರೆಂಬ ಹೊಸ ವೈಸ್‌ರಾತ್ ನೇಮಕವಾಗಿದ್ದು ಅವರ ಆಹ್ವಾನದ ನಢೆಡಗೆ ದೆಹಲಿಗೂ ಹೋಗಿ ಬರಬೇಕಾಯಿತು. ನಂತರ ಅವರು, ಬೆಂಗಳೂರಿನಲ್ಲಿದ್ದಾಗ ಸಿಲೋನ್ (ಈಗಿನ ಶ್ರೀಲಂಕಾ) ದೇಶದ ಮುವ್ವರು ಯುವಕರು, ಅವರನ್ನು ತಮ್ಮ ದೇಶಕ್ಕೆ ಆಹ್ವಾನಿಸಿ ಪ್ರವಾಸದ ವ್ಯವಸ್ಥೆ ಮಾಡಿದ್ದರು. ಗಾಂಧಿ ಬೌದ್ಧ ಧರ್ಮೀಯರೇ ಹೆಚ್ಚಿರುವ ದ.ಸಿಲೋನ್ ಮತ್ತು ಹಿಂದೂ ತಮಿಳರು ಹೆಚ್ಚಿರುವ ಉತ್ತರದ ಜಾಫ್ನಾ ಪ್ರಾಂತ್ಯಗಳ ಪ್ರವಾಸ ಮಾಡಿದರು. ಅವರಿಗೆ ಹಲವು ನಗರ ಮತ್ತು ಪುರಸಭೆಗಳು ನಾಗರಿಕ ಸನ್ಮಾನ ಸಭೆಗಳನ್ನು ಏರ್ಪಡಿಸಿದ್ದವು. ಬೌದ್ಧ ಸಂನ್ಯಾಸಿಗಳ ಸಭೆಯೊಂದಕ್ಕೂ ಅವರನ್ನು ಆಹ್ವಾನಿಸಲಾಗಿತ್ತು. ತಮ್ಮ ಸಹಿಗಾಗಿ ಮುಗಿಬಿದ್ದ ಜನರಿಗೆ ಗಾಂಧಿ, ಖಾದಿ ತೊಡುವ ಮಾತು ಕೊಟ್ಟರೆ ಮಾತ್ರ ಸಹಿ ಎಂಬ ಷರತ್ತು ಹಾಕುತ್ತಿದ್ದರಲ್ಲದೆ, ಅವರಿಂದ ಶಕ್ತ್ಯಾನುಸಾರ ದೇಣಿಗೆಯನ್ನೂ ವಸೂಲು ಮಾಡುತ್ತಿದ್ದರು. ಬೌದ್ಧರ ಸಭೆಯಲ್ಲಿ ಅವರು, ಬುದ್ಧ ಹಿಂದೂ ಧರ್ಮವನ್ನು ತಿರಸ್ಕರಿಸಲಿಲ್ಲ. ಬದಲಿಗೆ ಆತ ಅದರ ಬುಡವನ್ನು ವಿಶಾಲಗೊಳಿಸಿ ಗಟ್ಟಿಗೊಳಿಸಿದ್ದು, ಈ ಎರಡೂ ಧರ್ಮಗಳ ನಡುವೆ ನಿಕಟ ಸಂವಾದ ಅಗತ್ಯವೆಂದು ಹೇಳಿದರು. ಆ ದ್ವೀಪ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲೇ ಇರುವ ಕ್ರಿಶ್ಚಿಯನ್ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪರ್ವತ ಪ್ರವಚನ'ದ ಮಟ್ಟಿಗೆ ತಾವು ಕ್ರಿಶ್ಚಿಯನ್ನರೇ ಹೌದು ಎಂದ ಗಾಂಧಿ, ಆದರೆ ಕ್ರಿಶ್ಚಿಯನ್ನರೇ ಇದನ್ನು ಅನುಸರಿಸುತ್ತಿಲ್ಲ ಎಂದು ವಿಷಾದಿಸಿದರು. ಜಾಫ್ನಾದಲ್ಲಿ ತಮಿಳು ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಸಭೆಗಳಲ್ಲಿ ಅವರು, ಸಮಾಧಿ ಸೇರಿರುವ ಹಿಂದೂ ಸಂಪ್ರದಾಯಗಳನ್ನೆಲ್ಲ ಹೊರತೆಗೆದು ಭಾರತಕ್ಕಿಂತಲೂ ಇಲ್ಲಿ ಹೆಚ್ಚು ಕಟುವಾದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸುಮಾರು ೧೮ ದಿವಸಗಳ ಈ ಪ್ರವಾಸದಲ್ಲಿ ಗಾಂಧಿ, ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ದೇಣಿಗೆಯನ್ನು ಖಾದಿ ನಿಧಿಗಾಗಿ ಸಂಗ್ರಹಿಸಿದ್ದರು. ಇದಕ್ಕೆ ಅತ್ಯಂತ ಹೆಚ್ಚು ದೇಣಿಗೆ ನೀಡಿದವರು ಚೆಟ್ಟಿಯಾರರುಗಳೇ. ಆದರೆ ಇದರಲ್ಲಿ ಗಾಂಧಿ, ಅಮೂಲ್ಯವೆಂದು ಪರಿಗಣಿಸಿದ್ದು ಕೊಲಂಬೋದ ಕ್ಷೌರಿಕರು ಸಂಗ್ರಹಿಸಿ ನೀಡಿದ ನಾಲ್ಕು ನೂರು ರೂಪಾಯಿಗಳನ್ನು. *


## ರಿಯಾಯ್ತಿ ದರದಲ್ಲಿ 'ಗಾಂಧಿ ಕಥನ'




**ಡಿ.ಎಸ್. ನಾಗಭೂಷಣ ಅವರು ಬರೆದಿರುವ ಮಹಾತ್ಮ ಗಾಂಧಿಯವರ ಸಮಗ್ರ ಬದುಕಿನ ನಿರೂಪಣೆಯ ಗ್ರಂಥ 'ಗಾಂಧಿ ಕಥನ' ಇದೀಗ ಬಿಡುಗಡೆಯಾಗಿದ್ದು (ಪ್ರಕಾಶಕರು: ಮೆ. ಎಂ. ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು) ೭೧೨ ಪುಟಗಳ ಇದರ ಮುಖ ಬೆಲೆ ರೂ. ೬೦೦/-. ಇದನ್ನು 'ಹೊಸ ಮನುಷ್ಯ' ಓದುಗರು ನಮ್ಮಿಂದ ರೂ. ೪೦೦/- ಕ್ಕೆ ಪಡೆಯಬಹುದು. ಆಸಕ್ತರು ಈ ಸಂಖ್ಯೆಗೆ ಕರೆ ಮಾಡಿ ಹಣ ಪಾವತಿಯ ವಿವರ ಪಡೆದು ಪುಸ್ತಕವನ್ನು ಪಡೆಯುಬಹುದು: ೯೪೮೧೩೫೧೦೬೯**

**–ಸಂಪಾದಕ**

ಪು: **ಬಚ್ಚಿಟ್ಟ ಸತ್ಯಗಳು** ಲೇ: ಬಿ. **ಚಂದ್ರೇಗೌಡ** ಪ್ರ: **ಸಂಧ್ಯಾ ಪ್ರಕಾಶನ,** ಶಿವಮೊಗ್ಗ ಪು: **೧೫೨ ಬೆಲೆ ರೂ. ೧೪೦/-**

## ಸಮಕಾಲೀನ ಚರಿತ್ರೆಯ ಒಂದು ವಾರೆ ನೋಟ



ಇದು 'ಲಂಕೇಶ್ ಪತ್ರಿಕೆ'ಯ 'ಬಯಲು ಸೀಮೆ ಕಟ್ಟೆ ಪುರಾಣ' ಅಂಕಣದ ಮೂಲಕ ರಾಜ್ಯಾದ್ಯಂತ ಹೆಸರು ಮಾಡಿದ ಬಿ. ಚಂದ್ರೇಗೌಡರು ತಮ್ಮ ಬದುಕಿನ ಕೆಲವು ಆಯ್ದ ಅನುಭವಗಳನ್ನು ಆಧರಿಸಿ ಬರೆದ ಒಂದು ಸಡಿಲ 'ಆತ್ಮ ಕಥಾನಕ'. ಸಡಿಲ ಏಕೆಂದರೆ ಇದರಲ್ಲಿ ಅವರ ವೈಯಕ್ತಿಕ/ಕೌಟುಂಬಿಕ ಬದುಕಿನ ವಿವರಗಳು ಇಲ್ಲ. ಎಲ್ಲವೂ ಸಾರ್ವಜನಿಕ ಜೀವನದಿಂದ ಆಯ್ದ ಪ್ರಸಂಗಗಳೇ. ನಾಗಮಂಗಲದ ಕಡೆಯ ಹಳ್ಳಿಯೊಂದರ ಬಡ ಕುಟುಂಬದ ಈ ಹುಡುಗ ಪಿಯುಸಿ ಫೇಲಾಗಿ ಮನೆಬಿಟ್ಟು ಬಂದು ಬೆಂಗಳೂರು ಸೇರಿ ಪಡಬಾರದ ಪಡಿಪಾಟಲನ್ನೆಲ್ಲ ಪಟ್ಟು ಅಕಸ್ಮಾತ್ ಲಂಕೇಶರ ಸಂಪರ್ಕಕ್ಕೆ ಬಂದ ನಂತರ ಪಡೆಯುವ ವ್ಯಕ್ತಿತ್ವದ ಹೊಸ ಆಯಾಮಗಳು ಯಾರನ್ನಾದರೂ ನಿಬ್ಬೆರಗಾಗಿಸುವಂತಹವು. ಈ ದೃಷ್ಟಿಯಿಂದ ಈ ಪುಸ್ತಕ ಕಳೆದ ಶತಮಾನದ ೭೦ರ ದಶಕದಿಂದ ಈ ಶತಮಾನದ ಎರಡನೆಯ ದಶಕದ ಅರ್ಧ ಭಾಗದವರೆಗಿನ ಸುಮಾರು ನಲವತ್ತು ವರ್ಷಗಳ ಕರ್ನಾಟಕದ ಲಂಕೇಶ್ ಕೇಂದ್ರಿತ ಸಾಂಸ್ಕೃತಿಕ ಚರಿತ್ರೆಯ ಹಲವು ಘಟನೆಗಳ ಮೇಲೆ ಚಂದ್ರೇಗೌಡರಿಗೇ ವಿಶಿಷ್ಟವಾದ ವಾರೆ ನೋಟ ಬೀರುತ್ತಾ ಕೊನೆಯವರೆಗೂ ಸ್ವಾರಸ್ಯಕರವಾಗಿ ಓದಿಸಿಕೊಂಡು ಹೋಗುತ್ತದೆ.

ಮುಖ್ಯವಾಗಿ ಬೆಂಗಳೂರು ಮೆಜೆಸ್ಟಿಕ್, ಅಜ್ಜಂಪುರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಈ ಪುಸ್ತಕದ ಕಥಾ ಕೇಂದ್ರಗಳು. ಉದ್ಯೋಗ ಹುಡುಕಿಕೊಂಡು ಬೆಂಗಳೂರಿನ ಮೆಜೆಸ್ಟಿಕ್‌ನ ಸಿಹಿ ಅಂಗಡಿ ಮತ್ತು ನಂತರ ಹೋಟೆಲ್, ಆನಂತರ ಇಸ್ಪೀಟ್ ಕ್ಲಬ್‌ವೊಂದರಲ್ಲಿ ಸಹಾಯಕನಾಗಿ ಸೇರಿ ಸಲಿಂಗ ರತಿ ಸೇರಿದಂತೆ ಹಲವು ಅಸಹಾಯಕ ಪರಿಸ್ಥಿತಿಗಳನ್ನೆದುರಿಸುತ್ತಾ 'ಗಟ್ಟಿ'ಯಾಗುವ ಕಾಲ ಕುರಿತ ಬರವಣಿಗೆ ಎಷ್ಟು ಮುಗ್ಧವಾಗಿದೆ ಎಂದರೆ, ಅಲ್ಲೇ ಚಂದ್ರೇಗೌಡರೆಂಬ ಲೇಖಕ ಸೃಷ್ಟಿಯಾಗುತ್ತಾನೆ, ನಂತರ ತಮ್ಮೂರಿನ ರಾಜಕೀಯ ನಾಯಕರೊಬ್ಬರ ಶಿಫಾರ್ಸಿನ ಮೇರೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಕರಾರಿನ ಮೇಲೆ ಕೆಳ ಹಂತದ ನೌಕರರಾಗಿ ಕೆಲಸಕ್ಕೆ ಸೇರಿಕೊಂಡ ಚಂದ್ರೇಗೌಡರು, ತಮ್ಮೊಳಗಿದ್ದ ಓದಿನ ಹಸಿವು ಮತ್ತು ಬದುಕಿನ ಅಸಹಾಯಕತೆಯಿಂದ ಹುಟ್ಟಿದ ನಮ್ರತೆ ಹಾಗೂ ಛಲಗಳು ಹದವಾಗಿ ಬೆರೆತ ವ್ಯಕಿತ್ವ ರೂಪುಗೊಳುತ್ತಾ, ಲಂಕೇಶರ ಸಹವಾಸದಲ್ಲಿ ಅದು ಪೂರ್ಣವಾಗಿ ಅರಳಿದ ಕಥೆಯ ಜೊತೆಗೆ ಗ್ರಂಥಾಲಯ ಇಲಾಖೆಯ ರಾಜಕಾರಣದಲ್ಲಿ ಸಿಕ್ಕಿಯೂ ಜಾಣತನದಿಂದ ಪಾರಾಗಿ ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ನಿವೃತ್ತಿಯಾಗಲು ನೆರವಾದ ಅವರ ಗ್ರಾಮೀಣ ಕಸುವಿನ ಜಾಣ್ಮೆಯ ಹಲವು ಪ್ರಸಂಗಗಳೂ ಇಲ್ಲಿ ಅನಾವರಣವಾಗುತ್ತವೆ.

ಇವುಗಳ ಮಧ್ಯೆ ನಾಗಮಂಗಲ ಸೀಮೆಯ ಕೊಲೆಪಾತಕದ ರಾಜಕಾರಣದ ವಿವಿಧ ಮಜಲುಗಳು ಮತ್ತು ಲಂಕೇಶರ ಒಡನಾಟದಿಂದಾಗಿ ಸೃಷ್ಟಿಯಾಗುವ ಹಲವು ಅವಕಾಶಗಳು ಮತ್ತು ವಿವಾದಗಳ ಸ್ವಾರಸ್ಯಗಳೂ ಈ ಪುಸ್ತಕದ ವಿವಿಧ ಅಧ್ಯಾಯಗಳಲ್ಲಿ ಸೇರಿಕೊಂಡು ಓದುಗರ ಕುತೂಹಲವನ್ನು ಕಾಯ್ದುಕೊಳ್ಳುತ್ತವೆ. ಇಲಾಖೆಯಲ್ಲಿನ ತಮ್ಮ ಮೇಲಿನ ತನಿಖೆಯ ಫಲವಾಗಿ 'ಶಿಕ್ಷೆ'ಯ ರೂಪದಲ್ಲಿ ಸಿಗುವ ಶಿವಮೊಗ್ಗಕ್ಕೆ ಆದ ವರ್ಗಾವಣೆ ಅವರ ಬದುಕಿನ ಖದರನ್ನೇ ಬದಲಾಯಿಸುವುದನ್ನು ಇಲ್ಲಿ ಕಾಣಬಹುದು. ಸಮಾಜವಾದ, ವಿಚಾರವಾದ, ದಲಿತ ಮತ್ತು ರೈತ ಚಳುವಳಿಯ ಕೇಂದ್ರವಾಗಿದ್ದ ಶಿವಮೊಗ್ಗ, ಚಂದ್ರೇಗೌಡರ ವ್ಯಕ್ತಿತ್ವದಲ್ಲಿನ ಕುತೂಹಲ ಮತ್ತು ಕ್ರಿಯಾಶೀಲತೆಗಳಿಗೆ ಕುಮ್ಮಕ್ಕು ಕೊಟ್ಟಂತಾಗಿ ಇಲ್ಲಿ ನಿರೂಪಿತವಾಗಿರುವ ಈ ಚಳುವಳಿಗಳ ಮತ್ತು ಲಂಕೇಶರ 'ಪ್ರಗತಿ ರಂಗ'ದ ಅಭಿಯಾನ ಹಾಗೂ ಸಮಾಜಸೇವೆ ಖಯಾಲಿಯ ಕುರಿತ ಹಲವು ವಿವರಗಳು ದೂರ ನಿಂತೂ ಸ್ವಾರಸ್ಯ ಕೆಡದಂತೆ ಬರೆಯುವ ಲೇಖಕರ ಬರವಣಿಗೆಯ ಕೌಶಲ್ಯ ಮೆಚ್ಚುವಂತಿದೆ. ಕೊನೆಯಲ್ಲಿ ಲಂಕೇಶರ ನಿಧನದ ನಂತರ ಅವರ ಮಕ್ಕಳ ಪತ್ರಿಕೋದ್ಯಮದ ಕಥೆಯೂ ಇಲ್ಲಿದ್ದು, ಅದೂ ಕೂಡ ಸಾಕಷ್ಟು ವಸ್ತುನಿಷ್ಠವಾಗಿ ನಿರೂಪಿತವಾಗಿದೆ.

'ಬಯಲು ಸೀಮೆಯ ಕಟ್ಟೆ ಪುರಾಣ'ದಂತೆಯೇ ಈ ಪುಸ್ತಕವೂ ಸಾರ್ವಜನಿಕ ಜೀವನದ ಹಲವು ವ್ಯಕ್ತಿಗಳನ್ನು ಪಾತ್ರಗಳನ್ನಾಗಿ ಮಾಡಿಕೊಂಡು ಒಂದು ಸಮಕಾಲೀನ ಪುರಾಣವನ್ನು ಸೃಷ್ಟಿಸಿ ಲಘು ಮನರಂಜನೆಯೊಂದಿಗೇ ಅದರ ಮೇಲೆ ಒಂದಿಷ್ಟು ಹೊಸ ಬೆಳಕನ್ನೂ ಚೆಲ್ಲುವ ಪ್ರಯತ್ನ ಮಾಡುತ್ತದೆ. ಆದರೆ ಈ ಪುಸ್ತಕಕ್ಕೆ ಬಚ್ಚಿಟ್ಟ ಸತ್ಯಗಳು ಎಂದು ಏಕೆ ಹೆಸರಿಟ್ಟಿದ್ದಾರೋ ಗೊತ್ತಾಗುವುದಿಲ್ಲ. ಏಕೆಂದರೆ, ಇಲ್ಲಿರುವ ಸಂಗತಿಗಳು ಯಾರಿಂದ ಯಾರು ಬಚ್ಚಿಟ್ಟ ಸತ್ಯಗಳು ಎಂಬುದು ತಿಳಿಯುವುದಿಲ್ಲ!

**-ಡಿ.ಎಸ್. ನಾಗಭೂಷಣ**

ಪು: **ಬೇರು-ಬೆಂಕಿ-ಬಿಳಲು**(ಕಮಲಾ ಹಂಪನಾ ಅವರ ಜೀವನಯಾನ) ಪ್ರ: **ಸ್ವಪ್ನಾ ಬುಕ್ ಹೌಸ್** ಬೆಂಗಳೂರು ಪುಟ: ೬೦೧, ಬೆಲೆ: ರೂ. ೫೯೫/-

## ಕಿರಿಯರಿಗೆ ಸ್ಫೂರ್ತಿ ನೀಡುವ ಬಾಳ ಕಥನ



**ಬೇ**ರು-ಬೆಂಕಿ-ಬಿಳಲು ಎಂಬುವು ಹಿರಿಯ ಲೇಖಕಿ ಕಮಲಾ ಹಂಪನಾ ಅವರ ಜೀವನ ಕಥನದ ಮೂರು ಮಜಲುಗಳನ್ನು ಸೂಚಿಸುವ ಅಧ್ಯಾಯಗಳು. ಇವನ್ನು ಪುನಃ ಯಾನ ಎಂದು ಇಪ್ಪತ್ತು ಯಾನಗಳಾಗಿ ವಿಂಗಡಿಸಿ ನಿರೂಪಿಸಿದ್ದಾರೆ. ಮೊದಲ ಅಧ್ಯಾಯ 'ಬೇರು'ವಿನಲ್ಲಿ ಕಮಲಾ ಅವರ ಬಾಲ್ಯ ಮತ್ತು ವಿದ್ಯಾರ್ಥಿ ಜೀವನದ ನಿರೂಪಣೆ ತುಂಬಾ ಆಪ್ತವಾಗಿ ಮೂಡಿಬಂದಿದೆ. 'ಬೆಂಕಿ'ಯಲ್ಲಿ ವಿದ್ಯಾಭ್ಯಾಸ ಮುಗಿದು ಅಧ್ಯಾಪಕಿಯಾಗಿ, ವೈವಾಹಿಕ ಜೀವನಕ್ಕೆ ಕಾಲಿಟ್ಟು ಮುಂದೆ ಸಾಗಿದ ತಮ್ಮ ಅನುಭವಗಳನ್ನು ಬಿಂಬಿಸಿದ್ದಾರೆ. 'ಬಿಳಲು'ವಿನಲ್ಲಿ ಅವರ ಸಾಹಿತ್ಯ ಸಾಧನೆ, ಆ ಸಾಧನೆಯ ಹಿಂದಿರುವ ವ್ಯಕ್ತಿಗಳು ಹಾಗೂ ಅವರ ಮಕ್ಕಳ ಬಗ್ಗೆ ಬರೆದಿದ್ದಾರೆ.

ತಾವು ಬೈಬಲ್, ಕುರಾನ್, ವೈದಿಕ ಗ್ರಂಥಗಳು, ಗರುಡಪುರಾಣ, ಜೈನಧರ್ಮ, ಬೌದ್ಧಧರ್ಮದ ಗ್ರಂಥಗಳನ್ನು ಗಂಭೀರವಾಗಿಯೇ ಓದಿದ್ದರೂ 'ಆತ್ಮ'ದ ಬಗ್ಗೆ ಖಚಿತವಾದ ನಿಲುವನ್ನು ತಳೆಯಲು, ಖಂಡಿತವಾದ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲವಾದ್ದರಿಂದ ತಮ್ಮ ಕಥೆಯನ್ನು 'ಆತ್ಮಚರಿತೆ' ಎಂದು ಕರೆಯದೆ 'ಜೀವನಯಾನ' ಎಂದು ಕರೆದಿರುವುದಾಗಿ ಹೇಳುತ್ತಾರೆ.

ನಿಜವಾಗಿಯೂ ಕಮಲಾ ಹಂಪನಾ ಅವರ ಬೇರು ಬಹಳ ಗಟ್ಟಿಯಾದದ್ದೇ. ತಾವು ಮಹರ್ಷಿ ವಾಲ್ಮೀಕಿ ಜಾತಿಗೆ ಸೇರಿದ ಬೇಡ ಜನಾಂಗದವರು ಎಂದು ಹೇಳಿಕೊಂಡಿದ್ದಾರೆ. ಅವರ ತಾಯಿಯ ಕಡೆಯ ಮುತ್ತಾತ ಕೆಂಪೆಲ್ಲಯ್ಯನವರು ಮೈಸೂರು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದರು, ಕಮಲಾರವರ ತಾಯಿಯೂ ಕನ್ನಡ ಮತ್ತು ಇಂಗ್ಲಿಷ್ ಬಲ್ಲವರಾಗಿದ್ದರು. ಸಂಗೀತವನ್ನು ಕಲಿತಿದ್ದರು. ಇನ್ನೊಂದು ವಿಶೇಷ ಸಂಗತಿಯೆಂದರೆ ಕಮಲಾ ಹಂಪನಾ ಅವರ ಅಜ್ಜ ಚಂದ್ರಯ್ಯನವರು ಜೈನರಾಗಿದ್ದರೂ, ಅವರು ಬೇಡರ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿ ತಮ್ಮ ಜಾತಿಯವರಿಂದ ಬಹಿಷ್ಕಾರಕ್ಕೂ ಒಳಗಾಗಿದ್ದರು. ಚಂದ್ರಯ್ಯನವರ ಮಗ ರಂಗಧಾಮನಾಯ್ಕರ ಮಗಳು ಸಿ.ಆರ್.ಕಮಲಮ್ಮ ಅವರು ಜೈನರಾದ ಹಂ.ಪ.ನಾಗರಾಜಯ್ಯ ಅವರೊಂದಿಗೆ ಮದುವೆ ಆದರು.

ಕಮಲಾ ಅವರ ವ್ಯಕ್ತಿತ್ವ ರೂಪುಗೊಳ್ಳಲು ಕಾರಣರಾದ, ಬಾಲ್ಯದಲ್ಲಿ ಅವರು ಒಡನಾಡಿದ ಮತ್ತು ಅವರ ಮನೆಯ ಮೂರು ತಲೆಮಾರನ್ನು ಕಾಯ್ದ ಜೋಗಿ ನಾಗಣ್ಣ ಅವರ ಕಥೆ ತುಂಬಾ ಕುತೂಹಲಕಾರಿಯಾಗಿ ಮೂಡಿ ಬಂದಿದೆ.

ಇಂಟರ್ಮೀಡಿಯೆಟ್‌ನಿಂದ ಪ್ರಾರಂಭಿಸಿ ಎಂ.ಎ.ವರೆಗೂ ಹಂ.ಪ.ನಾಗರಾಜಯ್ಯ ಅವರು ಕಮಲಾರವರ ಸಹಪಾಠಿಯಾಗಿದ್ದರು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಮಾಡಲು ಸೇರಿಕೊಂಡಾಗ ಅಲ್ಲಿ ಕುವೆಂಪು ಅವರೇ ಪ್ರಿನ್ಸಿಪಾಲರು. ಇದರಿಂದಾಗಿ ಕುವೆಂಪು ಅವರ ಶಿಷ್ಯೆಯಾಗಬೇಕೆಂಬ ಅವರ ಆಸೆ ನೆರವೇರಿತು. ಬಿ.ಎ. ಮತ್ತು ಎಂ.ಎ. ಓದುವಾಗ ದೇ.ಜವರೇಗೌಡರು, ಎಸ್.ವಿ.ಪರಮೇಶ್ವರ ಭಟ್ಟರು ಡಿ.ಎಲ್.ನರಸಿಂಹಾಚಾರ್, ತೀನಂಶ್ರೀ ಮುಂತಾದ ಕನ್ನಡ ವಾಙ್ಮಯಲೋಕದ ದಿಗ್ಗಜರೇ ಅವರಿಗೆ ಅಧ್ಯಾಪಕರಾಗಿದ್ದರು. ಇದು ಮುಂದೆ ಅಧ್ಯಯನ, ಸಂಶೋಧನೆ, ಸಂಪಾದನೆ, ಬರವಣಿಗೆ, ಕನ್ನಡಪರ ಹೋರಾಟಗಳಲ್ಲಿ ತೊಡಗಿಕೊಳ್ಳಲು ಹೇಗೆ ಸಹಾಯವಾಯಿತು ಎಂಬ ಬಗ್ಗೆ ವಿವರವಾಗಿಯೇ ನಿರೂಪಿಸಿದ್ದಾರೆ. ಈ ಪುಸ್ತಕ ಕಮಲಾ ಹಂಪನಾ ಅವರು ಅಕೆಡೆಮಿಕ್ ಆಗಿ ಮಾಡಿದ ಸಾಧನೆಗಳ ಒಂದು ದಾಖಲೆ ಕೂಡ ಎನ್ನಬಹುದು.

ಸಾಹಿತ್ಯ ರಚನೆಯಲ್ಲಿ ತಮ್ಮ ಆದ್ಯತೆ ಏನೆಂಬುದನ್ನು ಹೀಗೆ ಹೇಳುತ್ತಾರೆ; '...ನನಗೆ ಸಂಶೋಧನೆ ಸಂಪಾದನೆ ಮುಖ್ಯ ಊಟ. ಮಿಕ್ಕ ಸಾಹಿತ್ಯ ರಚನೆ ಊಟದ ಜೊತೆಗಿನ ವ್ಯಂಜನಗಳು'. ಅವರ ಪ್ರಾರಂಭದ ರಚನೆ ಹಳಗನ್ನಡ ಸಂಶೋಧನೆ ಮತ್ತು ಸಂಪಾದನೆಯ ಶಾಂತಿನಾಥ ಕವಿಯ ಸುಕುಮಾರ ಚರಿತೆಯ ಸಂಗ್ರಹ.

೮೫ ವರ್ಷಗಳ ಕಮಲಾ ಹಂಪನಾ ಸುಮಾರು ೬೦ ವರ್ಷಗಳ ಕಾಲ ಸತತ ಅಧ್ಯಯನ, ಸಂಶೋಧನೆಯಲ್ಲಿ ಗಳಿಸಿದ ಯಶಸ್ಸು, ಅವರ ಜೀವನಾನುಭವ ಈ ಹೊತ್ತಗೆಯಲ್ಲಿ ಸಾಕಾರಗೊಂಡಿದ್ದು, ಕಿರಿಯರಿಗೆ ಸ್ಫೂರ್ತಿ ನೀಡಿ ಒಳ್ಳೆಯ ಮಾರ್ಗ ತೋರಬಲ್ಲದು.

**-ಕೆ. ಪದ್ಮಾಕ್ಷಿ**

ಗಾಂಧಿ ಪ್ರೇಮಿ ನಮ್ಮ ತಂದೆ

**ಟಿ.ಆರ್ ರಾಧಾಕೃಷ್ಣ ಅವರ ನೆನಪಿನಲ್ಲಿ**

'ಹೊಸ ಮನುಷ್ಯ' ಓದುಗರೆಲ್ಲರಿಗೂ

ಗಾಂಧಿ ಜಯಂತಿಯ ಶುಭಾಶಯಗಳು



**–ಆರ್. ತಾರಿಣಿ ಶುಭದಾಯಿನಿ**
**ಮತ್ತು ಕುಟುಂಬ**
**ಚಿತ್ರದುರ್ಗ**

'ಹೊಸ ಮನುಷ್ಯ' ಓದುಗರಿಗೆಲ್ಲ
ಗಾಂಧಿ ಜಯಂತಿಯ ಶುಭಾಶಯಗಳು



**–ಡಾ. ಕೆ.ಪುಟ್ಟಸ್ವಾಮಿ**
ಮತ್ತು **ಕುಟುಂಬ**
**ಬೆಂಗಳೂರು**

**'ಹೊಸ ಮನುಷ್ಯ' ಓದುಗರಿಗೆಲ್ಲ**
**ಗಾಂಧಿ ಜಯಂತಿಯ ಶುಭಾಶಯಗಳು**




**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**
ಗೊಟ್ಟಿಗೆರೆ, ಬನ್ನೇರುಘಟ್ಟ
**ಬೆಂಗಳೂರು**

## ಕೊನೆಯ ಸಾಲುಗಳು



ಕಟ್ಟ ಕಡೆಯ ಮನುಷ್ಯನಿಗೆ ಲಭ್ಯವಾಗಲಾರದ್ದನ್ನು
ಬಯಸುವುದೂ ಹಿಂಸೆಯೇ ಆಗುತ್ತದೆ

-ಮಹಾತ್ಮ ಗಾಂಧಿ

*ಶುಭಾಶಯಗಳೊಂದಿಗೆ,*

**ಜಯರಾಮ ಪಾಟೀಲ**
**ಮತ್ತು ಕುಟುಂಬ**
*ಹದಜನ* (ಮೈಸೂರು)

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)